೧೯೮೮-೮೯ ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ಬಜೆಟ್ ಮೇಲೆ ಮಾತನಾಡುವಾಗ ಬಜೆಟ್ ಯಾವ ರೀತಿ ಇರಬೇಕು, ಯಾವ ರೀತಿ ಇರಬಾರದು ಎನ್ನುವುದಕ್ಕೆ ಒಂದು ನಿರ್ದೇಶನವು ವಿತ್ತ ನಿರೂಪಣೆಯಲ್ಲಿ ಇರಬೇಕು. ಅದನ್ನು ನೋಡಿದರೆ ಬಜೆಟ್ ಯಾವ ರೀತಿ ಇದೆ ಎಂದು ಮೇಲು ನೋಟಕ್ಕೆ ಗೊತ್ತಾಗುತ್ತದೆ. ಪೇಜ್ ೬ ರಲ್ಲಿ ಕನ್ಸಾಲಿಡೇಟೆಡ್ ರೆವಿನ್ಯೂ ಅಕೌಂಟ್ಸ್ ಮತ್ತು ರಸೀಟ್‌ಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ರಾಜ್ಯದ ಬೊಕ್ಕಸಕ್ಕೆ ಅಬಕಾರಿ ಇಲಾಖೆಯಿಂದ ೧೯೮೭-೮೮ರಲ್ಲಿ ೨೬೦ ಕೋಟಿ ರೂಪಾಯಿಗಳು ಬಂದಿತ್ತು. ಈ ಸಾರಿ ೨೭೬ ಕೋಟಿ ರೂಪಾಯಿಗಳು, ಅಲ್ಲಿಗೆ ೧೬ ಕೋಟಿ ರೂಪಾಯಿಗಳು ಜಾಸ್ತಿ ಬರುತ್ತದೆ. ಸೇಲ್ಸ್ ಟ್ಯಾಕ್ಸ್‌ನಿಂದ ೧೯೮೭-೮೮ರಲ್ಲಿ ೮೩೦ ಕೋಟಿ ರೂಪಾಯಿಗಳು ಬಂದಿತ್ತು. ಈ ಸಾರಿ ೯೨೧ ಕೋಟಿ ರೂಪಾಯಿಗಳು ಅಂದರೆ ೯೦ ಕೋಟಿ ರೂಪಾಯಿಗಳ ಆದಾಯ ಇದರಲ್ಲಿ ಜಾಸ್ತಿ ಬರುತ್ತದೆ. ವೆಹಿಕಲ್ ಟ್ಯಾಕ್ಸ್‌ನಿಂದ ಈ ವರ್ಷ ೧೧೫ ಕೋಟಿ ರೂಪಾಯಿಗಳು ಬರುತ್ತವೆ. ವಿದ್ಯುಚ್ಛಕ್ತಿ ತೆರಿಗೆಯಾಗಿ ಈ ವರ್ಷ ೨೫ ಕೋಟಿ ರೂಪಾಯಿಗಳನ್ನು ಜನರು ಹೆಚ್ಚಿಗೆ ಕೊಡಬೇಕಾಗಿದೆ. ವಿದ್ಯುಚ್ಛಕ್ತಿಯನ್ನು ಜನರಿಗೆ ಕಡಿಮೆ ಕೊಟ್ಟರೂ ಟ್ಯಾಕ್ಸ್ ಮಾತ್ರ ಜಾಸ್ತಿ ಹಾಕಲಾಗುತ್ತದೆ. ಇವರು ದಾರಿ ತಪ್ಪಿರುವುದು ಎಲ್ಲಿ ಎಂದರೆ, ಅಬಕಾರಿ ಇಲಾಖೆಯಿಂದ ಹೋದ ವರ್ಷ ೨೬೦ ಕೋಟಿ ರೂಪಾಯಿಗಳು ಬಂದಿತ್ತು ಈ ವರ್ಷ ೨೭೬ ಕೋಟಿ ರೂಪಾಯಿಗಳವರೆಗೆ ಆದಾಯ ಬರುತ್ತದೆಂದು ಇದರಲ್ಲಿ ತೋರಿಸಿದ್ದಾರೆ ಇದರಲ್ಲಿ ೧೬ ಕೋಟಿ ರೂಪಾಯಿಗಳು ಮಾತ್ರ ಜಾಸ್ತಿಯಾಗಿದೆ, ಇದು ತುಂಬಾ ಅನ್ಯಾಯ. ಸೆಕೆಂಡ್ಸ್ ಸೇಲ್ಸ್ ಕಂಟ್ರೋಲ್ ಮಾಡಿ ನ್ಯಾಯವಾಗಿ ವಸೂಲಿ ಮಾಡಿದರೆ ೨೬೦ ಕೋಟಿ ರೂಪಾಯಿಗಳ ಎರಡರಷ್ಟು ಹಣ ಸರ್ಕಾರಕ್ಕೆ ಬರುತ್ತದೆ. ಈ ರೀತಿ ಹಣವನ್ನು ವಸೂಲಿ ಮಾಡುವುದಕ್ಕೆ ಸರ್ಕಾರ ಏಕೆ ಪ್ರಯತ್ನ ಮಾಡುತ್ತಿಲ್ಲವೆಂದು ನಾನು ಮುಖ್ಯ ಮಂತ್ರಿಯವರು ಕೇಳುತ್ತೇನೆ. ಆಮೇಲೆ, ಮಾರಾಟ ತೆರಿಗೆಯಿಂದ ಈ ವರ್ಷ ೯೦ ಕೋಟಿ ೭೫ ಲಕ್ಷ ರೂಪಾಯಿಗಳು ಮಾತ್ರ ಜಾಸ್ತಿ ಮಾಡಿದ್ದಾರೆ. ಇದೂ ಕೂಡ ತುಂಬಾ ಅನ್ಯಾಯ. ಇದರಲ್ಲಿ ಇನ್ನೂ ಜಾಸ್ತಿ ಮಾಡಬಹುದಾಗಿತ್ತು. ಹೆಚ್ಚು ಮಾಡುವ ಉದ್ದೇಶ ಇವರಿಗಿಲ್ಲವೆಂದು ಕಾಣುತ್ತದೆ ಸೇಲ್ಸ್ ಟ್ಯಾಕ್ಸ್ ಆಫೀಸರ್‌ಗಳನ್ನೆಲಾ ದಬಾಯಿಸಿ ಪ್ರಾಮಾಣಿಕವಾಗಿ ವಸೂಲಿ ಮಾಡಿದರೆ ಸರ್ಕಾರದ ಬೊಕ್ಕಸದ ಚೀಲವನ್ನು ತುಂಬಬಹುದಾಗಿತ್ತು. ಆದರೆ, ಇವರು ಈ ಬಗ್ಗೆ ಅವರನ್ನು ಸಡಿಲವಾಗಿ ಬಿಟ್ಟು ಬಿಟ್ಟಿದ್ದಾರೆ ಆದ್ದರಿಂದ ಹೆಚ್ಚು ಆದಾಯ ಬರುತ್ತಿಲ್ಲ. ಆಮೇಲೆ ಪೋಲೀಸ್ ಇಲಾಖೆಯಿಂದ ಸರ್ಕಾರಕ್ಕೆ ೨ ಕೋಟಿ ೮೦ ಲಕ್ಷ ರೂಪಾಯಿಗಳು ಆದಾಯ ಬರುತ್ತಿತ್ತು. ಈ ವರ್ಷ ಕೇವಲ ೩ ಲಕ್ಷ ರೂಪಾಯಿಗಳು ಮಾತ್ರ ಜಾಸ್ತಿ ಬರುತ್ತದೆ. ಆಮೇಲೆ ಬಡ್ಡಿಗಳ ಮೇಲಿನ ಜಮಾ, ಇವೆಲ್ಲಾವನ್ನು ನೊಡಿದರೆ ಒಟ್ಟು ಕಂದಾಯದಲ್ಲಿ ಎಷ್ಟು ಬರಬೇಕಾಗಿತ್ತೋ ಅದಕ್ಕಿಂತ ೧೪೦ ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣ ಬರುತ್ತದೆ. ರಾಜ್ಯದಲ್ಲಿ ಅಬಕಾರಿ ಮತ್ತು ಮಾರಾಟ ತೆರಿಗೆಯಲ್ಲಿ ಬಹಳ ಸೋರಿಕೆ ಇದೆ. ಈಗ ವಸೂಲಾಗುತ್ತಿರುವ ಹಣಕ್ಕಿಂತ ಎರಡರಷ್ಟು ಹಣವನ್ನು ಈ ಎರಡು ಇಲಾಖೆಗಳಿಂದಲೇ ವಸೂಲು ಮಾಡಬಹುದಾಗಿತ್ತು. ಇಲ್ಲಿ ವಸೂಲು ಮಾಡುವುದನ್ನು ಬಿಟ್ಟು ಬೇರೆ ಕಡೆ ವಸೂಲಿ ಮಾಡಿ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಸರಿ ಮಾಡುತ್ತೇವೆಂದು ನೀವು ಹೇಳಿದರೆ ಅದನ್ನು ನಾವು ನಿಜವಾಗಿ ನಂಬುವುದಕ್ಕೆ ಆಗುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಲ್ಯಾಂಡ್ ರೆವಿನ್ಯೂ ಕಲೆಕ್ಟ್ ಮಾಡಿದರೆ ೯ ಕೋಟಿ ಬರುತ್ತದಂತೆ. ಈ ೯ ಕೋಟಿ ರೂಪಾಯಿಗಳನ್ನು ವಸೂಲಿ ಮಾಡುವುದಕ್ಕೆ ೩೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಈ ಲ್ಯಾಂಡ್ ರೆವಿನ್ಯೂವನ್ನು ಕಲೆಕ್ಟ್ ಮಾಡುವುದನ್ನು ಬಿಟ್ಟು ಬಿಟ್ಟರೆ ಏನಾಗುತ್ತದೆ? ಇದು ನಿಜವಾಗಿ ಬಹಳ ಅನ್ಯಾಯ ಸ್ವಾಮಿ. ಆಮೇಲೆ ಜಿಲ್ಲಾ ಆಡಳಿತದ ಬಗ್ಗೆ ಹೇಳಿದ್ದಾರೆ. ಜಿಲ್ಲಾ ಆಡಳಿತದಲ್ಲಿ ೧೭ ಕೋಟಿ ೮೩ ಲಕ್ಷ ರೂಪಾಯಿಗಳು ಮೊದಲು ಖರ್ಚಾಗುತ್ತಿತ್ತು, ಈಗ ೨೩ ಕೋಟಿ ರೂಪಾಯಿಗಳು ಖರ್ಚಾಗುತ್ತದೆಂದು ತಿಳಿಸಲಾಗಿದೆ ಅಂದರೆ ೫ ಕೋಟಿ ೯೬ ಲಕ್ಷ ರೂಪಾಯಿಗಳು ಜಾಸ್ತಿಯಾಗಿದೆ. ಜಿಲ್ಲೆಗಳಲ್ಲಿ ಜಿಲ್ಲಾ ಪರಿಷತ್ತುಗಳು ಬಂದ ಮೇಲೂ ಪ್ಯಾರಲಲ್ ಆಗಿ ಡಿ.ಸಿ. ಆಫೀಸ್‌ಗಳು ಇವೆ. ಈ ಖರ್ಚು ತುಂಬಾ ಅನಾವಶ್ಯಕ. ಆಮೇಲೆ, ಗೌರ್ನರ್ ಮತ್ತು ಮಂತ್ರಿ ಮಂಡಳದ ಖರ್ಚು. ಗೌರ್ನರ್ ರವರಿಗೆ ಇಷ್ಟೊಂದು ಹಣ ಏಕೆ ಖರ್ಚು ಮಾಡುತ್ತಾರೋ ನನಗಂತೂ ಗೊತ್ತಿಲ್ಲ. ಗೌರ್ನರ್‌ರವರು ಇರಬೇಕೋ ಬೇಡವೋ ಎನ್ನುವ ಪರಿಸ್ಥಿತಿ ಇವತ್ತು ಇದೆ. ಇವರಿಗೆ ೪೦ ಲಕ್ಷ ರೂಪಾಯಿಗಳು ಖರ್ಚಾಗುತ್ತಿದೆ. ಈಗ ಇನ್ನೂ ೧೬ ಲಕ್ಷ ರೂಪಾಯಿಗಳನ್ನು ಹೆಚ್ಚು ಮಾಡಿದ್ದಾರೆ. ನಾನು

ಹೇಳುವುದೇನೆಂದರೆ, ಈ ಒಂದು ಆಫೀಸ್‌ಗೆ ಎಷ್ಟು ಹಣವನ್ನು ಕೊಟ್ಟರೂ ಖರ್ಚು ಮಾಡುತ್ತಾರೆ. ಅದಕ್ಕೊಂದು ಮಿತಿ ಎಂದು ಇಲ್ಲ. ೧೬ ಲಕ್ಷ ಅಲ್ಲ. ಒಂದು ಕೋಟಿ ಕೊಟ್ಟರೂ ಖರ್ಚು ಮಾಡುತ್ತಾರೆ. ಇಂತಹ ಖರ್ಚುಗಳನ್ನು ಏಕೆ ಕಡಿಮೆ ಮಾಡಬಾರದು?

ಮಂತ್ರಿಮಂಡಳಕ್ಕೆ ೧೦ ಲಕ್ಷ ರೂಪಾಯಿಗಳನ್ನು ಜಾಸ್ತಿ ಮಾಡಿದ್ದೀರಿ. ಹತ್ತು ಜನ ಮಂತ್ರಿಗಳನ್ನು ಜಾಸ್ತಿ ಮಾಡಿದರೆ ತಲಾ ಒಂದು ಲಕ್ಷ ಜಾಸ್ತಿ ಬೇಕು ಎಂದು ಮಾಡಿದ್ದೀರಾ? ಈ ರೀತಿಯಾಗಿ ಕೆಲವೊಂದಕ್ಕೆ ಜಾಸ್ತಿ ಮಾಡಿಕೊಂಡಿದ್ದೀರಲ್ಲ ಎಜುಕೇಶನ್ ವಿಷಯದಲ್ಲಿ ಎಷ್ಟು ಜಾಸ್ತಿ ಮಾಡಿದ್ದೀರಿ? ಎಷ್ಟು ಖರ್ಚು ಮಾಡಿದ್ದೀರಿ?

(ಉಪಾಧ್ಯಕ್ಷರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ಹೋದ ಸಾರಿ ಇದ್ದುದಕ್ಕಿಂತ ಮೂರು ಕೋಟಿಗಳನ್ನು ಮಾತ್ರ ಜಾಸ್ತಿ ಮಾಡಿದ್ದೀರಿ. ಅದೇ ರೀತಿಯಲ್ಲಿ ಕ್ರೀಡಾ ಮತ್ತು ಯುವಜನ ಸೇವೆಗೆ ೧೨ ಲಕ್ಷ ರೂಪಾಯಿಗಳನ್ನು ಮಾತ್ರ ಜಾಸ್ತಿ ಮಾಡಿದ್ದೀರಿ. ಕಲೆ ಮತ್ತು ಸಂಸ್ಕೃತಿಗೆ ಕಳೆದಸಾರಿ ೧೦ ಕೋಟಿ ೧೨ ಲಕ್ಷ ಖರ್ಚು ಮಾಡಿದ್ದರೆ, ಈ ಸಾರಿ ಅದನ್ನು ೯.೨೯ ಲಕ್ಷಕ್ಕೆ ಇಳಿಸಿದ್ದೀರಿ. ಕುಟುಂಬ ಕಲ್ಯಾಣಕ್ಕೆ ಮೈನಸ್ ಮಾಡಿದ್ದೀರಿ. ನೈರ್ಮಲ್ಯ ಮತ್ತು ನೀರು ಪೂರೈಕೆಗೆ ಹೋದ ಸಾರಿ, ೬೦ ಕೋಟಿ, ೭೧ ಲಕ್ಷಗಳನ್ನು ಖರ್ಚು ಮಾಡಿದ್ದರೆ, ಇದನ್ನು ಈ ಸಾರಿ ೩.೮ ಕೋಟಿ, ೮೦ ಲಕ್ಷಕ್ಕೆ ಇಳಿಸಿದ್ದೀರಿ ನಗರಾಭಿವೃದ್ಧಿಗೂ ಕೂಡ ಕಡಿಮೆ ಮಾಡಿದ್ದೀರಿ. ಹರಿಜನ ಮತ್ತು ಗಿರಿಜನರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ೧೩ ಕೋಟಿ ರೂಪಾಯಿಗಳಷ್ಟು ಮಾತ್ರ ಇಟ್ಟಿದ್ದೀರಿ, ಅಂದರೆ, ಈ ಸಾರಿ ೧೩ ಲಕ್ಷ ರೂಪಾಯಿಗಳಷ್ಟು ಮಾತ್ರ ಜಾಸ್ತಿ ಮಾಡಿದ್ದೀರಿ. ಅದೇ ಪೌಷ್ಟಿಕ ಆಹಾರದ ವಿಚಾರದಲ್ಲಿ ಮೊದಲು ೬೨ ಕೋಟಿ ಇದ್ದುದನ್ನು ಈ ೫೪ ಕೋಟಿಗೆ ಕಡಿಮೆ ಮಾಡಿದ್ದೀರಿ. ಅಂದರೆ ಇದರಲ್ಲಿ ಕಂಡು ಬರುವುದೇನೆಂದರೆ, ಯಾವ ಯಾವ ಬಾಬುಗಳಿಗೆ ಜಾಸ್ತಿ ಮಾಡಬೇಕೋ ಅದನ್ನು ಮಾಡದೇ, ಯಾವ ಬಾಬುಗಳಿಗೆ ಜಾಸ್ತಿ ಮಾಡುವ ಅವಶ್ಯಕತೆ ಇರಲಿಲ್ಲವೋ ಅವುಗಳಿಗೆ ಜಾಸ್ತಿ ಮಾಡಿರುವುದು ಸ್ಪಷ್ಟವಾಗುತ್ತದೆ.

ಇನ್ನು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ನೋಡಿದರೆ, ಇಲ್ಲೊಂದು ವಿಪರ್ಯಾಸ ಎದ್ದು ಕಾಣುತ್ತದೆ. ಇದಕ್ಕೆ ಒಟ್ಟು ಕೊಟ್ಟಿರುವುದು ೩೦ ಕೋಟಿಗಳು ಮಾತ್ರ. ಹೋದ ಸಾರಿ ಬಜೆಟ್‌ನಲ್ಲಿ ೯೬೦ ಕೋಟಿಗಳನ್ನು ಕೊಟ್ಟಿದ್ದರು. ಈ ಸಾರಿ ಕೊಡುವಾಗ ಮೊತ್ತವನ್ನು ಸರಿಯಾಗಿ ಪರಿಶೀಲಿಸಲಿಲ್ಲ ಎಂದು ಕಾಣುತ್ತದೆ. ಈ ಸಾರಿಯ ಬಜೆಟ್‌ನಲ್ಲಿ ೯೯೦ ಕೋಟಿಗಳನ್ನು ಕೊಟ್ಟಿದ್ದಾರೆ. ಹಾಗೆಯೇ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್‌ಗೆ ೩೯೨ ಕೋಟಿಗಳು ಖರ್ಚಾಗಿವೆ. ನಾನ್‌ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್‌ಗಾಗಿ ೫೯೭ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇಷ್ಟೆಲ್ಲಾ ಇದ್ದರೂ ಕೂಡ ಗ್ರಾಮೀಣ ಅಭಿವೃದ್ಧಿಯಾಗುತ್ತಿಲ್ಲ.

ಇದರಲ್ಲಿ ಹೆಚ್ಚಿಗೆ ಸಂಬಳ ಸಾರಿಗೆಗೆ ಖರ್ಚಾಗುತ್ತಿದೆ ಎಂದು ಕಾಣುತ್ತದೆ ಆದರೂ ಕೂಡ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್‌ಗೆ ಕೊಟ್ಟಿರುವುದು ೩೦೦ ಕೋಟಿ ಮತ್ತು ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್‌ಗೆ ೬೦೦ ಕೋಟಿ ಕೊಟ್ಟಿದ್ದಾರೆ. ಹೋದ ಸಾರಿ ಇದಕ್ಕಾಗಿ ಇವರು ಕೊಟ್ಟ ಮೊತ್ತ ಬಹಳ ಕಡಿಮೆಯಾಗಿತ್ತು. ಹಾಗಾಗಿ ಅಭಿವೃದ್ಧಿ ಕಾರ್ಯಗಳು ಆಗಲೇ ಇಲ್ಲ ಈ ಸಾರಿಯಾದರೂ ಗ್ರಾಮೀಣ ಅಭಿವೃದ್ಧಿಗಾಗಿ ಹೆಚ್ಚು ಹಣವನ್ನು ಕೊಡುತ್ತಾರೆ ಎಂದು, ಇದಕ್ಕೆ ಹೆಚ್ಚಿನ ಒಂದು ಪ್ರಾಧಾನ್ಯತೆ ಸಿಗುತ್ತದೆ ಎಂದು ತಿಳಿದುಕೊಂಡಿದ್ದೆನು. ಆದರೆ ಇವೊತ್ತಿನ ದಿವಸ ೩೦ ಕೋಟಿ ರೂಪಾಯಿಗಳನ್ನು ಮಾತ್ರ ಈ ಬಾಬಿಗೆ ಜಾಸ್ತಿ ಕೊಟ್ಟಿದ್ದಾರೆ. ಇದರಿಂದಾಗಿ ಗ್ರಾಮೀಣ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ ಎಂದು ನಾನು ಹೇಳಬಯಸುತ್ತೇನೆ. I would quote from the article 'State economy in bad shape' on the Economic survey

> "The annual Economic Survey presents a bloomy picture of Karnataka's economy during 1987-88. All important economic indicators show a worsening in the current year. Provisional estimates of the Net State Domestic Product (at 1970-71 prices) show a fall of around 2 per cent from Rs. 3,338 crore in 1986-87 to Rs. 3,280 crore this year.

Argicul'ure:

In the present year, foodgrain production is expected to fall by almost 12 per cent and the fall in production of commercial crops like sugarcane. cotton. coffee will be even sharper. On the price front, while the trends in prices of agricultural commodities show a similar rising trend for both the country as a whole and Karnataka, the consumer price index for the working class shows a larger rise in the State.

Irrigation:

The production in power-intensive industries is expected to decline during the year. The number of indstrial units set up during the current year may be much less compared to last year... About 65,000 heetares of irrigation potential is anticipated to be added during the current year.''

3 30 p. m.

Economic Prcgramme Word Bank Assintance. ಅಗ್ರಿಕಲ್ಚರ್ ಹೀಗೆ ಪ್ರತಿಯೊಂದರಲ್ಲೂ ಎಂಪ್ಲಾಯ್‌ಮೆಂಟಿನಲ್ಲೂ ಕೂಡ ಕರ್ನಾಟಕದ ಪಿಕ್ಚರ್ ಗ್ಲೂಮಿ ಆಗಿದೆ, ಎಲ್ಲದರಲ್ಲೂ ಕೂಡ ಹಿಂದಕ್ಕೆ ಹೋಗುತ್ತಿದ್ದಾರೆಯೋ ಹೊರತು ಮುಂದೆ ಹೋಗುತ್ತಿಲ್ಲ, ಹಿಂದೇಟು ಹೊಡೆಯುತ್ತಿದ್ದಾರೆ. ಇದನ್ನು ನಾವು ಎಕನಾಮಿಕ್ ಸರ್ವೆಯಲ್ಲಿ ಕಾಣುತ್ತಿದ್ದೇವೆ. ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಯಾವ ರೀತಿ ನಡೆಯುತ್ತಿದೆ ಎಂದರೆ ೧೯೮೩ ರಲ್ಲಿ ಕಾಂಗ್ರೆಸ್ ಸ್ನೇತರು ರಾಜ್ಯಭಾರ ಮಾಡುತ್ತಿದ್ದಾಗ ಲಂಚ ತಾಂಡವವಾಡುತ್ತಿತ್ತು, ಅದರಲ್ಲಿ ಅನುಮಾನವಿಲ್ಲ. ಇವತ್ತು ಅದೇ ಮರು ತಾಂಡವ ಮಾಡುತ್ತಿದೆ, ಆಗ ಲಂಚ ಕೊಟ್ಟರೆ ಕೆಲಸವಾದರೂ ಆಗುತ್ತಿತ್ತು ಈಗ ಲಂಚ ಕೊಟ್ಟರೂ ಕೂಡ ಕೆಲಸವಾಗುವುದಿಲ್ಲ. ಮಾರಲ್ ಸ್ಟ್ಯಾಂಡರ್ಡ್ ಡಿಕ್ಲೀನ್ ಆಗಿದೆ. ಉದಾಹರಣೆಗೆ ಹೇಳುವುದಾದರೆ ಮಾರುಬೆನ್ ಕಂಪನಿಯುವರದ್ದೇ ಇದೆ. ಸಿರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ಏರ್ ಕಂಡೀಷನ್ಡ್ ಪ್ಲಾಂಟ್ಸ್ ಹಾಕುವುದಕ್ಕೆ ನಾಲ್ಕು ಕೋಟಿ ೩೩ ಲಕ್ಷ ಹೆಚ್ಚಿಗೆ ಟೆಂಡರ್ ಅನ್ನು ಅಕ್ಸೆಪ್ಟ್ ಮಾಡಿದರು. ಅದರಲ್ಲಿ ಸೆಕ್ರೇಟರಿಯೇಟ್‌ನಲ್ಲಿರುವ ಐ. ಎ. ಎಸ್. ಅಧಿಕಾರಿಗಳು ಭಾಗಿಗಳಾಗಿದ್ದರೂ. ಅದನ್ನೂ ಕೂಡ ಸೀರಿಯಸ್ ಆಗಿ ಇವರು ತೆಗೆದುಕೊಂಡಿಲ್ಲ. ಯಾರು ಎಷ್ಟಾದರೂ ತಿಂದುಕೊಂಡು ಹೋಗಲಿ ಹಾಳಾಗಿ ಹೋಗಲಿ ಎಂದು ಬಿಟ್ಟಿದ್ದಾರೆ. ಇವತ್ತು ಎಲ್ಲಾ ರಂಗಗಳಲ್ಲೂ ಕೂಡ ಲಂಚ ತಾಂಡವಾಡುತ್ತಿದೆ. ಹಿಂದೆ ಮಾನ್ಯ ಗುಂಡೂರಾವ್ ದರ್ಬಾರಿನಲ್ಲಿ ಕೆಲಸವಾದರೂ ಆಗುತ್ತಿತ್ತು ಅವರು ಚೀಫ್ ಇಂಜಿನಿಯರ್ ಒಬ್ಬರನ್ನೋ ಇಬ್ಬರನ್ನೋ ಹಿಡಿದು ಬಲಿ ಹಾಕುತ್ತಿದ್ದರು. ಮೊನ್ನೆ ಒಂದು ಸಲ ನಾನು ಮಿನಿಸ್ಟರ್ ರವರ ಕಛೇರಿಯಲ್ಲಿ ಕುಳಿತಿದ್ದೆ ಆಗ ಒಬ್ಬರು ಮಾನ್ಯ ಮಂತ್ರಿಗಳಿಗೆ ದೂರವಾಣಿ ಮಾಡಿ ಇಲ್ಲಿ ಒಬ್ಬ ದೊಡ್ಡ ಅಧಿಕಾರಿಯಿದ್ದಾನೆ ಅವನ ಮನೆಯಲ್ಲಿ ಮೂಟೆಗಟ್ಟಲೆ ನೂರು ರೂಪಾಯಿಗಳು ಇದೆ ನನಗೆ ೧೫ ಪರ್ಸೆಂಟ್ ಕೊಡುವ ಹಾಗಿದ್ದರೆ ಹಿಡಿದುಕೊಡುತ್ತೇನೆಂದು ಹೇಳಿದರು. ಮಾನ್ಯ ಮಂತ್ರಿಗಳು ನನಗೇಕೆ ಇದರ ಜವಾಬ್ದಾರಿ ಯಾವುದೂ ಬೇಡವೆಂದು ಹೇಳುತ್ತಿದ್ದರು. ಎಲ್ಲರೂ ಕೂಡ ಲಂಚ ತೆಗೆದುಕೊಳ್ಳುವುದಿಲ್ಲ ಬೇಕಾದಷ್ಟು ಜನ ಒಳ್ಳೆಯವರಿದ್ದಾರೆ. ದುರದೃಷ್ಟವಶಾತ್ ನಮ್ಮಲ್ಲಿ ಇಂದು ಲಂಚಾವತಾರ ತುಂಬಿ ತುಳುಕಾಡುತ್ತಿದೆ. ಈ ರೀತಿಯಾದರೆ ನಾವು ಯಾವ ಸ್ಟೇಜ್‌ಗೆ ಹೋಗುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಇನ್ನು ಪಬ್ಲಿಕ್ ಅಂಡರ್ ಟೇಕಿಂಗ್ಸ್ ಬಗ್ಗೆ ಹೇಳುವುದಾದರೆ ಅಲ್ಲಿ ಕೆಲವು ಹೆಗ್ಗಣಗಳು ಸೇರಿಕೊಂಡು ಅಲ್ಲಿರುವ ಬಂಡವಾಳವನ್ನು ನುಂಗಿರುವುದುಂಟು. ಹೀಗೆ ನಡೆದರೆ ಕರ್ನಾಟಕವನ್ನು ಹೇಗೆ ಉದ್ಧಾರ ಮಾಡುವುದಕ್ಕೆ ಸಾಧ್ಯವೆನ್ನುವುದನ್ನು ಯೋಚನೆ ಮಾಡಬೇಕು. ಪಬ್ಲಿಕ್ ಎಂಟರ್ ಪ್ರೈಸಸ್ ಆನ್ಯುಯಲ್ ವರದಿಯಲ್ಲಿನ ೧೪ನೇ ಪುಟದಲ್ಲಿ ೧೯[illegible]-೮೭ ರಲ್ಲಿ [illegible]೮೦೦ ಕೋಟಿ ೫೮ ಲಕ್ಷ

ರೂಪಾಯಿ ಬಂಡವಾಳವಿದ್ದು ಅಕ್ಯುಮುಲೇಟೆಡ್ ಲಾಸಸ್ ೩೧೬ ಕೋಟಿ ೬೩ ಲಕ್ಷ ಇದೆ. ಈ ರೀತಿಯಾದರೆ ಕರ್ನಾಟಕವನ್ನು ಹೇಗೆ ಅಭಿವೃದ್ಧಿ ಮಾಡುತ್ತೇವೆ ? ಅಭಿವೃದ್ಧಿ ಪಥದಲ್ಲಿ ತೆಗೆದುಕೊಂಡು ಹೋಗುತ್ತೇವೆಂದು ಹೇಗೆ ಹೇಳುವುದು. ಕನ್‌ಸಾಲಿಡೇಟೆಡ್ ಲಾಸ್ ಅಷ್ಟಾದರೆ ಇಯರ್ಲಿ ಲಾಸ್ ಬಗ್ಗೆ ಕೂಡ ಹೇಳಿದ್ದಾರೆ ಅದನ್ನು ತೆಗೆದುಕೊಂಡರೆ ಈ ವರ್ಷ ೪೨ ಕೋಟಿ ೬೨ ಲಕ್ಷ ಬರುತ್ತದೆ. ಎ.ಐ.ಎಸ್.ಎಲ್. ೩೨ ಕೋಟಿ, ಕೆ.ಇ.ಬಿ. ೨೬ ಕೋಟಿ ಕೆ.ಎಸ್.ಆರ್.ಟಿ.ಸಿ. ೧೪ ಕೋಟಿ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್‌ನಲ್ಲಿ ೪ ಕೋಟಿ ೯೩ ಲಕ್ಷ, ಈ ರೀತಿ ಇದೆ. ಒಟ್ಟು ೪೨ ಕೋಟಿಗೆ ಬಂತು ಕರ್ನಾಟಕದಲ್ಲಿ ನಿಜವಾಗಿಯೂ ಇದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲವೇ ? ತಪ್ಪಿಸುವುದಕ್ಕೆ ಸಾಧ್ಯವುಂಟು ಆದರೆ ಅದಕ್ಕೆ ಇವರಲ್ಲಿ ಪೊಲಿಟಿಕಲ್ ವಿಲ್ ಇಲ್ಲ, ಮಾನ್ಯ ರಮೇಶ್‌ಕುಮಾರ್‌ರವರನ್ನು ನಿಜವಾಗಿಯೂ ಅಭಿನಂದಿಸಬೇಕು. ಮೈಸೂರು ಸಕ್ಕರೆ ಕಾರ್ಖಾನೆ ಲಾಸ್‌ಗೆ ಯಾರು ಕಾರಣ ? ಮೈಸೂರು ಲ್ಯಾಕ್ ಅಂಡ್ ಪೇಂಟ್ಸ್‌ಗೆ ಯಾರು ಕಾರಣ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಲೆಜಿಸ್ಲೇಚರ್ ಕಮಿಟಿ ರಿಪೋರ್ಟ್‌ನಲ್ಲಿ ಕೂಡ ಪಬ್ಲಿಕ್ ಅಂಡರ್ ಟೇಕಿಂಗ್ ಬಗ್ಗೆ ಹೇಳುತ್ತಾರೆ. ಈ ಲಾಸ್‌ಗೆ ಅಧಿಕಾರಿಗಳ ದುರ್ವರ್ತನೆಯಿಂದಾಗಿ ಹಣ ದುರುಪಯೋಗವಾಗಿದೆ ಎಂದು ಹೇಳುತ್ತಾರೆ. ಆದರೆ ನಾವು ಮಾಡುವುದು ಏನು ? ಆ ವರದಿಯನ್ನು ತರುವುದು, ಇಲ್ಲವೇ ಅದು ಪೇಪರ್‌ನಲ್ಲಿ ಬರುತ್ತದೆ, ಇಷ್ಟು ಬಿಟ್ಟರೆ ಏನೂ ಅಲ್ಲಿ ನಡೆಯುತ್ತಿಲ್ಲ.

ಇನ್ನು ವಿದ್ಯಾ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ ಅದನ್ನು ಬಹಳ ಸಂಕಟದಿಂದ ಹೇಳಬೇಕಾಗುತ್ತದೆ. ಕಾಂಗ್ರೆಸ್‌ನವರ ಕಾಲದಲ್ಲಿ ನೂರು ಸಂಸ್ಥೆಗೆ ಪರವಾನಗಿ ಕೊಟ್ಟರೆ ಇವರ ಕಾಲದಲ್ಲಿ ೪೦೦ ಸಂಸ್ಥೆಗೆ ಅನುಮತಿ ಕೊಟ್ಟು ರಾಜಮಹಾರಾಜರಾಗಿದ್ದಾರೆ. ಜೊತೆಗೆ ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು. ಪ್ರೈವೇಟ್ ಸ್ಕೂಲ್ಸ್ ನಡೆಸುವವರೂ ಕೆಲವರು ಇದ್ದಾರೆ. ಅವರೆಲ್ಲಾ ಮಹಾರಾಜರು ಒಬ್ಬೊಬ್ಬನಿಗೆ ೫ ಸಾವಿರ ಕೊಟ್ಟರೂ ಕೂಡ ಸೀಟು ಸಿಗುವುದಿಲ್ಲ. ಇವರಿಂದ ಈ ರಾಜಮಹಾರಾಜರನ್ನು ಕಂಟ್ರೋಲ್ ಮಾಡುವುದಕ್ಕಾಗುತ್ತಿಲ್ಲ.
ಇವರು ಕೂಡಾ ನಮ್ಮ ಅಣ್ಣತಮ್ಮಂದಿರು ಕಾಂಗ್ರೆಸ್ಸಿಗರ ಒಂದು ದಾರಿಯಲ್ಲಿ ಹೋಗಿ ಈ ವಿದ್ಯಾ ವ್ಯವಸ್ಥೆಯನ್ನು ಖಾಸಗೀಯವರಿಗೆ ಮಾರಿದ್ದಾರೆ. ಅವರಿಗೆ ಸ್ವಾಯತ್ತತೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ಅದು ಕೂಡಾ ಕೇಳಿಬಂದಿದೆ. ಸ್ವಾಯತ್ತತೆ ಏನಾದರೂ ಕೊಟ್ಟುಬಿಟ್ಟರೆ ಅವರೆಲ್ಲರೂ ಸಾಮ್ರಾಜ್ಯಶಾಹಿಗಳಾಗಿ ಬಿಡುತ್ತಾರೆ. ೫ ಸಾವಿರ ರೂಪಾಯಿ ಡೊನೇಷನ್ ತೆಗೆದುಕೊಂಡು ೫೦ ರೂಪಾಯಿ ರಸೀತಿ ಕೊಡತಕ್ಕಂಥದ್ದು, ಇಂತಹ ಒಂದು ಪರಿಸ್ಥಿತಿಯ ಕಾಲ ಬಂದಿದೆ. ಇನ್ನು ಆಸ್ಪತ್ರೆಗಳ ಬಗ್ಗೆ ಗಮನಿಸಿದರೆ ನಮ್ಮಲ್ಲಿ ಪ್ರೆಸ್ಟೀಜಿಯಸ್ ಇನ್‌ಸ್ಟಿಟ್ಯೂಷನ್‌ಗಳು ಇವೆ. ಬೌರಿಂಗ್ ಆಸ್ಪತ್ರೆ ಇದೆ, ಇದಕ್ಕಾದರೂ ದುಡ್ಡು ಕೊಟ್ಟಿದ್ದೀರಾ ? ೨೦೦ ದಾದಿಯರು ಇರಬೇಕು. ಕೊಟ್ಟಿರುವುದು ಎಷ್ಟು ಎಂದು ಹೇಳಿದರೆ ೧೦೦ ಜನ ಮತ್ತೆ ಅದರಲ್ಲಿ ೨೫ ಜನ ವಿತ್ ಡ್ರಾ ಮಾಡಿಕೊಂಡು ಟ್ರೈನಿಂಗ್ ಎಂದು ಕಳುಹಿಸುತ್ತಾರೆ. ಅದೇ ರೀತಿ ಅಲ್ಲಿ ಏನಾದರೂ ಡಾಕ್ಟರ್‌ಗಳನ್ನು ಕೊಟ್ಟಿದ್ದೀರಾ ಎಂದರೆ ಅದನ್ನು ಕೂಡಾ ಕೊಡುತ್ತಿಲ್ಲ. ಇಂಥ ಒಂದು ಪರಿಸ್ಥಿತಿಯೇ ಕಂಟಿನ್ಯೂ ಆದರೆ ಹೇಗೆ ?

ಉಪಾಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ಇದು ಸಾಮಾನ್ಯ ಚರ್ಚೆಯಾಗುವುದರಿಂದ ಬೇಡಿಕೆಯ ಮೇಲೆ ಚರ್ಚೆ ಬಂದಾಗ ದೀರ್ಘವಾಗಿ ಚರ್ಚೆ ಮಾಡಬಹುದು. ಇದು ಸಾಮಾನ್ಯ ಚರ್ಚೆ.

ಶ್ರೀ ಆರ್. ವೆಂಕಟರಾಮಯ್ಯ.—ಶ್ರೀ ಎ. ಲಕ್ಷ್ಮೀಸಾಗರ್ ಮತ್ತು ಮಾನ್ಯ ರಘುಪತಿಯವರು ಇಬ್ಬರೂ ಇದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ವೆಂಕಟರಾಮಯ್ಯನವರು ತುಂಬಾ ಬುದ್ಧಿವಂತರು, ಅನುಭವಸ್ಥರು, ತಿಳುವಳಿಕೆಸ್ಥರು, ನಾನು ಅವರಷ್ಟು ಮಾನಸಿಕವಾಗಿ ಬುದ್ಧಿವಂತನಾಗಿಲ್ಲ ಎನ್ನುವುದನ್ನು ಮೊದಲು ಒಪ್ಪಿಕೊಂಡು ಬಿಡುತ್ತೇನೆ. ಆದರೆ ನಾನು ಇಲ್ಲಿ ಸಾಮಾನ್ಯ ಚರ್ಚೆ ಎಂದು ಹೇಳಿದೆ ಅಷ್ಟೆ. ಮಾನ್ಯ ಮುಖ್ಯಮಂತ್ರಿಯವರು ಆಯವ್ಯಯ ಪಟ್ಟಿಯ ವಿಚಾರದಲ್ಲಿ ಭಾಷಣ ನೀಡಿದ್ದಾರೆ. ಅದರಲ್ಲಿ ಈ ರಾಜ್ಯದ ಮುಂದಿನ ವರ್ಷದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಸರ್ಕಾರ ಹಣ ಯಾವ ರೀತಿ ಉಪಯೋಗ ಮಾಡಿದೆ, ಹಿಂದಿನ ವರ್ಷ ಉಪಯೋಗ ಮಾಡಿದ್ದನ್ನು ಸರಿಯಾಗಿ ಖರ್ಚು ಮಾಡಿದೆಯೋ ? ಆರ್ಥಿಕ ಕ್ಲಿಷ್ಟ ಪರಿಸ್ಥಿತಿ ಉದ್ಭವಿಸತಕ್ಕಂಥ ಪರಿಸ್ಥಿತಿ ಬಂದರೂ ಇದನ್ನು ಸರಿದೂಗಿಸಿಕೊಂಡು ಹೋಗತಕ್ಕಂಥ ಬಜೆಟನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದರ ಬಗ್ಗೆ ಪ್ರಸ್ತಾಪ ಮಾಡತಕ್ಕಂಥದ್ದು ಸರ್ವವಿಧಿತ

ವಾದುದು, ಇದು ಅನುಚಾನವಾಗಿ ನಡೆದುಕೊಂಡು ಬಂದಿರತಕ್ಕಂಥದ್ದು, ಇಲಾಖೆಗಳ ಮೇಲೆ ಮಾತನಾಡತಕ್ಕಂಥ ಸಮಯದಲ್ಲಿ ಅದರಲ್ಲಿ ಆಗತಕ್ಕಂಥ ಕುಂದುಕೊರತೆಗಳ ಬಗ್ಗೆ ಮಾತನಾಡಿ. ಇಷ್ಟನ್ನು ಮಾತ್ರ ಸನ್ಮಾನ್ಯ ವೆಂಕಟರಾಮಯ್ಯನವರಿಗೆ ಹೇಳಿ ಎಂದು ಹೊಳಿದೆ. ಗಂಟ್ಟಾಗಿ ಇಲ್ಲೇನು ನಡೆಯುವುದಕ್ಕೆ ಸಾಧ್ಯ ಇಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಅದರ ಬಗ್ಗೆ ಡಿಸ್‌ಪ್ಯೂಟ್ ಮಾಡುತ್ತಿಲ್ಲ. ಮಾನ್ಯ ಲಕ್ಷ್ಮೀಸಾಗರ್ ಅವರು ಸ್ವಲ್ಪ ತಕರಾರು ಕಂಪನಿ, ಪ್ರೊಫೆಸರ್ ಬೇರೆ. ಆಸ್ಪತ್ರೆಗಳ ಬಗ್ಗೆ ಹೇಳುತ್ತಿದ್ದೆ. ವಿಕ್ಟೋರಿಯಾ ಆಸ್ಪತ್ರೆಗೆ ಹೋಗುವ ಹಾಗೆಯೇ ಇಲ್ಲ, ವಿಕ್ಟೋರಿಯಾ ಆಸ್ಪತ್ರೆಗೆ ಹೋಗುವವರು ದುಡ್ಡು ಇದ್ದರೆ, ಇನ್‌ಫ್ಲೂಯೆನ್ಸ್ ಇದ್ದರೆ ಹೋಗಬಹುದು. ಇಲ್ಲದಿದ್ದರೆ ಅದು ದೊಡ್ಡಿ. ಖಾಯಿಲೆ ಏನಾದರೂ ಇದ್ದರೆ ಇದು ಜಾಸ್ತಿಯಾಗಿಬಿಡುತ್ತದೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ನಿಮಗೆ ಎರಡೂ ಇದೆ, ಇನ್‌ಫ್ಲೂಯೆನ್ಸ್ ಇದೆ, ದುಡ್ಡೂ ಇದೆ.

ಶ್ರೀ ಆರ್. ವೆಂಕಟರಾಮಯ್ಯ.—ನಮಗೇನೋ ಬಿಡಿ. ಇಲ್ಲದೇ ಇರುವವರ ಗತಿಯೇನು? ನಮಗೆ ಪ್ರೈವೇಟ್ ನರ್ಸಿಂಗ್ ಹೋಂಗಳು ಇಲ್ಲವೇ? ಬೇಕಾದಷ್ಟು ಇವೆ, ಅವರು ನೋಡಿಕೊಳ್ಳುತ್ತಾರೆ. ಬಜೆಟ್‌ನಲ್ಲಿ ಯಾವ ಒಂದು ಐಟಂಗೆ ಎಷ್ಟೆಷ್ಟು ಎಂದು ಕೊಟ್ಟಿದ್ದಾರೆ, ಇದರಿಂದ ಏನೇನು ಪ್ರಯತ್ನ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂದು ನಾವು ಯೋಚನೆ ಮಾಡಬೇಕು. ಇನ್ನು ವ್ಯವಸಾಯದ ಬಗ್ಗೆ ನೋಡುವುದಾದರೆ ಇಲ್ಲಿ ಯಾವ ರೀತಿಯಲ್ಲೂ ಅಭಿವೃದ್ಧಿಯಾಗುವ ಸಾಧ್ಯತೆ ಇಲ್ಲ, ತಮಗೆ ಗೊತ್ತಿದೆ, ಆದರೆ ದುರಾದೃಷ್ಟವಶಾತ್ ಅವರು ಕೊಟ್ಟಿರುವುದು ಏನು ಎಂದು ನೋಡಿದರೆ ವ್ಯವಸಾಯ ರಂಗಕ್ಕೆ ಕೊಟ್ಟಿರುವುದು ಎಂದರೆ ಸುಮಾರು ೩೨ ಕೋಟಿ ರೂಪಾಯಿಗಳನ್ನು ಜಾಸ್ತಿ ಕೊಟ್ಟಿದ್ದಾರೆ. ಇನ್ನು ವಿದ್ಯುಚ್ಛಕ್ತಿಗೆ ಯಾವ ಒಂದು ಇಂಪ್ರೂವ್‌ಮೆಂಟ್ ಇಲ್ಲ. ಎಲ್ಲಿ ನೋಡಿದರೂ ಕೂಡಾ ವಿದ್ಯುತ್ ಇಲ್ಲದೇ ತೊಂದರೆಯಾಗಿದೆ. ಯಾವ ಒಂದು ಸೆಕ್ಟರ್‌ಗೆ ಇವರು ಹೆಚ್ಚಿನ ಆದ್ಯತೆ ಕೊಡಬೇಕಾಗಿತ್ತೋ ಅದಕ್ಕೆ ಕೊಟ್ಟಿಲ್ಲ. ವಿದ್ಯುತ್ ವಲಯಕ್ಕೆ ಇವರು ಕಳೆದ ಸಲ ೩೫೩.೬೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ ಈ ಸಲ ೩೭೩.೨೬ ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಅಂದರೆ ಕೇವಲ ೨೦ ಲಕ್ಷ ರೂಪಾಯಿಗಳನ್ನು ಜಾಸ್ತಿ ಮಾಡಿದ್ದಾರೆ, ಇವೊತ್ತು ವಿದ್ಯುತ್ ಇಲ್ಲದೆ ಯಾವ ಕೆಲಸಗಳನ್ನು ಸಹ ನಾವು ಮಾಡುವುದಕ್ಕಾಗುವುದಿಲ್ಲ ಇದನ್ನು ಗಮನದಲ್ಲಿಟ್ಟುಕೊಂಡು ಈ ಕ್ಷೇತ್ರಕ್ಕೆ ಹೆಚ್ಚು ಹಣ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ವಿದ್ಯುತ್ ಇಲ್ಲದ ಕಾರಣ ಬೆಂಗಳೂರು ನಗರದಲ್ಲಿ ಯಾರೂ ಸಹ ಹೊಸ ಹೊಸ ಕೈಗಾರಿಕೆಗಳನು ಸ್ಥಾಪನೆ ಮಾಡಲು ಮುಂದೆ ಬರುತ್ತಿಲ್ಲ. ಹೊಸ ಕೈಗಾರಿಕೆಗಳು ಹೊಸೂರು ಮತ್ತು ಹಿಂದೂಪುರಗಳಲ್ಲಿ ಪ್ರಾರಂಭವಾಗುತ್ತಿವೆ ಎಂದು ಮಾನ್ಯ ಲಕ್ಷ್ಮೀನರಸಿಂಹಯ್ಯನವರಿಗೂ ಸಹ ಗೊತ್ತು, ಇದರ ಜೊತೆಗೆ ಇವರು ನೀರಾವರಿ ಯೋಜನೆಗಳ ಕಡೆಗೂ ಹೆಚ್ಚಿನ ಗಮನ ಕೊಟ್ಟಿಲ್ಲ. ತೆಲಗುಗಂಗಾ ಯೋಜನೆಗೆ ನೀರನ್ನು ಬಿಡಬಾರದೆಂದು ನಾವು ಹೇಳುತ್ತೇವೆ. ಈ ಬಗ್ಗೆ ನಾವು ಭೂಮಂತ್ರ ಹಾಕುವುದಕ್ಕೆ ಆಗುತ್ತದೆಯೇ? ನಾವು ನಮ್ಮ ಯೋಜನೆಗಳನ್ನು ಜಾಗ್ರತೆ ಮುಗಿಸದಿದ್ದರೆ ಅವರೇ ನಮ್ಮ ಪಾಲಿನ ನೀರನ್ನು ಸಹ ಉಪಯೋಗಿಸಿಕೊಳ್ಳುತ್ತಾರೆ. ಈಗಿನ ರೀತಿಯಲ್ಲಿಯೇ ಹಣವನ್ನು ಒದಗಿಸಿದರೆ ನಮ್ಮ ಯೋಜನೆಗಳನ್ನು ಮುಗಿಸಲು ಇನ್ನು ೭೦ ವರ್ಷಗಳು ಬೇಕಾಗುತ್ತದೆಂದು ಮಾನ್ಯ ದೇವೇಗೌಡರು ಹೇಳಿದರು ಆದರೆ ನನ್ನ ಲೆಕ್ಕದಲ್ಲಿ ಇನ್ನೂ ಹೆಚ್ಚು ಸಮಯ ಬೇಕಾಗುತ್ತದೆ. ಅಷ್ಟರಲ್ಲಿ ಅವರು ತೆಲಗುಗಂಗಾ ಯೋಜನೆಯನ್ನು ಮುಗಿಸಿ ಇನ್ನೊಂದು ಹೊಸ ಯೋಜನೆಯನ್ನು ಪ್ರಾರಂಭ ಮಾಡುತ್ತಾರೆ. ಈ ಹಿನ್ನೆಲೆಯಲ್ಲಿ ಇವರು ನಮ್ಮ ಯೋಜನೆಗಳನ್ನು ಮುಗಿಸಲು ಹೆಚ್ಚಿನ ಕಾಳಜಿ ವಹಿಸಿಲ್ಲವೆಂದು ಹೇಳಬೇಕಾಗುತ್ತದೆ. ಈ ಬಡ್ಜೆಟ್ ನೋಡಿದರೆ ಸಂಕಟವಾಗುತ್ತದೆ. ನಮ್ಮಲ್ಲಿರುವಂತಹ ಅನುಕೂಲಗಳನ್ನು ಸಕಾಲದಲ್ಲಿ ಉಪಯೋಗಿಸಿಕೊಳ್ಳಲು ಇವರ ಕೈಯಲ್ಲಿ ಆಗುತ್ತಿಲ್ಲ. ಈ ರೀತಿ ಹಣ ಒದಗಿಸಿದರೆ ಯಾವ ಅಭಿವೃದ್ಧಿ ಕೆಲಸಗಳನ್ನು ಸಹ ಸಕಾಲದಲ್ಲಿ ಮುಗಿಸಲು ಸಾಧ್ಯವಾಗುವುದಿಲ್ಲ. ವಿದ್ಯುತ್ ಜೊತೆಗೆ ರಸ್ತೆಗಳ ಅಭಿವೃದ್ಧಿಗೂ ಸಹ ಹೆಚ್ಚಿನ ಹಣ ಒದಗಿಸಿಲ್ಲ. ರಾಷ್ಟ್ರೀಯ ಹೆದ್ದಾರಿ-ಳನ್ನು ಬಿಟ್ಟು ಇನ್ನಿತರ ರಸ್ತೆಗಳ ಅಭಿವೃದ್ಧಿಗೆ ಹೆಚ್ಚು ಹಣ ಒದಗಿಸಿಲ್ಲ. ಸ್ಟೇಟ್-ಹೈವೇಸ್‌ಗೆ, ಮೇಜರ್ ಡಿಸ್ಟ್ರಿಕ್ಸ್ ರೋಡ್ಸ್‌ಗೆ, ರೈಲ್ವೇ ರೋಡ್ಸ್‌ಗೆ ಹೆಚ್ಚು ಹಣ ಕೊಟ್ಟಿಲ್ಲ. ಹೋದ ವರ್ಷ ಒಂದೂ ಸಹ ಹೊಸ ಕೆಲಸ ಆಗಲಿಲ್ಲ. ಒಂದು ಕಿಲೋಮೀಟರ್ ರಸ್ತೆಗೆ ೧೦ ಸಾವಿರದಿಂದ ೧೫ ಸಾವಿರದವರೆಗೆ ಹಣ ಕೊಟ್ಟಿದ್ದರೂ ಸಹ ಹೋದ ವರ್ಷ ಒಂದು ಕೆಲಸ ಸಹ ಆಗಲಿಲ್ಲ. ಈ ವರ್ಷವಾದರೂ ಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ. ಹಳ್ಳಿಹೆದ್ದಾರಿ

ಕೆಲಸವನ್ನು ಸಹ ಇವರು ಪೂರ್ತಿ ಮರೆಯುತ್ತಿದ್ದಾರೋ ಏನೋ ಗೊತ್ತಿಲ್ಲ. ಕರ್ನಾಟಕ ರಾಜ್ಯದ ಅಭಿವೃದ್ಧಿ ಆಗಬೇಕೆಂದು ಹೇಳುವಾಗ ಯಾವುದಕ್ಕೂ ಸರಿಯಾಗಿ ಇವರು ಹಣವನ್ನು ಕೊಟ್ಟಿಲ್ಲ ಬಡವರ ಬಗ್ಗೆ ತಮಗೆ ಹೆಚ್ಚಿನ ಕಾಳಜಿ ಇದೆ ಎಂದು ಹೇಳುತ್ತಾರೆ. ಆದರೆ ಶೇಕಡ ೨೦ ರಿಂದ ೨೫ರಷ್ಟು ಇರುವ ಕೃಷಿ ಕಾರ್ಮಿಕರ ಬಗ್ಗೆ ಇವರು ಬಡ್ಜೆಟ್‌ನಲ್ಲಿ ಏನನ್ನೂ ಹೇಳಿಲ್ಲ. ಇವರು ನಮ್ಮ ಸಮಾಜದಲ್ಲಿ ಬಹಳ ತುಳಿತಕ್ಕೆ ಸಿಕ್ಕಿದ್ದಾರೆ. ಅದೇ ಕೇರಳಾದಲ್ಲಿ ೬೦ ವರ್ಷಗಳಾಗಿರುವ ಕೃಷಿ ಕಾರ್ಮಿಕರಿಗೆ ತಿಂಗಳಿಗೆ ೬೦ ರೂಪಾಯಿಗಳ ಪ್ರಕಾರ ನಿವೃತ್ತಿ ವೇತನ ಕೊಡುತ್ತಾರೆ. ಆದರೆ ಇಲ್ಲಿ ಇವರು ಇವರ ಬಗ್ಗೆ ಸ್ವಲ್ಪವಾದರೂ ಯೋಚನೆ ಮಾಡಿಲ್ಲ. ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಮಾತ್ರ ರಿಯಾಯಿತಿ ದರದಲ್ಲಿ ಧ್ಯಾನಗಳನ್ನು ಕೊಡುತ್ತೇವೆಂದು ಇದರಲ್ಲಿ ಹೇಳಿದ್ದಾರೆ. ಖಾಲಿ ನಿವೇಶನಗಳ ಮೇಲೆ ತೆರಿಗೆ ಹಾಕುವುದು ಸರಿಯಲ್ಲವೆಂದು ನಾನು ನಿನ್ನೆ ಸಹ ಹೇಳಿದೆ. ಇದರಿಂದ ೨೧ ಕೋಟಿ ರೂಪಾಯಿಗಳಷ್ಟು ಆದಾಯ ಬರುತ್ತದೆಂದು ಹೇಳಿದ್ದಾರೆ. ಈ ವರ್ಷ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬೇಕಾದ ಕಾರಣ ಈ ತೆರಿಗೆ ಹಾಕುವುದು ಸರಿಯೋ ಎಂಬುದನ್ನು ಮಾನ್ಯ ನಗರಾಭಿವೃದ್ಧಿ ಸಚಿವರು ಮತ್ತು ಬಿ.ಡಿ.ಎ. ಸಚಿವರು ಯೋಚನೆ ಮಾಡಬೇಕು. ೪೦ ಅಡಿ ಮತ್ತು ೬೦ ಅಡಿ ಸೈಟ್‌ಗಳು ಇರುವವರಿಗೂ ಈ ತೆರಿಗೆಯಿಂದ ವಿನಾಯಿತಿ ಕೊಡಬೇಕು. ಇಲ್ಲದಿದ್ದರೆ ಇದೊಂದು ಕರಾಳ ಶಾಸನವಾಗಿ ಬಿಡುತ್ತದೆ ಆದ್ದರಿಂದ ಇದಕ್ಕೆ ಸ್ವಲ್ಪವಾದರೂ ರಿಯಾಯಿತಿ ಕೊಡಬೇಕೆಂದು ಸ್ಪಷ್ಟವಾಗಿ ಹೇಳುತ್ತೇನೆ.

ನಾನು ರೈತರ ವಿಚಾರವನ್ನು ನಿನ್ನೆ ಹೇಳಿದೆ. ರೈತರ ಸಾಲ ಬಡ್ಡಿ, ಸುಸ್ತಿ ಬಡ್ಡಿ ಬಗ್ಗೆ ನಾನು ಮತ್ತೆ ರಿಪೀಟ್ ಮಾಡಿ ಹೇಳುವುದೇನೆಂದರೆ, ಅದನ್ನು ವಸೂಲು ಮಾಡಬೇಡಿ. ೩೦-೬-೧೯೮೪ರ ವರೆಗೆ ಇದರ ಅವಧಿಯನ್ನು ಎಕ್ಸ್‌ಟೆಂಡ್ ಮಾಡಬೇಕು ಎಂದು ಕೇಳುತ್ತೇನೆ. ಇನ್ನು ಒಂದು ವಿಷಯವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅದು ಏನೆಂದರೆ, ಇಂತಹ ಬಡ್ಜೆಟ್ ಪ್ರಸೆಂಟ್ ಮಾಡುತ್ತೀರಿ, ಇಷ್ಟು ಖರ್ಚು ಮಾಡುತ್ತೀರಿ ಎನ್ನುವುದು ಮುಖ್ಯವಲ್ಲ. ನಿಮಗೆ ಪೊಲಿಟಿಕಲ್ ವಿಲ್ ಬೇಕು. ಇಲ್ಲಿರತಕ್ಕ ರಾಜಕೀಯ ಮುಖಂಡರು ಏನಿದ್ದೀರಿ, ನೀವು ನಿಮ್ಮ ಅಧಿಕಾರಿಗಳಿಗೆ ಹೇಳುವಾಗ, ನಿಮ್ಮ ಕೈ ಶುದ್ಧವಾಗಿದ್ದರೆ, ನಿಮ್ಮ ಮಾತು ಶುದ್ಧವಾಗಿದ್ದರೆ ನಿಮ್ಮ ಮಾತು ಅಧಿಕಾರಿಗಳ ಹತ್ತಿರ ಕ್ರಮ ಜರುಗುತ್ತದೆ. ಅವರು ವಸೂಲು ಮಾಡುವುದಕ್ಕೂ ಆಗುತ್ತದೆ. ಇಲ್ಲದೇಹೋದರೆ, ಅವರು ಯಾರಿಗಾದರೂ ಹೇಳಿಕೊಂಡು ಹೋಗಲಿ, ನಾನು ಅದನ್ನು ಕೇರ್ ಮಾಡಬೇಕಾಗಿಲ್ಲ ಎಂದು ಅಧಿಕಾರಿಗಳು ಇರತಕ್ಕ ಪರಿಸ್ಥಿತಿ ಇದೆ. ಅದು ತಪ್ಪಬೇಕು, ಜಾಸ್ತಿ ವಸೂಲಾಗಬೇಕು, ಅಂದರೆ ನೀವು ಅವರ ಹತ್ತಿರ ನ್ಯಾಯವಾಗಿ ನಡೆದುಕೊಳ್ಳಬೇಕು. ಈಗ ಕೆಲವು ಐಟಮ್ಸ್ ತೋರಿಸುತ್ತೇನೆ. ನಿಮ್ಮ ಅಧಿಕಾರಿವರ್ಗ ಯಾವರೀತಿ ನಡೆಸುತ್ತಿದ್ದಾರೆ ಎಂದು ಹೇಳುತ್ತೇನೆ. ಕಂದಾಯ ವಸೂಲಿಯಲ್ಲಿ ಬಹಳ ನಿರ್ಲಕ್ಷ್ಯ ಮನೋಭಾವನೆಯಿಂದ ನಡೆಸಿದ್ದಾರೆ. ೧೯೮೭-೮೮ರಲ್ಲಿ ಜಮಾ ಎಷ್ಟು ಅಂದರೆ ೨೨೪ ಕೋಟಿ ೭೫ ಲಕ್ಷ, ನ್ಯಾಯವಾಗಿ ೯ ತಿಂಗಳಿಗೆ ೧೬೨ ಕೋಟಿ ವಸೂಲು ಮಾಡಬೇಕಾಗಿತ್ತು. ಅದನ್ನು ವಸೂಲು ಮಾಡಲಿಲ್ಲ. ಇದನ್ನು ತಾವು ಏಕೆ ರಿವ್ಯೂ ಮಾಡಲಿಲ್ಲ. ಅದೇರೀತಿ ಅಬ್ಕಾರಿ ಇಲಾಖೆಯಲ್ಲೂ ವಸೂಲು ಮಾಡಿರುವುದು ಬಹಳ ಕಡಿಮೆ. ೨೬೦ ಕೋಟಿ ವಸೂಲು ಮಾಡಬೇಕಾಗಿರುವುದರಲ್ಲಿ ೧೫೫ ಕೋಟಿ ವಸೂಲು ಮಾಡಿದ್ದಾರೆ. ಅವರು ಬಡವರು ಎಂದು ಕಾಣುತ್ತದೆ, ಅವರಿಂದ ವಸೂಲು ಮಾಡಲಿಕ್ಕೆ ಆಗಲಿಲ್ಲ. ಇವರು ಸುಮ್ಮನೆ ತೋರಿಕೆಗೆ ಇಟ್ಟಿದ್ದಾರೆ. ಅಬ್ಕಾರಿ ಇಲಾಖೆ, ಮಾರಾಟ ತೆರಿಗೆ, ವಾಹನ ತೆರಿಗೆ ಇಲಾಖೆ ಸರಕು ಮತ್ತು ಪ್ರಯಾಣಿಕರ ಮೇಲೆ ತೆರಿಗೆ – ಈ ೪ ಐಟಂಗಳಲ್ಲಿ ನ್ಯಾಯವಾಗಿ ಎಷ್ಟು ತೆರಿಗೆ ವಸೂಲು ಮಾಡಬೇಕೋ ಅಷ್ಟನ್ನು ವಸೂಲು ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಇನ್ನೂ ಒಂದು ಸಾವಿರ ಕೋಟಿ ವಸೂಲು ಮಾಡಬಹುದು. ಅದನ್ನು ಬಿಟ್ಟು ಬಿಡುತ್ತಾರೆ. ಅದರಲ್ಲಿರುವವರು ದೊಡ್ಡದೊಡ್ಡ ಸಾಹುಕಾರರು. ಪ್ರತಿಷ್ಠಿತ ವ್ಯಕ್ತಿಗಳು, ರಾಜಕೀಯ ಮುಖಂಡರು, ಅಧಿಕಾರಿಗಳನ್ನು ಸರಿ ಮಾಡುವಂಥ ವ್ಯಕ್ತಿಗಳು. ಇದರಲ್ಲಿ ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳನ್ನು ವಸೂಲು ಮಾಡಬಹುದು ಇದನ್ನು ವಸೂಲು ಮಾಡಿದರೆ ರಾಜ್ಯದ ಎಲ್ಲಾ ಕಾರ್ಯಕ್ರಮಗಳನ್ನು ಸುಲಲಿತವಾಗಿ ನಡೆಸಿಕೊಂಡು ಹೋಗಬಹುದು. ಆದರಲ್ಲಿ ತೊಂದರೆ ಬರುವುದಿಲ್ಲ. ಇಷ್ಟು ಹಣವನ್ನು ವಸೂಲು ಮಾಡದೇ ಇರುವುದರಿಂದ ಇವತ್ತು ತೊಂದರೆಯಾಗಿ ಸರ್ಕಾರದ ಚೆಕ್ಸ್ ಬೌನ್ಸ್ ಆಗುತ್ತಿದೆ. ಇದರಿಂದ ಸರ್ಕಾರದ ಮೇಲೆ ನಂಬಿಕೆ ಹೋಗುತ್ತದೆ. ಇವರಲ್ಲಿ ಒಂದು ಸಾರಿ ನಂಬಿಕೆ ಹೋಗಿದೆ. ಆ ನಂಬಿಕೆಯನ್ನು ಪುನಃ ಗಳಿಸಬೇಕು ಅಂದರೆ, ಇನ್ನು ಮುಂದೆ ಸ್ಪಷ್ಟವಾಗಿ ವಸೂಲು ಮಾಡುವ ವಾಡಿಕೆಯನ್ನು ಇಟ್ಟುಕೊಳ್ಳಬೇಕು. ವಸೂಲು ಮಾಡುವುದರ ಬಗ್ಗೆ ಅಧಿಕಾರಿಗಳಿಗೆ ಸ್ಪಷ್ಟವಾಗಿ, ನಿರ್ದಾಕ್ಷಿಣ್ಯವಾಗಿ ಹೇಳಬೇಕು, ವಸೂಲು ಮಾಡುವಂತೆ ಆಗಬೇಕು. ಅದು ಇಲ್ಲದೆ ಸುಮ್ಮನೆ ಇದ್ದರೆ ಹೌದಪ್ಪ ದರ್ಬಾರು

ಆಗುತ್ತದೆ, ಹಾಗೆ ಆಗಬಾರದು ? ಮಿನಿಸ್ಟರುಗಳು ಇಷ್ಟಬಂದ ಹಾಗೆ ವರ್ತಿಸಿದರೆ ಅವರ ಸೆಕ್ರೆಟರಿಯವರೂ ಹಾಗೆಯೇ ವರ್ತಿಸುತ್ತಾರೆ. ಇವರು ಒಂದರಷ್ಟು ಸಡಿಲ ಬಿಟ್ಟರೆ ಅವರು ೪ ರಷ್ಟು ಸಡಿಲ ಬಿಡುತ್ತಾರೆ, ವಸೂಲಾತಿ ಇಲ್ಲ. ಅಬ್ಕಾರಿ ಇಲಾಖೆಗೆ ಚಿಕ್ಕವಯಸ್ಸಿನವರು ಇನಾಂದಾರ್‌ರವರು ಬಂದಿದ್ದಾರೆ ಸರಿ ಹೋಗುತ್ತದೆ ಎಂದು ತಿಳಿದಿದ್ದೆವು ಇನಾಂದಾರ್‌ರವರು ಇನಾಮೇ ಕೊಟ್ಟು ಬಿಟ್ಟಿದ್ದಾರೆ. ಅಬ್ಕಾರಿ ಇಲಾಖೆಯು ಕಂಟ್ರಾಕ್ಟರುಗಳಿಗೆ ಮಜಾ ಮಾಡಿಕೊಂಡು ಹೋಗಿರಿ ಎಂದು ಇನಾಮೇ ಕೊಟ್ಟುಬಿಟ್ಟಿದ್ದಾರೆ. ಸುಮಾರು ೨೫೦ ಕೋಟಿ ರೂಪಾಯಿಗಳನ್ನು ವಸೂಲು ಮಾಡಬೇಕಾಗಿತ್ತು. ಅಬ್ಕಾರಿ ಇಲಾಖೆಯುಲ್ಲಾದರೂ ಸ್ವಲ್ಪ ಬಿಗಿಯಾಗಿ ವಸೂಲು ಮಾಡಬೇಕು ಎಂದು ಎಲ್ಲರೂ ಹೇಳುತ್ತಾ ಇದ್ದಾರೆ. ಈ ಕಡೆ, ಆ ಕಡೆ ಪ್ರತಿಯೊಬ್ಬರೂ ಹೇಳುತ್ತಾ ಇದ್ದಾರೆ. ಸೆಕೆಂಡ್ಸ್ ಹಾವಳಿಯಿಂದ ದಿನಕ್ಕೆ ಒಂದು ಕೋಟಿ ರೂಪಾಯಿ ರಾಜ್ಯಕ್ಕೆ ನಷ್ಟವಾಗುತ್ತಿದೆ. ಒಂದು ಎಲೆಕ್ಷನ್ ಬಂದರೆ, ೫೦ ಕೋಟಿಯಿಂದ ೭೫ ಕೋಟಿವರೆಗೂ ಕೊಡುತ್ತಾರೆ. ಅದಕ್ಕೋಸ್ಕರ ಕೊಡಬೇಕಾಗುತ್ತದೆಂದು ಹೇಳುತ್ತಾರೆ. ಇತ್ತೀಚೆಗೆ ಸೆಕೆಂಡ್ಸ್ ಕೂಡ ಒಂದೊಂದು ಕೇಸಿಗೆ ೧೦೦ ರೂಪಾಯಿ ಜಾಸ್ತಿಯಾಗಿದೆ. ಇನ್ನು ಮುಂದಾದರೂ ಇದನ್ನು ಬಿಗಿ ಮಾಡುವುದಕ್ಕೆ ವ್ಯವಸ್ಥೆ ಮಾಡಿ. ಬೊಕ್ಕಸಕ್ಕೆ ಜಾಸ್ತಿ ಹಣ ಬರುವಂಥ ವ್ಯವಸ್ಥೆ ಮಾಡಿ. ವಸೂಲಿ ಜಾಸ್ತಿ ಮಾಡಿ, ಸೋರತಕ್ಕ ಹಣವನ್ನು ನಿಲ್ಲಿಸಿ. ರಾಜ್ಯದ ಹಣಕಾಸಿನ ಪರಿಸ್ಥಿತಿ ಕೆಟ್ಟುಹೋಗಿದೆಯೆಂದು ಪತ್ರಿಕೆಗಳವರು ಬರೆಯುತ್ತಿದ್ದಾರೆ. ನಿನ್ನೆ ನಮ್ಮ ರಾಷ್ಟ್ರಪತಿಗಳು ಕರ್ನಾಟಕ ರಾಜ್ಯ ಬಹಳ ಪ್ರೊಗ್ರೇಸೀವ್ ರಾಜ್ಯ ಎಂದು ಹೇಳಿದ್ದಾರೆ. ಆದರೆ, ಅದು ರಿವರ್ಸ್ ಆಗುತ್ತಿದೆ ಇನ್ನು ಮುಂದಾದರೂ ಈ ರಾಜ್ಯ ಪ್ರೊಗ್ರೆಸೀವ್ ಸ್ಟೇಟ್ ಆಗಲಿ ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೆ ೧೯೮೮-೮೯ನೇ ಸಾಲಿನ ಆಯವ್ಯಯ ಪತ್ರದಲ್ಲಿ ಸುಮಾರು ೩೨೭.೮೮ ಲಕ್ಷ ರೂಪಾಯಿ ಅಂತಿಮ ಕೊರತೆ ಇದೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಆದರೆ, ಆರ್ಥಿಕ ಸಮೀಕ್ಷೆಯ ಹಳೆಯ ಪುಸ್ತಕವನ್ನು ನೋಡಿದಾಗ, ಲೋಕೋಪಯೋಗಿ ಸಚಿವರು ಹೇಳಿದಂತೆ, ಸುಮಾರು ೬೫ ಕೋಟಿ ರೂಪಾಯಿಗಳ ಬಾಕಿಯನ್ನು ಕಂಟ್ರಾಕ್ಟುದಾರರುಗಳಿಗೆ ಕೊಡಬೇಕಾದದ್ದು ಉಳಿದಿದೆ ಎಂದು ಹೇಳಿದ್ದಾರೆ. ಎಪಿಎಂಸಿ ಸೊಸೈಟಿಯ ವತಿಯಿಂದ, ಅಪೆಕ್ಸ್ ಬ್ಯಾಂಕ್‌ನಿಂದ, ಮುಜರಾಯಿ ಇಲಾಖೆಯಿಂದ ೪೦-೫೦ ಕೋಟಿ ರೂಪಾಯಿಗಳನ್ನು ತರಿಸಿಕೊಂಡು ಸಂಬಳ ಕೊಡತಕ್ಕ ಪರಿಸ್ಥಿತಿ ಬಂದಿದೆ. ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ಹಣ ಕೊಟ್ಟಿಲ್ಲ. ಸ್ವಯಂ ಉದ್ಯೋಗ ಯೋಜನೆಗೆ ಹಣ ಕೊಟ್ಟಿಲ್ಲ. ಗೋಬರ್ ಗ್ಯಾಸ್‌ಗೆ ಹಣ ಕೊಟ್ಟಿಲ್ಲ. ೧೦೦ ಬಾವಿಗಳ ಯೋಜನೆಗೆ ಹಣ ಕೊಟ್ಟಿಲ್ಲ. ಇದೆಲ್ಲವನ್ನೂ ಸೇರಿಸಿಕೊಂಡರೆ, ಕೊರತೆ ಸುಮಾರು ೪೦೦ ಕೋಟಿ ರೂಪಾಯಿಗಳಾಗುತ್ತದೆ. ಕಾಂಗ್ರೆಸ್ ಪಕ್ಷದ ಮಿತ್ರರೊಬ್ಬರು ಇಲ್ಲಿ ಮಾತನಾಡುತ್ತಿದ್ದರು. ಈ ಸರ್ಕಾರದಲ್ಲಿ ಆರ್ಥಿಕ ದಿವಾಳಿತನವಾಗಿದೆ. ಆರ್ಥಿಕ ಅಸ್ಥಿರತೆ ತಾಂಡವಾಡುತ್ತಿದೆ ಎಂದು. ನಾನು ತಮಾಷೆಗೆ ಹೇಳುತ್ತಿದ್ದೀರೇನೋ. ಎಂದು ಕೇಳಿದ್ದಕ್ಕೆ. ಜನತಾದವರಿಗೆ ಆಡಳಿತ ನಡೆಸುವುದಕ್ಕೆ ಬರುವುದಿಲ್ಲ, ಕಾಂಗ್ರೆಸ್‌ನವರಿಗೆ ವಿರೋಧ ಮಾಡುವುದಕ್ಕೆ ಬರುವುದಿಲ್ಲ. ಈ ರಾಜ್ಯದ ಸ್ಥಿತಿ ಚಿಂತಾಜನಕವಾಗಿದೆ ಎಂದು ಮಾಜಿ ಮಂತ್ರಿಗಳೂ ಹಾಲಿ ಶಾಸಕರೂ ಈ ಮಾತನ್ನು ಹೇಳಿದರು. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವಂಥಾದ್ದು, ತಾವು ಅಧಿಕಾರಕ್ಕೆ ಬಂದು ೫ ವರ್ಷಗಳಾಯ್ತು. ನುಡಿದಂತೆ ನಡೆಯುತ್ತೇವೆ, ಮೌಲ್ಯಾಧಾರಿತ ರಾಜಕಾರಣವನ್ನು ತರುತ್ತೇವೆಂದು ಮಾತನಾಡಿದ್ದು ಮಾತನಾಡಿದ್ದೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣದಲ್ಲಿ ''ರಾಜ್ಯದಲ್ಲಿ ಸರ್ವತೋಮುಖ ಅಭಿವೃದ್ಧಿಯಾಗಿದೆ ಎಂಬ ತೃಪ್ತಿ ನಮಗಿದ್ದರೂ, ಬರಗಾಲವು ರಾಜ್ಯವನ್ನು ಕಾಡದಿದ್ದಲ್ಲಿ ನಾವು ಇನ್ನು ಉತ್ತಮ ಸಾಧನೆಯನ್ನು ಮಾಡಬಹುದಾಗಿತ್ತು ಎಂಬ ಭಾವನೆ ನಮ್ಮಲ್ಲಿದೆ.'' ಎನ್ನುವ ಮಾತನ್ನು ಹೇಳಿದ್ದಾರೆ. ಸ್ವಾಮಿ ಆಯವ್ಯಯ ಪತ್ರದಲ್ಲಿ ಗ್ರಾಮೀಣ ಜನಜೀವನ ಸುಧಾರಿಸುವಂಥ ಯಾವುದೇ ಸಂಗತಿ ಇದೆಯೆ ? ಕಳೆದ ವರ್ಷದ ಯೋಜನಾ ವೆಚ್ಚದಲ್ಲಿ ೩೦೦ ಕೋಟಿ ರೂಪಾಯಿ ಕಡಿತವಾಗಿದೆ. ಈ ವರ್ಷ ಸುಮಾರು ೧೫೭ ಕೋಟಿ ರೂಪಾಯಿ ಕಡಿಮೆ ಮಾಡಿರುವುದು ಇದೆ. ಈ ವಿಚಿತ್ರವಾದಂಥ ಸನ್ನಿವೇಶದಲ್ಲಿ ಕಳೆದ ೮-೯ ತಿಂಗಳಿಂದ ಎಲ್ಲಾ ಅಭಿವೃದ್ಧಿ ಕೆಲಸಗಳೂ ಸ್ಥಗಿತಗೊಂಡಿದ್ದರೂ ಸರ್ವತೋಮುಖ ಅಭಿವೃದ್ಧಿಯಾಗಿದೆ ಎನ್ನುವಂಥ ಮಾತನ್ನು ಹೇಳುವುದು ಎಷ್ಟರಮಟ್ಟಿಗೆ ಸೂಕ್ತ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಜಿಲ್ಲಾ ಪರಿಷತ್‌ನ್ನು ಅಸ್ತಿತ್ವಕ್ಕೆ ತಂದು ಆಡಳಿತದಲ್ಲಿ ವಿಕೇಂದ್ರೀಕರಣ ಮಾಡಿದ್ದೇವೆಂದೂ, ಇದಕ್ಕಾಗಿ ಸರ್ಕಾರ

೩೦೦ ಕೋಟಿ ರೂಪಾಯಿ ಹಣ ಇಡಲಾಗಿದೆಯೆಂದು ಹೇಳಿದರೂ ಇಡೀ ರಾಜ್ಯಕ್ಕೆ ಕೇವಲ ೨೬೦ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡುವುದಕ್ಕಾಗಿಲ್ಲ.

ಕಳೆದ ಒಂದು ವರ್ಷದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಅಭಿವೃದ್ಧಿ ತರುವುದಕ್ಕೆ ನಿಮ್ಮಿಂದ ಏನಾದರೂ ಆಯಿತೇನು ? ಅಥವಾ ೫ ವರ್ಷಗಳ ಸಾಧನೆ ಲಕ್ಷಾಂತರ ಜನ ಜನತಾ ಕಾರ್ಯಕರ್ತರನ್ನು ಸೇರಿಸಿ ಮೇಳವನ್ನು ಮಾಡಿದಮೇಲೆ ಏನು ಸಂತೃಪ್ತಿಯನ್ನು ನೀವು ಹೊಂದಿದಿರಿ ಅದರ ಬಗ್ಗೆ ಈ ರಾಜ್ಯದ ಹಿತದೃಷ್ಟಿಯಿಂದ ಪ್ರಶ್ನೆ ಮಾಡಿದಾಗ ಏನಾದರೂ ನೀರಾವರಿ ಯೋಜನೆಗಳನ್ನು ನಾವು ಕೈಗೊಂಡು ಜನ ನೆಮ್ಮದಿಯಿಂದ ಜೀವನ ಮಾಡುವಂಥ ಒಂದು ಹೊಸ ವ್ಯವಸ್ಥೆಯನ್ನು ತಂದಿದ್ದೇವೆ ಎನ್ನುವಂಥ ತೃಪ್ತಿಪಟ್ಟುಕೊಳುವಂಥ ಚಿತ್ರ ಏನಾದರೂ ನಿಮ್ಮ ಕಣ್ಣುಮುಂದೆ ಇದೆಯೋ ? ಅಥವಾ ಸಾಕಷ್ಟು ವಿದ್ಯುತ್ ಉತ್ಪಾದನೆಗೋಸ್ಕರ ಹಣ ತಂದಿಟ್ಟು ವಿದ್ಯುತ್ ಕೊರತೆಯನ್ನು ನಾವು ನಿವಾರಣೆ ಮಾಡಿದ್ದೇವೆ. ಜನ ನೆಮ್ಮದಿಯಿಂದ ಇದ್ದಾರೆ ಎನ್ನುವಂಥ ಒಂದು ಸನ್ನಿವೇಶ ಬದಲಾವಣೆ ಮಾಡುವಂಥ ಪ್ರಯತ್ನ ಏನಾದರೂ ನಿಮ್ಮ ಕಡೆಯಿಂದ ಆಗಿದೆಯೇ ? ಅಥವಾ ಗ್ರಾಮೀಣ ಪ್ರದೇಶದ ರೈತ ನೆಮ್ಮದಿಯಿಂದ ಜೀವನ ಮಾಡುತ್ತಿದ್ದಾನೆಂದು ಇದನ್ನು ಏನಾದರೂ ನೀವು ನೋಡಲಿಕ್ಕೆ ಸಾಧ್ಯ ಇದೆಯೋ ? ಈ ತರಹ ಎಲ್ಲಾ ಒಂದು ವಿಚಿತ್ರವಾದಂಥ ವಾತಾವರಣ ಈ ರಾಜ್ಯದಲ್ಲಿ ಕಾಡುತ್ತಿರುವ ಈ ಸಂದರ್ಭದಲ್ಲಿ ರಾಜ್ಯದಲ್ಲಿ ಸರ್ವತೋಮುಖ ಅಭಿವೃದ್ಧಿಯಾಗಿದೆ ಎಂದು ತೃಪ್ತಿಪಟ್ಟುಕೊಳ್ಳುವಂಥ ಮಾತನ್ನು ನೀವು ಈ ಆಯವ್ಯಯ ಪತ್ರದಲ್ಲಿ ಹೇಳಿರುವಂಥದ್ದು ನಿಜಕ್ಕೂ ಸಹ ಈ ಸರ್ಕಾರಕ್ಕೆ ಮತ್ತು ನಿಮಗೆ ಗೌರವ ತರುವುದಿಲ್ಲ ಈಗ ಏನು ಫೇಲ್ಯೂರ್ಸ್ ಆಗಿದೆ ಅದನ್ನು ಒಪ್ಪಿಕೊಂಡು ನಾವು ಪ್ರಾಮಾಣಿಕವಾಗಿ ಮುಂದೆ ಬರುವ ದಿವಸಗಳಲ್ಲಿ ಒಳ್ಳೆಯ ಕೆಲಸ ಮಾಡುತ್ತೇವೆ ಎನ್ನುವ ಮಾತನ್ನು ಹೇಳಬೇಕಾಗಿತ್ತು, ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವಂಥದ್ದು, ಏನು ಎಂದರೆ, ಅವರು ಇಲ್ಲಿ ಹೇಳಿರತಕ್ಕ ಅಂಕಿ-ಅಂಶಗಳನ್ನು ನಾನು ಇಲ್ಲಿ ಹೇಳಲಿಕ್ಕೆ ಹೋಗುವುದಿಲ್ಲ. ನಾನು ಹೇಳಬೇಕೆಂದಿರುವುದು ಏನೆಂದರೆ, ಈ ರಾಜ್ಯದಲ್ಲಿ ಜನ ಒಂದು ಬದಲಾವಣೆಯನ್ನು ತಂದು ಈ ಕುರ್ಚಿಯ ಮೇಲೆ ನಿಮ್ಮನ್ನು ಕೂರಿಸಿದಂಥ ಸಂದರ್ಭದಲ್ಲಿ, ರಾಷ್ಟ್ರದ ರಾಜಕಾರಣದ ಬಗ್ಗೆ ಮಾತನಾಡತಕ್ಕ ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯದ ಜನತೆ ನೆಮ್ಮದಿಯಿಂದ ಜೀವನ ಮಾಡುವಂಥ ಹೊಸ ವ್ಯವಸ್ಥೆಯನ್ನು ತರುವುದರಲ್ಲಿ ಏನಾದರೂ ಸಫಲರಾದರೋ ? ಇವೊತ್ತು ನಿಮ್ಮ ಪಕ್ಷದಲ್ಲಿ ರಾಜಕೀಯ ಅಸ್ಥಿರತೆ ತಾಂಡವಾಡುತ್ತಿದೆ. ೫ ವರ್ಷಗಳು ಕಳೆದ ಮೇಲೆ ಪರಸ್ಪರ ಬಡಿದಾಟ ಆಗುವುದು ಇವೊತ್ತು ನಮ್ಮ ಕಣ್ಣಿಗೆ ಕಾಣುತ್ತಿದೆ. ಇದರ ಪರಿಣಾಮ ಯಾವುದೇ ಒಬ್ಬ ಮಂತ್ರಿ ತಾನು ತನ್ನ ಚೇಂಬರ್‌ನಲ್ಲಿ ಕುಳಿತುಕೊಂಡು ನೆಮ್ಮದಿಯಿಂದ ಕೆಲಸ ಮಾಡಬೇಕು ಎನ್ನುವ ವಿಶ್ವಾಸವನ್ನು ಕಳೆದುಕೊಂಡಿದ್ದಾನೆ. ಒಂದು ದಿವಸದಲ್ಲಿ ನಾಲ್ಕಾರು ಗಂಟೆ ಅವರ ಇಲಾಖೆಗೆ ಸಂಬಂಧಪಟ್ಟ ವಿಷಯದಲ್ಲಿ ಏನೇನು ಲೋಪದೋಷಗಳಾಗಿದೆ ಅದನ್ನು ಸರಿಪಡಿಸುವಂಥ ಯಾವುದೇ ಪ್ರಯತ್ನ ಇವೊತ್ತು ಆಗದೆ, ಪರಸ್ಪರ ಗೊಂದಲದ ಮಧ್ಯ ಸಿಕ್ಕಿಕೊಂಡಿದ್ದಾರೆ. ಅವರನ್ನು ಕರೆಯಿಸಿ ಅವರ ಜೊತೆ ಚರ್ಚೆ ಮಾಡಿ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಈ ರಾಜ್ಯದ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರು ಟೋಪಿ ಬಿದ್ದಿದ್ದು ಆಯಿತು. ಯಾರು ಮುಖ್ಯಮಂತ್ರಿಗಳಾಗುವುದಕ್ಕೆ ಜನತಾ ಶಾಸಕರು ತಮ್ಮ ಬೆಂಬಲವನ್ನು ಕೊಟ್ಟರೋ ಅವರಲ್ಲಿರುವಂಥ ಭಿನ್ನಾಭಿಪ್ರಾಯಗಳನ್ನು ತೆಗೆದುಹಾಕಿ ಪ್ರಾಮಾಣಿಕವಾಗಿ ಅವರು ತಮ್ಮ ಚೇಂಬರ್ಸ್‌ನಲ್ಲಿ ಕುಳಿತುಕೊಂಡು ಒಳ್ಳೆಯ ಕೆಲಸವನ್ನು ಮಾಡುವಂಥ ವಾತಾವರಣ ಇವೊತ್ತು ಏನಾದರೂ ಇದೆಯೇ ಎಂದು ಪ್ರಶ್ನೆ ಹಾಕಿದಾಗ ನಿಜಕ್ಕೂ ಸಹ ಆ ಒಂದು ತೃಪ್ತಿ ನಿಮ್ಮಲ್ಲಿ ಇಲ್ಲ ಎನ್ನುವುದು ಸ್ಪಷ್ಟವಾಗಿದೆ. ಬಹುಶಃ ಜನತಾ ಪಕ್ಷ ಒಡಕಿನ ಅಂಚಿಗೆ. ತುದಿಗೆ ಬಂದು ಮುಟ್ಟಿದೆ. ಅದಕ್ಕೋಸ್ಕರ ಈ ಸದನದ ಮೂಲಕ ಈ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಜನತಾ ಪಕ್ಷದ ಬಗ್ಗೆ ಮತ್ತು ಮಂತ್ರಿಮಂಡಲದ ಬಗ್ಗೆ ಹೇಳುತ್ತಿದ್ದಾರೆ. ಜನತಾಪಕ್ಷದಲ್ಲಿ ಆಗಲಿ. ಮಂತ್ರಿಮಂಡಲದಲ್ಲಿ ಆಗಲಿ ಅಂತಹ ಒಡಕು ಇಲ್ಲ. ದಯುವಿಟ್ಟು ಅವರು ಬಡ್ಜೆಟ್ ಬಗ್ಗೆ ಮಾತನಾಡುವುದು ಸೂಕ್ತ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ ಜನತಾಪಕ್ಷ ಇನ್ನೂ ಹೆಚ್ಚು ದಿವಸ ಉಳಿಯಬೇಕು. ಈ ರಾಜ್ಯದ ಜನತೆಯ ಸೇವೆಯನ್ನು ಮಾಡಬೇಕು ಎನ್ನುವ ದೃಷ್ಟಿಯಿಂದ ಹೇಳಿದೆ. ನಾವು ಇವರು ಅಧಿಕಾರಕ್ಕೆ ಬಗಲಿಕ್ಕೆ ಸ್ವಲ್ಪ ಬೆಂಬಲ ಕೊಟ್ಟೆವು. ಆದರೆ ಇವೊತ್ತು ನಾನು ಹೇಳುತ್ತಿರುವಂಥದ್ದು, ಇಲ್ಲಿ ಒಂದು ಪ್ರಭಲವಾದಂಥ ಇನ್ನೊಂದು ಪಕ್ಷ ಇದೆ, ನೀವು ಇಳಿದ ತಕ್ಷಣ ಅವರು ಒಂದು

ಒಳ್ಳೆಯ ಕೆಲಸ ಮಾಡುವಂಥ ಒಂದು ಹೊಸ ವಾತಾವರಣ ಮೂಡಿಸಿದರೆ ನಾನು ಇವರ ಬಗ್ಗೆ ಚಿಂತೆ ಮಾಡುತ್ತಾ ಇರಲಿಲ್ಲ. ನಾನು ಇವರ ಬಗ್ಗೆ ಚಿಂತನೆ ಮಾಡುತ್ತಿರುವುದು ರಾಜ್ಯದ ಜನತೆ ಇಷ್ಟೊಂದು ನಂಬಿ ನಿಮ್ಮನ್ನು ಅಧಿಕಾರಕ್ಕೆ ಕೂರಿಸಿದಮೇಲೆ ಇವೊತ್ತು ತಾವು ಪರಸ್ಪರ ಬಡಿದಾಡಿ, ಈ ಸ್ಥಿತಿಗೆ ರಾಜ್ಯದ ಜನತೆಯನ್ನು ತಂದಿಟ್ಟಿದ್ದೀರಿ, ಅದಕ್ಕೋಸ್ಕರವಾದರೂ ನೀವು ಕುಳಿತುಕೊಂಡು ಮಾತನಾಡಿ ನಾನು ಅನೇಕ ಜನ ಜನತಾ ಶಾಸಕರ ಜೊತೆ ಮಾತನಾಡುವ ಸಂದರ್ಭದಲ್ಲೂ ಕೂಡ ಅವರ ಮನಸ್ಸಿನಲ್ಲಿದ್ದಂಥ ನೋವನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಆದರೆ ಅವರ ನಾಯಕರೆ, ಅಲ್ಲಿ ಕುಳಿತುಕೊಂಡು ಅವರಲ್ಲಿರತಕ್ಕ ಪರಸ್ಪರ ಭಿನ್ನಾಭಿಪ್ರಾಯ ತೆಗೆದುಹಾಕಿ, ಒಂದು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಲಿಕ್ಕೆ ಅವಕಾಶ ಇಲ್ಲದೇ ಇದ್ದರೆ, ಇವೊತ್ತು ಆಡಳಿತದಲ್ಲಿ ಯಾವುದೇ ಒಂದು ಬದಲಾವಣೆಯನ್ನು ತರಲಿಕ್ಕೆ ಸಾಧ್ಯವಿಲ್ಲ ಎನ್ನುವುದಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎಂ. ಎಸ್. ಪಾಟೀಲ್.—ನೀವು ಅವರ ಜೊತೆ ಮಾತನಾಡಿ ಮಾತನಾಡಿ, ನೀವು ಹೊರಗೆ ಹೋಗಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾತಂತ್ರ್ಯ ಬಂದು ನಲವತ್ತೊಂದು ವರ್ಷಗಳಲ್ಲಿ ಒಂದು ಪಕ್ಷದಲ್ಲಿ ಗಟ್ಟಿಯಾಗಿ ನಿಂತುಕೊಂಡು ಪ್ರಾಮಾಣಿಕವಾಗಿ ಆ ಪಕ್ಷದ ಸಿದ್ಧಾಂತ ವಿಚಾರಗಳನ್ನು ತೆಗೆದುಕೊಂಡು ಹೋರಾಟ ಮಾಡುವಂಥ ಮನೋವೃತ್ತಿ ಅಧಿಕಾರದಲ್ಲಿ ನಲವತ್ತೊಂದು ವರ್ಷದಲ್ಲಿ ಇದ್ದಂಥ ನಿಮ್ಮ ಕಾಂಗ್ರೆಸ್ ಮುಖಂಡರಿಗೆ ಮಾಡಲಿಕ್ಕೆ ಆಗಲಿಲ್ಲ. ಇವೊತ್ತು ಇರುವುದರಲ್ಲಿ. ನೂರಕ್ಕೆ ತೊಂಭತ್ತೊಂಭತ್ತು ಜನ ನಿಮ್ಮವರೇ ಅದಕ್ಕೆ ನಾನು ತಮಾಷೆಗೆ ಹೇಳುತ್ತಿದ್ದೇನೆ. ಯಾರಾದರೂ ಕೆಲವರು ಒಳ್ಳೆಯವರು ಸೇರಿಕೊಂಡು ಏನಾದರೂ ಒಂದು ಒಳ್ಳೆಯದನ್ನು ಮಾಡಲಿಕ್ಕೆ ತೀರ್ಮಾನ ತೆಗೆದುಕೊಳ್ಳಿ ಎಂದು ಹೇಳಿದೆ. ವಿರೋಧಪಕ್ಷದಲ್ಲಿಯೇ ಬಡಿದಾಡಿಕೊಂಡು, ಹೋರಾಟ ಮಾಡುವ ಮನೋವೃತ್ತಿ ಬೆಳೆಸಿಕೊಂಡಂಥ ಕೆಲವರಾದರೂ ಒಂದು ಕಡೆ ಸೇರಿಕೊಂಡು ಒಂದು ಬದಲಾವಣೆಯನ್ನು ತರತಕ್ಕಂಥ ಪ್ರಯತ್ನ ಮಾಡಿ ಎಂದು ಹೇಳಿದೆ.

೪–೦೮ ಪಿ.ಎಂ.

ನಾನು ಈ ಬಜೆಟ್‌ಮೇಲೆ ಮಾತನಾಡುತ್ತಿರುವ ಒಂದೇ ಒಂದು ಉದ್ದೇಶ ಏನೆಂದರೆ ಈ ರೀತಿ ರಾಜ್ಯವು ಆರ್ಥಿಕ ದಿವಾಳಿತನದಲ್ಲಿ ತಾಂಡವಾಡುತ್ತಿರುವ ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಿದ್ದಾರೆಂದರೆ, ವಿರೋಧ ಪಕ್ಷದವರು ಆರೋಪವನ್ನು ಮಾಡುತ್ತಿದ್ದಾರೆ ಸರ್ಕಾರೀ ನೌಕರರಿಗೆ ನಾನು ಸಂಬಳವನ್ನು ಸರಿಯಾಗಿ ಕೊಡುತ್ತಿಲ್ಲ ಎಂದು. ಸ್ವಾಮಿ, ಸರ್ಕಾರೀ ನೌಕರರಿಗೆ ಸಂಬಳವನ್ನು ಸರ್ಕಾರದವರು ಕೊಡುತ್ತಿಲ್ಲ ಎನ್ನತಕ್ಕ ವಿಚಾರ ಪತ್ರಿಕೆಗಳ ಮುಖ ಪುಟದಲ್ಲಿ ಬರುತ್ತಿದೆ. ಇದು ಇವರ ಸ್ಥಿತಿ. ನಾನು ಹೇಳುತ್ತಿರುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳಾಗಲಿ ಅಥವಾ ಸಂಬಂಧಪಟ್ಟ ಮಂತ್ರಿಗಳಾಗಲಿ ನೋಡಬೇಕು. ಇವತ್ತು ನೀವು ರಾಜ್ಯದ ಜನರ ಹಿತದೃಷ್ಟಿಯನ್ನು ಚಿಂತನೆ ಮಾಡತಕ್ಕ ಪ್ರಶ್ನೆ ಇಲ್ಲಿ ಬಂದಿಲ್ಲ, ತಮಗೆ ನಾನು ಒಂದು ಉದಾಹರಣೆ ಹೇಳುವುದಾದರೆ ಒಮ್ಮೆ ಸರ್ಕಾರೀ ನೌಕರರಿಗೆ ಸಂಬಳವನ್ನು ಕೊಡುವುದಕ್ಕೋಸ್ಕರ ಅಂದರೆ ಫೆಬ್ರವರಿ ತಿಂಗಳಲ್ಲಿ ಅಪೆಕ್ಸ್ ಬ್ಯಾಂಕ್‌ನಿಂದ ೧೦–೧೨ ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಬಂದಿರಿ ಮುಜರಾಯಿ ಇಲಾಖೆಯಲ್ಲಿದ್ದ ದುಡ್ಡನ್ನು ತೆಗೆದುಕೊಂಡು ಬಂದಿರಿ. ದಕ್ಷಿಣ ಕನ್ನಡದ ಎ.ಪಿ.ಎಂ.ಸಿ.ಯಲ್ಲಿದ್ದಂಥ ಡಿಪಾಸಿಟ್ ೫–೬ ಕೋಟಿ ರೂಪಾಯಿಗಳನ್ನು ತೆಗೆದುಕೊಂಡುಬಂದು ಈ ಸರ್ಕಾರೀ ನೌಕರರಿಗೆ ಸಂಬಳವನ್ನು ಕೊಟ್ಟು ತೃಪ್ತಿಪಟ್ಟುಕೊಳ್ಳತಕ್ಕ ಸಂದರ್ಭದಲ್ಲಿ ನಿಮ್ಮ ಈ ಬಜೆಟ್ ಮೇಲೆ ಚರ್ಚೆ ಮಾಡತಕ್ಕದ್ದರಿಂದ ಏನು ಪ್ರಯೋಜನ ? ಗ್ರಾಮೀಣ ಜನರ ಬಗ್ಗೆ ಚರ್ಚೆಮಾಡತಕ್ಕದ್ದರಿಂದ ಏನು ಇದೆ ? ಇಲ್ಲಿ ಈ ಒಂದು ವ್ಯಾಪಕ ಭ್ರಷ್ಟಾಚಾರ ತಾಂಡವಾಡುತ್ತಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಈ ವಿಧಾನ ಸೌಧದ ೩ನೇ ಮಹಡಿಯಲ್ಲಿದೆ, ಅಧಿಕಾರಿಗಳಲ್ಲಿ ಅಲಕ್ಷ್ಯತನ ಇದೆ, ಅವರಲ್ಲೂ ಭ್ರಷ್ಟಾಚಾರ ತಾಂಡವಾಡುತ್ತಿದೆ ಎಂದು. ಯಾವ ಸಂದರ್ಭದಲ್ಲಿಯೂ ಭಾಷಣವನ್ನು ಮಾಡದೆ, ಹೇಳಿಕೆಯನ್ನು ಕೊಡದೆ ಅದು ಈ ಮಂತ್ರಿಮಂಡಲದೊಳಗೆ ಇರಬಹುದು, ಶಾಸಕರಲ್ಲಿರಬಹುದು ಅಥವಾ ಅಧಿಕಾರಿಗಳಲ್ಲಿ ಇರಬಹುದು, ಈ ರೀತಿ ಭ್ರಷ್ಟಾಚಾರದ ಸುಳಿವು ಕಂಡುಬಂದತಕ್ಷಣ ಅದನ್ನು ಸರಿಪಡಿಸುವ ಪ್ರಾಮಾಣಿಕ ಪ್ರಯತ್ನ ನಿಮ್ಮಲ್ಲಿ ಆಯಿತೆ ? ಸ್ವಾಮಿ, ತಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ, ಇಲ್ಲಿ ಮಾನ್ಯ ಅರಣ್ಯ ಖಾತೆಯ ಮಂತ್ರಿಗಳಿಲ್ಲ. ಶಾಸಕರ ಹಕ್ಕುಭಾದ್ಯತೆಯ

ಬಗ್ಗೆ ತಿದ್ದುಪಡಿ ತರತಕ್ಕ ಬಗ್ಗೆ ಈಗತಾನೆ ಚರ್ಚೆಯಾಯಿತು. ಶಾಸಕನಾಗಿ ಬಂದವನು ಶಾಸನ ಸಭೆಯಲ್ಲಿ ಜವಾಬ್ದಾರಿಯಿಂದ ಮಾತನಾಡುವುದಿಲ್ಲ, ಆರೋಪಗಳನ್ನು ಮಾಡುತ್ತಿದ್ದಾರೆ. ಬೇಜವಾಬ್ದಾರಿಯಿಂದ ಮಾತನಾಡುತ್ತಿದ್ದಾರೆ, ಆದ್ದರಿಂದ ಇದಕ್ಕೆ ಕೆಲವು ಕಟ್ಟುಪಾಡುಗಳನ್ನು ಅನುಸರಿಸಿಕೊಂಡು ಕೋಡಿಫಿಕೇಷನ್ ಮಾಡಿ ಶಾಸಕರ ಬಾಯನ್ನು ಮುಚ್ಚಿಸಬೇಕೆಂಬ ಕೆಲಸ ಆಗುತ್ತಿದೆ.

ತಮಗೆ ಒಂದು ಉದಾಹರಣೆಯನ್ನು ಹೇಳುವುದಾದರೆ, ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಹತ್ತಿರ ತಾಳಗುಪ್ಪ ಎಂದು ಇದೆ. ಇದು ಈಗಾಗಲೇ ಪತ್ರಿಕೆಯಲ್ಲಿ ಬಂದಿದೆ. ನಾನು ಇದರ ಬಗ್ಗೆ ಇಲ್ಲಿ ವ್ಯಾಪಕವಾಗಿ ಚರ್ಚೆಯಾಗಬೇಕೆಂದು ನೋಟೀಸನ್ನು ಕೊಟ್ಟೆ. ಆದರೆ ಅದು ಇನ್ನೂ ಚರ್ಚೆಗೆ ಬಂದಿಲ್ಲ. ತಾಳಗುಪ್ಪ ರೈಲ್ವೆ ಸ್ಟೇಷನ್‌ನ ಮುಂಭಾಗದಲ್ಲಿ ೩ ಸಾಗುವಾನಿ ಮರಗಳಿವೆ, ಈಗಲೂ ಅವು ಇವೆ. ಈ ೩ ಮರಗಳನ್ನೂ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ರೈಲ್ವೆ ಅಧಿಕಾರಿಗಳೂ ಸೇರಿಕೊಂಡು ಹರಾಜು ಮಾಡಬೇಕೆಂದು ತೀರ್ಮಾನ ಮಾಡಿ ಸಾಗರದ ರೇಂಜರನ್ನು ಕರೆಯಿಸಿ ಇದರ ವ್ಯಾಲ್ಯೂ ಏನಾಗುತ್ತದೆಂದು ವ್ಯಾಲ್ಯೂ ಕಟ್ಟಿಸಿದರು. ಅವರು ಇದರ ವ್ಯಾಲ್ಯೂ ೪೮.೯೫೦ ಲಕ್ಷ ರೂಪಾಯಿಗಳೆಂದು ಹೇಳಿದರು. ಈ ೩ ಮರಗಳಿಂದ ೧೧ ಸಿ.ಎಫ್.ಟಿ. ಆಳತೆ ಬರಬಹುದೆಂದು ಹೇಳಿದ್ದಾರೆ. ಆದರೆ ಯಾರಿಗೂ ಗೊತ್ತಿಲ್ಲದಂತೆ ಯಾರೋ ಒಬ್ಬ ಅನಾಮಧೇಯ ಕಂಟ್ರಾಕ್ಟರ್‌ನ್ನು ಕರೆದುಕೊಂಡು ಬಂದು ೫೧ ಸಾವಿರ ರೂಪಾಯಿಗೆ ಹರಾಜು ಮಾಡಿಬಿಟ್ಟರು. ಅಲ್ಲಿ ವನ್ಯ ಸಂರಕ್ಷಣಾ ಸಂಘದ ಮತ್ತು ನಮ್ಮ ಪಕ್ಷದ ಪ್ರಮುಖ ಕಾರ್ಯಕರ್ತರೊಬ್ಬರು ಅರಣ್ಯ ಇಲಾಖೆಯ ಅಧಿಕಾರಿಗಳ ಬೆನ್ನು ಹತ್ತಿ ಇಲ್ಲಿ ಮೋಸ ಮಾಡುತ್ತಿದ್ದಾರೆ. ಇದನ್ನು ತನಿಖೆ ಮಾಡಿಸಬೇಕೆಂದು ಹೇಳಿದರು. ಅಲ್ಲಿ ಒಬ್ಬ ಮಹಾನುಭಾವ ಡೆಪ್ಯುಟಿ ಕನ್‌ಸರ್ವೇಟರ್ ಆಫ್ ಫಾರೆಸ್ಟ್ ಇದ್ದಾರೆ. ಚಂದ್ರಕಲಾ ಫಾರೆಸ್ಟ್‌ನಲ್ಲಿ ಸುಮಾರು ೫೫-೬೦ ಕೋಟಿ ರೂಪಾಯಿಯ ಶ್ರೀಗಂಧದ ಮರ ಲೂಟಿಯಾಯಿತು. ಈ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ರಾಜಕಾರಣಿಗಳು ಶಾಮೀಲಾಗಿ ಲೂಟಿ ಮಾಡುತ್ತಿದ್ದಾರೆಂದು ಹತ್ತಾರು ಸಾರಿ ನಾನು ಆರೋಪ ಮಾಡಿದೆ. ಅಲ್ಲಿ ಬೇರುಗಳನ್ನೂ ಕೂಡ ಕಿತ್ತುಕೊಂಡು ಹೋಗಿ ಮಾರಾಟ ಮಾಡತಕ್ಕ ಸ್ಥಿತಿಗೆ ಬಂದಿದೆ ಎಂದು ಹೇಳಿದರೂ, ಅದರ ಬಗ್ಗೆ ತನಿಖೆ ಆಗಲಿಲ್ಲ. ಸ್ವಾಮಿ, ನಾನು ಇದನ್ನು ಹೇಳಿ ೪-೫ ವರ್ಷವಾಯಿತು, ಇವತ್ತು ಅಲ್ಲಿದ್ದ ಶ್ರೀಗಂಧ ಪೂರ್ತಿಯಾಗಿ ಲೂಟಿಯಾಗಿದೆ. ಈ ರಾಜ್ಯದಲ್ಲಿ ಇತರಕ್ಕ ಅಧಿಕಾರಿಗಳಲ್ಲಾಗಲಿ, ರಾಜಕಾರಣಿಗಳಲ್ಲಾಗಲಿ, ಮಂತ್ರಿಗಳಲ್ಲಾಗಲಿ, ಬಿಗಿಯನ್ನು ತರಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಇದ್ದರೆ ಈ ಒಂದು ಲೂಟಿ ಏನಾಗಿದೆ ಇದರ ಬಗ್ಗೆ ಗಮನ ಹರಿಸಬೇಕು. ಈ ಲೂಟಿ ಏನಾಗಿದೆ ಇದರ ಬಗ್ಗೆ ಡೆಪ್ಯುಟಿ ಕನ್ಸರ್ವೇಟರ್ ಆಫ್ ಫಾರೆಸ್ಟ್‌ರವರು ೨೦ನೇ ಫೆಬ್ರುವರಿ ೧೯೮೮ರಲ್ಲಿ ಒಂದು ಪತ್ರವನ್ನು ಏನು ಬರೆದಿದೆ ಅದರ ಕೊನೇ ಪ್ಯಾರ ಈ ರೀತಿ ಇದೆ.

> "The record proves that the Range Forest Officer and the Section Forest Guard have wilfully done this act and send valuation statements for Rs. 48.950 for three teak trees thereby the Range Officer and the Second Forest Guard have caused loss of Rs. 4 lakhs to the Government and why action should not be instituted against these officials who have wilfully done this act and cheated the Government to the tune of Rs. 4 lakhs. Their explanation should reach this office by return of post for taking further action in the matter."

(ಸಂಬಂಧಪಟ್ಟ ಕಾಗದ ಪತ್ರಗಳನ್ನು ಮಾನ್ಯ ಅಧ್ಯಕ್ಷರವರಿಗೆ ಕಳುಹಿಸಿಕೊಟ್ಟರು)

ಇದು ದಿನಾಂಕ ೨೮-೨-೧೯೮೮ರಂದು ಅಸಿಸ್ಟೆಂಟ್ ಕನ್‌ಸರ್ವೇಟರ್ ಆಫ್ ಫಾರೆಸ್ಟ್‌ರವರು ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದಿರುವುದು. ನಾನು ಕೇಳುತ್ತೇನೆ ಶಾಸಕರು ಬೇಜವಾಬ್ದಾರಿಯಿಂದ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಮತ್ತು ಅವರ ಬಾಯನ್ನು ಮುಚ್ಚಿಸುವುದಕ್ಕೆ ಹೊಸ ಕಾನೂನನ್ನು ತರುವಂಥ ಪ್ರಯತ್ನ ಮಾಡು

ತ್ತಿದ್ದಾರೆ. ವ್ಯಾಪಕವಾದ ಭ್ರಷ್ಟಾಚಾರ ತಾಂಡವಾಡುತ್ತಿದೆ ಎಂದು ಆರೋಪ ಬರುತ್ತದೆಂದು ಹೇಳುತ್ತಿರುವುದಕ್ಕೋಸ್ಕರ ಇಂಥ ವಿಷಯಗಳು ಚರ್ಚೆಯಾಗಬಾರದೆಂದು ಪ್ರಯತ್ನ ಮಾಡುತ್ತಾ ಇದ್ದಾರೆ. ನಾನೇ ವಿಧಾನ ಸೌಧದಲ್ಲಿ ನಿಂತು ಆರೋಪ ಮಾಡಿದ್ದೆ. ಮೂರು ಟೀಕ್‌ಮರ ಇದೆ. ಅವನ್ನು ೫೦ ಸಾವಿರ ರೂಪಾಯಿಗಳಿಗೆ ಮಾರಿಕೊಂಡು ಬಿಟ್ಟಿದ್ದಾರೆ. ಅದು ನಾಲ್ಕೂವರೆ ಲಕ್ಷ ಬೆಲೆ ಬಾಳುತ್ತಿತ್ತು ಎಂದು ಹೇಳಿದ್ದೆ. ನಿಮ್ಮ ಅಧಿಕಾರಿ ನಾನು ಇಲ್ಲಿ ಆರೋಪ ಮಾಡುವುದಕ್ಕೆ ಮುಂಚೆ ಮರ ಕಡಿದು ಸಾಗಿಸಿಬಿಟ್ಟಿದ್ದರೆ ಅದು ೧೧ ಸಿಎಫ್‌ಟಿಆರ್ ಇರುವುದು ೪೪ ಸಿಎಫ್‌ಟಿಆರ್ ಎಂದು ಪ್ರಶ್ನೆ ಮಾಡುವುದಕ್ಕೆ ಆಗುತ್ತಿತ್ತೇನು ? ನಿಮ್ಮ ಅಧಿಕಾರಿಗಳು ನಾಲ್ಕು ಲಕ್ಷ ರೂಪಾಯಿಗಳಿಗೆ ಮೂರು ಸಾಗುವಾನಿ ಮರಗಳನ್ನು ಮಾರಿ ಮೋಸ ಮಾಡಿದ್ದಾರೆ, ಸರ್ಕಾರಕ್ಕೆ ಮೋಸ ಮಾಡಿದ್ದಾರೆ. ಇದರಲ್ಲಿ ಅಸಿಸ್ಟೆಂಟ್ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ ಮತ್ತು ದೊಡ್ಡ ದೊಡ್ಡ ಅಧಿಕಾರಿಗಳು ಶಾಮೀಲಾಗಿದ್ದಾರೆ. ಇದಕ್ಕಾಗಿ ಯಾವುದೋ ವಿಲೇಜ್ ಅಕೌಂಟೆಂಟ್‌ನ್ನು ರೆವಿನ್ಯೂ ಇನ್‌ಸ್ಪೆಕ್ಟರನ್ನು ತೆಗೆದುಕೊಂಡು ಬಂದು ಲೋಕಾಯುಕ್ತದಿಂದ ತನಿಖೆ ಮಾಡಿಸಿದರೆ ಆಗುವುದಿಲ್ಲ. ಆ ಅಧಿಕಾರಿಯನ್ನು ತನಿಖೆ ಮಾಡಿ ಡಿಸ್‌ಮಿಸ್ ಮಾಡುವಂಥ ಧೈರ್ಯವನ್ನು ಈ ಸರ್ಕಾರ ತೋರಿಸಬೇಕು. ಆ ಕೆಲಸ ಮಾಡುತ್ತೀರಾ ? ನಿಮ್ಮ ಕೈಯಲ್ಲಿ ಆಗುತ್ತದೆಯೋ ? ಅದನ್ನು ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಆರ್. ಎನ್. ನಾಯಕ್.—ಯಾರನ್ನು ಕೇಳುತ್ತಿದ್ದೀರಿ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಸರ್ಕಾರವನ್ನು ಕೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಎಲ್ಲರೂ ಇದ್ದಾರೆ. ಮಾತನಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಈ ಮಾತನ್ನು ಹೇಳುತ್ತಿರುವುದು ಒಂದೇ ಒಂದು ಉದ್ದೇಶದಿಂದ. ನೀವು ಎಲ್ಲಾ ಅಧಿಕಾರಿಗಳನ್ನು, ಮಂತ್ರಿಗಳನ್ನು, ಶಾಸಕರನ್ನು ಕಾಯುವುದಕ್ಕೆ ಆಗುತ್ತದೆಯೋ ? ನಾವು ಪ್ರಯತ್ನ ಮಾಡಿ ರೆಕಾರ್ಡನ್ನು ಯಾವ ರೀತಿ ಫಾರೆಸ್ಟ್ ಆಫೀಸಿನಿಂದ ತೆಗೆದುಕೊಂಡು ಬಂದಿದ್ದೇವೆಂದು ನಮಗೆ ಗೊತ್ತು ಕಷ್ಟ ಏನೆಂದು. ಈ ರೆಕಾರ್ಡನ್ನು ತಂದು ವಿಧಾನ ಸಭೆಯಲ್ಲಿ ಪ್ರದರ್ಶನ ಮಾಡಿ ನಿಮಗೆ ಕೊಟ್ಟ ಮೇಲೂ ಸಹ ಇಲ್ಲಿರತಕ್ಕಂಥ, ರಾಜ್ಯಪಾಲರಿಗೆ ಮಂತ್ರಿಗಳಿಗೆ ೨೫–೩೦ ದಿವಸಗಳ ಹಿಂದೆ ಪತ್ರ ಬರೆದರೂ ಸಹ ಏನೂ ಮಾಡಲಿಲ್ಲ. ನಾವು ವಿಧಾನ ಸಭೆಯಲ್ಲಿ ಪ್ರಸ್ತಾಪ ಮಾಡಬೇಕು. ಈಗಿರುವ ಪರಿಸ್ಥಿತಿ ಅಲ್ಲಿಗೆ ಬಂದಿದೆ. ಒಬ್ಬ ಅಧಿಕಾರಿ ಬಗ್ಗೆ, ಒಬ್ಬ ರಾಜಕಾರಣಿಯ ಬಗ್ಗೆ, ಭ್ರಷ್ಟ ವ್ಯಕ್ತಿಗಳ ಬಗ್ಗೆ ವಿಧಾನ ಸಭೆಯಲ್ಲಿ ಪ್ರಸ್ತಾಪ ಮಾಡಿದ ಮೇಲೆಯೇ ನಾವು ನೋಟೀಸ್ ಕೊಡುವುದಕ್ಕೆ ಪ್ರಯತ್ನ ಮಾಡುವುದು. ಪತ್ರಿಕೆಯನ್ನು ನೋಡಿದ ಮೇಲೆ ಅಲ್ಲ. ಪತ್ರಿಕೆಯ ಮುಖಪುಟದಲ್ಲಿ ಬಂದಿದೆ. ಅವನನ್ನು ಸಸ್‌ಪೆಂಡ್ ಮಾಡಿ ಎನ್‌ಕ್ವಯರಿ ಮಾಡಿ ಡಿಸ್‌ಮಿಸ್ ಮಾಡಿದ್ದೇವೆಂದು ಹೇಳುವ ತಾಕತ್ತಿದ್ದರೆ ಈವತ್ತು ನಾವು ಹೇಳಿದಂಥ ಮಾತನ್ನು ವಾಪಸ್ ತೆಗೆದುಕೊಳ್ಳುತ್ತೇವೆ. ಆ ತಾಕತ್ತು ಇಲ್ಲ. ಆ ಕೆಲಸ ಮಾಡಲು ನಿಮ್ಮಿಂದ ಸಾಧ್ಯವಾಗುವುದಿಲ್ಲ. ಏತಕ್ಕೆ ಎಲ್ಲೆಲ್ಲಿ ಏನೇನು ಆಗುತ್ತದೆನ್ನುವುದನ್ನು ನೋಡುವುದಕ್ಕೆ ನಿಮಗೆ ಪುರಸೊತ್ತಿರುವುದಿಲ್ಲ. ಅದಕ್ಕೆ ನಾನು ಹೇಳುವುದು, ಯಾರೋ ಅಲ್ಲಿ ಹೇಳಿದರು ಜನತಾ ಪಾರ್ಟಿ ಶಾಸಕರು ಪಾರ್ಟಿಯ ಬಗ್ಗೆ ಏತಕ್ಕೆ ಮಾತನಾಡುತ್ತೀರಿ ಸ್ವಾಮಿ ಎಂದು. ನಿಮ್ಮ ಬಡಿದಾಟ ನಿಮ್ಮ ಗುಂಪುಗಾರಿಕೆಯಿಂದ ಮಂತ್ರಿಗಳು ಸಮಾಧಾನದಿಂದ ಕೆಲಸ ಮಾಡುವ ಒಂದು ವಾತಾವರಣ ಇಲ್ಲದಂತಾಗಿದೆ. ನಿಮ್ಮ ಮುಖ್ಯಮಂತ್ರಿಗಳು ಇಲ್ಲಿಂದ ಹೊರಟುಹೋದರೆ ಇನ್ನೊಬ್ಬ ಮುಖ್ಯಮಂತ್ರಿಯಾಗುವ ಯಾವುದೇ ವ್ಯಕ್ತಿ ಇಲ್ಲವೆಂದು ಅವರೇ ಪದೇ ಪದೇ ಹೇಳುತ್ತಿರುತ್ತಾರೆ. ಅದರ ಪರಿಣಾಮದಿಂದಾಗಿ ಗೊಂದಲದ ವಾತಾವರಣ ನಿರ್ಮಾಣವಾಗಿ ಇಡೀ ರಾಜ್ಯದ ಜನತೆ ಕಣ್ಣೀರಲ್ಲಿ ಕೈ ತೊಳೆಯುತ್ತಿದ್ದಾರೆ. ಇದನ್ನು ಸರಿಮಾಡುವುದಕ್ಕೆ ನಿಮ್ಮ ಕೈಯಲ್ಲಿ ತಾಕತ್ತಿದ್ದರೆ ಯೋಚನೆ ಮಾಡುತ್ತೀರಾ ? ಅಂಥ ಭ್ರಷ್ಟ ಅಧಿಕಾರಿಯನ್ನು ಮನೆಗೆ ಕಳುಹಿಸಿ ಕೊಡುತ್ತೀರಾ ? ಸೋರಿ ಹೋಗುತ್ತಿರುವ ಹಣಕಾಸನ್ನು ಉಳಿಸಲು ಇರುವ ವ್ಯವಸ್ಥೆ ಏನು ? ಶಿವಮೊಗ್ಗದಲ್ಲಿ ಒಬ್ಬ ಒಳ್ಳೆಯ ಅಧಿಕಾರಿ ಚೀಫ್ ಸೆಕ್ರಟರಿ ಗೋವಿಂದರಾಜು ಎಂದು ಇದ್ದರು. ಅವನನ್ನು ವಾಪಸ್ ಕಳುಹಿಸಬೇಕೆಂದು ಹೇಳಿ, ಜಿಲ್ಲಾ ಪರಿಷತ್ತು ಅವನು ಬಂದ ನಾಲ್ಕು ತಿಂಗಳಲ್ಲಿಯೇ ಒಂದು ರೆಸಲ್ಯೂಷನ್ ಮಾಡಿದರು. ಏತಕ್ಕೆಂದರೆ ಅವರು ಇವರು ತಿನ್ನಲು ಬಿಡುತ್ತಿರಲಿಲ್ಲ. ಅವನು ಪ್ರಾಮಾಣಿಕವಾಗಿದ್ದ. ಅವನ ವರ್ಗಾವಣೆ ಆಗಿಯೇ ಹೋಯಿತು. ಅವನನ್ನು ೮–೯ ತಿಂಗಳು ಇರಲಿಕ್ಕೆ ಬಿಡಲಿಲ್ಲ. ಮೈಸೂರು ಜಿಲ್ಲೆಯಲ್ಲಿ ಆದದ್ದು ಏನು ? ಕಪ್ಪು ಕಲ್ಲನ್ನು ಅಸಿಸ್ಟೆಂಟ್ ಕಮಿಷನರ್ ತನ್ನ ಆಫೀಸ್ ಮುಂದೆ ಹಿಡಿದುಕೊಂಡು ಕುಳಿತುಕೊಂಡ. ಮಾನ್ಯ ಮಂತ್ರಿಗಳು ಹೇಳಿದರು ಇದರಲ್ಲಿ

ನನ್ನ ಕೈವಾಡವೇನು ಇಲ್ಲವೆಂದು. ಮಾನ್ಯ ಮಂತ್ರಿಗಳನ್ನು ನಾನು ಕೇಳುತ್ತೇನೆ, ನಿಮ್ಮ ಕೈವಾಡ ವಿಲ್ಲದಿದ್ದರೆ ಆ ಆಫೀಸರ್ ಟ್ರಾನ್ಸ್‌ಫರ್ ಹೇಗೆ ಆದ ? ಯಾರು ಕಪ್ಪು ಕಲ್ಲು ಹಿಡಿದು ಯಾರು ಜಿಲ್ಲಾ ಪರಿಷತ್ತು ಭ್ರಷ್ಟಾಚಾರ ಆಗದಂತೆ ನೋಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೋ ಅಂಥ ಅಧಿಕಾರಿ ಯನ್ನು ೬ ತಿಂಗಳು ಕೆಲಸ ಮಾಡುವುದಕ್ಕೆ ಬಿಡಲಿಲ್ಲ. ಅವನನ್ನು ಕರೆದುಕೊಂಡು ಬಂದು ವಿಧಾನ ಸೌಧದಲ್ಲಿ ಗುಮಾಸ್ತಗಿರಿ ಮಾಡಿಸಿಕೊಳ್ಳುತ್ತಿದ್ದೀರಿ. ಜಿಲ್ಲಾಧಿಕಾರಿ ನಾಲ್ಕು ಸಾರಿ ಲೂಟಿ ಮಾಡಿ ತನಿಖೆ ಮಾಡಿಸಿದ್ದರೂ ಅವನನ್ನು ಜೈಲಿಗೆ ಕಳುಹಿಸುವ ಕೆಲಸ ಮಾಡಲಿಲ್ಲ. ಪ್ರಾಮಾಣಿಕರಾದ ಜಿಲ್ಲಾಧಿಕಾರಿ ಗಳನ್ನು ಹುಡುಕಿಯೋ ಇಲ್ಲ. ನಿಮ್ಮ ಕಾರ್ಯಕರ್ತರು ನಮಗೆ ಕಿರುಕುಳ ಕೊಡುತ್ತಾರೆಂದು ಅವರನ್ನು ಇರುವುದಕ್ಕೆ ಬಿಡುವುದಿಲ್ಲ. ಇದು ಇವರು ಆಡಳಿತ ನಡೆಸುತ್ತಿರುವಂಥ ವೈಖರಿ. ನಾನು ಸರ್ಕಾರ ವನ್ನು ವಿನಂತಿ ಮಾಡಿಕೊಳ್ಳುತ್ತಿರುವುದೇನೆಂದರೆ ಜನ ನಿಮ್ಮನ್ನು ನಂಬಿ ನಿಮಗೆ ಅಧಿಕಾರವನ್ನು ಕೊಟ್ಟಿರುವ ಸಂದರ್ಭದಲ್ಲಿ ಧೈರ್ಯ ಮಾಡಿ ಬದಲಾವಣೆ ಮಾಡುವಂಥ ಪ್ರಯತ್ನವನ್ನು ಮಾಡಿ. ಈಗಲೂ ಕಾಲ ಮಿಂಚಿಲ್ಲ. ಯಾರೋ ಒಬ್ಬರು ಮಂತ್ರಿಗಳ ಮನೆಗೆ ಹೋದಾಗ ಮಾತನಾಡುತ್ತಾ ಹೇಳಿದೆ. ಸ್ವಾಮಿ ಎಲ್ಲಾ ಆಯಿತು, ಇನ್ನು ಏತಕ್ಕೆ ಯೋಚನೆ ಮಾಡುತ್ತೀರಿ ಸ್ವಂತದ ಬಗ್ಗೆ ? ಸ್ವಲ್ಪ ಜನತೆಯ ಕಡೆ ನೋಡಿ. ಅವರ ಜೀವನವನ್ನು ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಿ, ಬಿಡುವು ಮಾಡಿಕೊಂಡು ವಿಧಾನ ಸೌಧಕ್ಕೆ ಬನ್ನಿ. ನಿಮಗೆ ಎಷ್ಟು ದೊಡ್ಡ ದೊಡ್ಡ ಬಂಗಲೆ ಕಾರನ್ನು ಕೊಟ್ಟಿ ದ್ದೇವೆ, ರಾಜ್ಯದಲ್ಲಿ ಪ್ರವಾಸ ಮಾಡುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳಿದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಬರಗಾಲ ಬಂದಾಗ ಆರೋಗ್ಯ ಸರಿಯಾಗಿ ಇರುವುದಿಲ್ಲ. ಬೇರೆ ರಾಜ್ಯಗಳಿಗೆ ಹೋಗುತ್ತಾರೆಂದು ಹೇಳಿದೆ.

ರಾಷ್ಟ್ರದ ರಾಜಕಾರಣಕ್ಕೋಸ್ಕರ ಬೇರೆ ಬೇರೆ ರಾಜ್ಯಗಳಿಗೆ ಹೋಗುತ್ತಿರುತ್ತಾರೆ. ನೀವಾದರೂ ಬಿಡುವು ಮಾಡಿಕೊಂಡು ಬನ್ನಿ. ಇದೆಂತಹ ವಿಚಿತ್ರ ಸನ್ನಿವೇಶ. ಲೋಕೋಪಯೋಗಿ ಸಚಿವರು ಇಲ್ಲಿ ಇಲ್ಲ. ಅವರಲ್ಲಿ ಒಂದೇ ಒಂದು ವಿನಂತಿ ಮಾಡಿಕೊಳ್ಳುವುದು. ನೀವು ಅಧಿಕಾರಕ್ಕೆ ಬಂದಮೇಲೆ ಸಮಗ್ರ ಕ್ರಾಂತಿ ಆಗಿದೆ. ಎಂದು ಹೇಳುತ್ತೀರಲ್ಲ ಎಷ್ಟೆಷ್ಟು ಲಕ್ಷ ರೂಪಾಯಿಗಳನ್ನು ಮಂಜೂರ್ಮಾಡಿ ಕೆಲಸವನ್ನು ಪ್ರಾರಂಭಿಸಿದ್ದೀರಿ ? ಅದು ನೀರಾವರಿ ಯೋಜನೆಗಳು ಇರಬಹುದು ಅಥವಾ ಲೋಕೋ ಪಯೋಗಿ ಕಟ್ಟಡಗಳು ಇರಬಹುದು. ನೀವು ಇನ್ನೂ ಅಧಿಕಾರದಲ್ಲಿದ್ದೀರಿ. ನಿಮ್ಮ ೫ ವರ್ಷದ ಅಧಿಕಾರಾವಧಿಯಲ್ಲಿ ಎಲ್ಲೆಲ್ಲಿ ಏನೇನು ನಡೆದಿದೆ ಎಂಬುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಶಿಕಾರಿಪುರ ತಾಲ್ಲೂಕಿನಲ್ಲಿ ಚಿಲ್ಲಿಂಗ್ ಪ್ಲಾಂಟ್ ಆಗಬೇಕೆಂದು ೪-೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಬಿಲ್ಡಿಂಗ್ ಕಟ್ಟಿ ನಾಲ್ಕೂವರೆ ವರ್ಷ ಕಳೆಯಿತು. ಬೋರ್‌ವೆಲ್ ಹಾಕುವುದಕ್ಕೆ ಎರಡೂವರೆ ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದಾರೆ ಇನ್ನೂ ಆಗಿಲ್ಲ. ರೈತ ಕೊಟ್ಟ ೫ ಲಕ್ಷ ರೂಪಾಯಿಗಳ ತೆರಿಗೆ ಹಣದಲ್ಲಿ ಕಟ್ಟಿದ ಕಟ್ಟಡ ಖಾಲಿ ಬಿದ್ದಿದೆ. ಆದರಿಂದ ರೈತರಿಗೆ ಏನೂ ಉಪಯೋಗವಾಗಿಲ್ಲ. ಅದಕ್ಕೋಸ್ಕರ ವೈಟ್ ಪೇಪರ್ ಹೊರಡಿಸಿ ಎಂದು ಡಿಮ್ಯಾಂಡ್ ಮಾಡುತ್ತೇನೆ. ನೀವು ಅದನ್ನು ಕೊಡುವುದಿಲ್ಲವೆಂದು ನನಗೆ ಗೊತ್ತು.

ಶ್ರೀ ಸಿದ್ದರಾಮಯ್ಯ.—ಇವರ ತಾಲ್ಲೂಕಿನಲ್ಲಿ ಚಿಲ್ಲಿಂಗ್ ಪ್ಲಾಂಟ್ ಆಗಲಿಲ್ಲವೆಂದು ಹೇಳುತ್ತಾರೆ. ಅಲ್ಲಿ ಬಿಲ್ಡಿಂಗ್ ಕಟ್ಟಿರುವುದು ನಿಜ. ಆ ಬಗ್ಗೆ ಎಡಿಯೂರಪ್ಪನವರು ಒಂದು ಪ್ರಶ್ನೆ ಕೇಳಿದ್ದರು. ಅದನ್ನು ಏಪ್ರಿಲ್ ತಿಂಗಳಿನಲ್ಲಿ ಪ್ರಾರಂಭಿಸುತ್ತೇವೆಂದು ಹೇಳಿದ್ದೇನೆ. ಈಗಾಗಲೇ ಮೆಷಿನರಿಯನ್ನು ಖರೀದಿಗೆ ಕೊಂಡುಕೊಂಡಿದ್ದೇವೆ. ರಸ್ತೆ ಕೆಲಸ ಮತ್ತು ವಿದ್ಯುತ್ ತೆಗೆದುಕೊಳ್ಳಬೇಕಾಗಿದೆ. ವಿದ್ಯುಚ್ಛಕ್ತಿ ಬಂದ ತಕ್ಷಣ ಪ್ರಾರಂಭಿಸುತ್ತೇವೆ. ಒಟ್ಟಿನಲ್ಲಿ ಏಪ್ರಿಲ್‌ನಲ್ಲಿ ಪ್ರಾರಂಭಿಸುತ್ತೇವೆಂದು ಹೇಳಿದಂತೆಯೇ ಪ್ರಾರಂಭಿಸುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ —ದಯಮಾಡಿ ಮಾನ್ಯ ಮಂತ್ರಿಗಳು ಕ್ಷಮಿಸಬೇಕು. ನಾನು ಉದಾಹರಣೆ ಕೊಟ್ಟ (೫ ಲಕ್ಷ ರೂಪಾಯಿ ಖರ್ಚು ಮಾಡಿ ಕಟ್ಟಿದ) ಕಟ್ಟಡಕ್ಕೆ ಎರಡು ವರ್ಷಗಳ ಮುಂಚೆಯೇ ಮೆಷಿನರಿ ಬಂದಿದ್ದರೆ ಕೆಲಸ ಪ್ರಾರಂಭವಾಗುತ್ತಿತ್ತಲ್ಲವೆ ? ಇನ್ನೊಂದು ಉದಾಹರಣೆ ಕೊಡುತ್ತೇನೆ. ಸರ್ಕಾರದಲ್ಲಿ ದುಡ್ಡಿಲ್ಲವೆಂದು ಜನರ ಹತ್ತಿರ ಭಿಕ್ಷೆ ಬೇಡಿ ನಾಲ್ಕೂವರೆ ಲಕ್ಷ ರೂಪಾಯಿ ಗಳನ್ನು ಸಂಗ್ರಹಿಸಿ ಶಿಕಾರಿಪುರ ತಾಲ್ಲೂಕಿನಲ್ಲಿ ೧೮ ಎಕರೆ ಜಮೀನನ್ನು ಕೊಡಿಸಿದೆ. ಈ ಲಾಗಾಯ್ತು ಆ ಹಣ ಖರ್ಚಾಗಿಲ್ಲ. ಇಲ್ಲಿ ಕುಳಿತುಕೊಂಡು ಕಾಂಗ್ರೆಸ್ ಸರ್ಕಾರವನ್ನು ಟೀಕಿಸುತ್ತಿದ್ದರಲ್ಲ ಅವರಿಗೆ ಇವೊತ್ತು ಸವಾಲು ಬಂದಿದೆ. ಅದೇ ಬಾಯಿಗಳು, ಅದೇ ಕೈಗಳು ಇವತ್ತು ಯಾವ ರೀತಿ ಕೆಲಸ

ಮಾಡುತ್ತೀವೆ ಎಂದು ಕೇಳುತ್ತೇನೆ. ನಿಮಗೆ ಯೋಜನೆಗಳು ಇವೆಯೇ ? ಏನಾದರೂ ಕಾರ್ಯಕ್ರಮ ಇದೆಯೇ ಎಂದು ಕೇಳುತ್ತೇನೆ. ಇವತ್ತು ಏನು ಒಂದು ಬಡ್ಜೆಟ್ಟನ್ನು ನಮ್ಮ ಮುಂದೆ ಇಟ್ಟು ಚರ್ಚೆ ಮಾಡುತ್ತಿದ್ದೀರಿ ಇದರಲ್ಲಿ ಹುರುಳಿಲ್ಲ ಕಳೆದ ೯ ತಿಂಗಳುಗಳಿಂದ ರಾಜ್ಯದ ಎಲ್ಲಾ ಅಭಿವೃದ್ಧಿ ಕಾರ್ಯ ಕ್ರಮಗಳು ಸ್ಥಗಿತವಾಗಿದ್ದವು. ಹಳ್ಳಿಗಳಲ್ಲಿ ಜನರು ಸತ್ತಿದ್ದರೋ ಬದುಕಿದ್ದರೋ ಗೊತ್ತಿಲ್ಲ. ಟಾರ್ ರಸ್ತೆಗಳು ಗುಂಡಿ ಬಿದ್ದು ಮಣ್ಣಿನ ರಸ್ತೆಗಳಾಗುತ್ತಿವೆ. ಲಿಫ್ಟ್ ಇರಿಗೇಷನ್ ಪ್ರಾರಂಭವಾಗದೆ ಅಲ್ಲೇ ನಿಂತಿದೆ ಈ ಬಡ್ಜೆಟ್ಟಿನಲ್ಲಿ ಬೇರೆ ಬೇರೆ ಕೆಲಸಗಳನ್ನು ನೀವು ಮಾಡುವುದಿಲ್ಲ, ನೀರಾವರಿ ಯೋಜನೆ ಗಳಿಗೆ ಪೂರ್ಣ ಹಣ ಕೊಡುವುದಕ್ಕೆ ಆಗಿಲ್ಲ. ಹಿಂದೆ ಹೇಳಿದ ಕೆಲಸಗಳನ್ನಾದರೂ ಪೂರ್ಣ ಮಾಡು ತ್ತೀರಾ ? ವಿದ್ಯುತ್ ಉತ್ಪಾದನೆಗೆ ಗಮನ ಕೊಡುತ್ತೇವೆಂದು ಹೇಳಿದಂತೆ ಪ್ರಯತ್ನ ಮಾಡಿದಿರಾ ? ಇಲ್ಲ ನನಗೆ ಒಂದು ಆಶ್ಚರ್ಯ ಏನೆಂದರೆ, ಬಡ್ಜೆಟ್ ಪುಸ್ತಕ ದಪ್ಪ ಇದೆ ಎಂದರೆ ಜನರು ನಂಬುತ್ತಾರೆಂಬ ಭಾವನೆ ನಿಮ್ಮಲ್ಲಿರಬಹುದು, ಹೆಗಡೆಯವರು ಸಾರ್ವಜನಿಕರಿಗೆ ಭಾಷಣ ಮಾಡಿ ಮರುಳು ಮಾಡು ವುದನ್ನು ಕೇಳಿದ್ದೆವು. ಆದರೆ ವಿಧಾನಸಭೆಯೊಳಗೆ ರಾಜಕೀಯವಾಗಿ ಬಡ್ಜೆಟ್ ಮಂಡನೆ ಮಾಡಿ ಪುಸ್ತಕ ತುಂಬಿಸುವುದನ್ನು ನೋಡಿರಲಿಲ್ಲ. ಮುನಿಸಿಪಾಲಿಟಿಗಳಿಗೆ ಆಕ್ಟ್ರಾಯ್ ಇಲ್ಲದೆ ಹಾಳಾಗುತ್ತಿವೆ. ಸತ್ಯಾಗ್ರಹ ಮಾಡುವ ಜನರಿಗೆ ಆಶ್ವಾಸನೆ ಕೊಡುತ್ತಿದ್ದೀರಿ. ೧೦--೧೨ ಪರ್ಸೆಂಟ್ ತೆರಿಗೆಯನ್ನು ಜಾಸ್ತಿ ಹಣ ತೆಗೆದಿಟ್ಟಿದಾತೆ ೩೦ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಬೆಂಗಳೂರಿನಲ್ಲಿ ಸಮೂಹ ಸಂಪರ್ಕ ಕೇಂದ್ರದ ಸ್ಥಾಪನೆ, ಬೆಂಗಳೂರಿನಲ್ಲಿ ಮಕ್ಕಳ ಬೊಂಬೆ ಸಂಗ್ರಹಾಲಯ, ಬೊಂಬೆ ಬೇಕೆಂದು ನಿಮ್ಮನ್ನು ಕೇಳಿದವರು ಯಾರು ? ರೈತರಿಗೆ ತಿನ್ನುವುದಕ್ಕೆ ಅನ್ನ ಇಲ್ಲ, ನೀರು ಇಲ್ಲ ಅವಕ್ಕೆ ಬೇಕಾದ ಕಾರ್ಯಕ್ರಮ ಹಾಕಿ ಅಂದರೆ, ಮೊಟ್ಟೆ ಮಾಂಸಕಟ್ಟೆ ಸ್ಥಾಪನೆ ಇತ್ಯಾದಿಗಳನ್ನು ಮಾಡುತ್ತೇವೆಂದು ಹೇಳಿ ದ್ದೀರಿ. ನಿಮ್ಮ ಪರಿಸ್ಥಿತಿ ಎಲ್ಲಿಗೆ ಬಂತು ? ೧೯೮೮-೮೯ರ ಬಡ್ಜೆಟ್ಟಿನಲ್ಲಿ, ಹೊಸಪೇಟೆ, ಕೊಪ್ಪಳ, ಕುಮುಟ, ಹೊನ್ನಾವರ ಇತ್ಯಾದಿಗಳಲ್ಲಿ ನೀರು ಸರಬರಾಜು ಯೋಜನೆ ಮಾಡುತ್ತೇವೆಂದು ಹೇಳಿದ್ದೀರಿ. ಅನುಸೂಚಿತ ಜಾತಿಯ ಜನರ ಬಗ್ಗೆ ಎಲ್ಲೂ ಇಲ್ಲದ ಕಳಕಳಿ, 'ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ಬಡ ರೋಗಿಗಳು ಸರ್ಕಾರೀ ಆಸ್ಪತ್ರೆಗಳಲ್ಲಿ ಸೂಕ್ತ ಚಿಕಿತ್ಸೆ ಪಡೆಯುವಂತಾಗಲಿ ಎಂದು ಆರೋಗ್ಯ ಕಾರ್ಡ್‌ಗಳನ್ನು ನೀಡಲಾಗುವುದು. ಈ ಕಾರ್ಡುಗಳನ್ನು ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿಲ್ಲದ ಕುಟುಂಬಗಳಿಗೆ ಮಾತ್ರ ನೀಡಲಾಗುವುದು. ಇವತ್ತು ನಿಮ್ಮನ್ನು ಕೇಳುತ್ತೇನೆ ಈ ಕಡುಬಡವ ನಿಮ್ಮನ್ನು ಕೊಡಿ ಎಂದು ಕೇಳಿದ್ದನೆಯೇ ? ಇನ್ನು ಮುಂದೆ ಎರಡು ಮಕ್ಕಳ ಮೇಲೆ ಮಾಡಬೇಡ ಎಂದು ಹೇಳಿ. ಆದರೆ ಯಾರು ಮೂರು ನಾಲ್ಕು ಮಕ್ಕಳನ್ನು ಮಾಡಿಕೊಂಡಿದ್ದಾರೆ, ಯಾರು ಹರಿಜನಗಿರಿಜನರು ಹಿಂದುಳಿದವರು ಇದ್ದಾರೆ ಅವರಿಗೆ ನಿನಗೆ ಮಕ್ಕಳು ಜಾಸ್ತಿ ಇದೆ. ಇಂಜೆಕ್ಷನ್, ಗುಳಿಗೆ ಕೊಡುವುದಿಲ್ಲ ಎಂದು ಹೇಳುತ್ತೀರಾ ? ನಾಚಿಕೆಯಾಗಬೇಕು. ಈ ಯೋಜನೆ ಮಾಡುವುದಕ್ಕಿಂತ ಮುಂಚೆಯೇ ಇದನ್ನು ಯೋಚನೆ ಮಾಡಬೇಕಾಗಿತ್ತು. ಮೊದಲೇ ಫ್ಯಾಮಿಲಿ ಪ್ಲಾನಿಂಗ್ ಮಾಡಬೇಕು ಎಂದು ಹೇಳಿದ್ದರೆ ಅದಕ್ಕೆ ಅರ್ಥ ಇದೆ. ತಾಳಿಭಾಗ್ಯ ಎಂದು ಹೇಳಿದಾಗ ವಿರೋಧ ಪಕ್ಷದವರು ಇಲ್ಲಿ ಬಾಯಿ ಬಡಿದುಕೊಂಡರು. ಯಾರು ಬಡವರಿದ್ದಾರೆ, ಹೆಣ್ಣುಮಕ್ಕಳಿದ್ದಾರೆ ಅವರಿಗೆ ಚಿನ್ನದ ತಾಳಿ ಕೊಟ್ಟರೆ ಇವರಿಗೆ ಸಹಿಷ್ಣುತೆ ಇಲ್ಲವಲ್ಲ ಎಂದು ನಾವು ಬೆಂಬಲ ಕೊಟ್ಟಿದ್ದೆವು. ದೇವಸ್ಥಾನಗಳಲ್ಲಿ ಮದುವೆಗಳನ್ನು ಸಂಘ ಸಂಸ್ಥೆಯವರು ಮಾಡಿಕೊಟ್ಟರು. ಮದುವೆಗಳು ಚೆನ್ನಾಗಿ ನಡೆಯುತ್ತಿತ್ತು. ಆದರೆ ಈ ಜನತಾ ಸರ್ಕಾರ ತಾಳಿಭಾಗ್ಯ ಯೋಜನೆಯನ್ನು ವಾಪಸ್ ತೆಗೆದು ಕೊಳ್ಳುವ ಮಟ್ಟಕ್ಕೆ ಇಳಿದಿದೆಯಲ್ಲ ಎಂದು ವ್ಯಥೆಯಾಗುತ್ತದೆ. ಇದನ್ನು ಮುಂದುವರೆಸಬೇಕು ಎಂದು ನಾನು ಅಗ್ರಹ ಮಾಡುತ್ತೇನೆ, ನೀವು ಹೊಸದನ್ನು ಮಾಡದೇ ಇದ್ದರೂ ಪರವಾಗಿಲ್ಲ ಹಳೆಯದನ್ನು ಮುಂದುವರೆಸಿ. ತಾಳಿ ಭಾಗ್ಯ ಯೋಜನೆ ತೆಗೆದುಹಾಕುತ್ತೇವೆ ಎಂದು ಹೇಳುವುದಕ್ಕೆ ನೀವು ಯಾರು ? ಖುಷಿ ಬಂದಾಗ ಮಾಡುವುದು, ಇಲ್ಲದಿರುವಾಗ ಬಿಡುವುದೇ ? ಜನ ನಿಮ್ಮನ್ನು ಕೇಳಿದ್ದರೆಯೇ ? ಏತಕ್ಕೆ ಬಡವರಿಗೆ ? ಆಸೆ ಹುಟ್ಟಿಸುತ್ತೀರಿ ? ಎಲ್ಲಿ ಹೋಯಿತು ನಿಮ್ಮ ಕರುಣೆ ? ಜನ ಏನೂ ಕೇಳಿರಲಿಲ್ಲ. ನೀವೇ ತಾಳಿ ಕೊಡುತ್ತೇನೆ ಎಂದು ಹೇಳಿದಿರಿ. ಬಂಗಾರದ ರೇಟ್ ಜಾಸ್ತಿ ಆಯಿತು. ಅದಕ್ಕೋಸ್ಕರ ಈಗ ಕೊಡುವುದಕ್ಕೆ ನೀವು ತಯಾರಿಲ್ಲ.

ಶ್ರೀ ರಮೇಶ್ ಕುಮಾರ್.—ಪಾರ್ಲಿಮೆಂಟರಿ ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷದವರು ಹೇಳಿದ ಮಾತಿಗೆ ಮಾನ್ಯತೆ ಕೊಡಬೇಕಾಗುತ್ತದೆ. ಅವರು (ವಿರೋಧ ಪಕ್ಷವಾದ ಕಾಂಗ್ರೆಸ್) ಇವನ್ನು ಬಿಡಿ ಎಂದು ಹೇಳಿದರು. ಅದಕ್ಕೋಸ್ಕರ ಪ್ರಜಾಪ್ರಭುತ್ವದಲ್ಲಿ ಅವರ ಮಾತಿಗೆ ಮಹತ್ವ ಕೊಡಬೇಕು

ಎಂದು ಬಿಟ್ಟಿದ್ದೇವೆ ನಿಮ್ಮದು ವಿರೋಧ ಪಕ್ಷದಲ್ಲಿ ಚಿಕ್ಕ ಪಕ್ಷ. ನೀವಿಬ್ಬರೂ ಒಮ್ಮತಕ್ಕೆ ಬಂದು ಮಂತ್ರಿ ಮಾಡಬೇಕು ಎಂದು ಹೇಳಿದರೆ ನಾವು ಒಂದು ತೀರ್ಮಾನಕ್ಕೆ ಬರಬಹುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಆದರೆ ಚೆಂಡಿ ಕಥೆ ಮಾಡುತ್ತಿದ್ದೀರಿ. ಯಾರು ಕೇಳಿದರು ನಿಮ್ಮನ್ನು ? ಹೊಸದಾಗಿ ಏತಕ್ಕೆ ಮಾಡುತ್ತೀರಿ ? ರಾಜ್ಯಪಾಲರ ಭಾಷಣದಲ್ಲಿ ೩೦–೬–೮೮ ರೊಳಗೆ ಸಹಕಾರ ಸಂಘದ ಸಾಲ ಯಾರು ಕಟ್ಟುತ್ತಾರೆ, ಅಸಲು ಯಾರು ಕಟ್ಟುತ್ತಾರೆ ಅವರಿಗೆ ಸುಸ್ತಿ ಬಡ್ಡಿ ಮನ್ನಾ ಮಾಡುತ್ತೇವೆ ಎಂದು ಹೇಳಿದ್ದರು. ಅದನ್ನು ನಾವು ಕೇಳಿದ್ದೆವೆಯೋ ? ಇದೇನೂ ದೊಡ್ಡ ಉಪಕಾರ ಅಲ್ಲ. ಭಿಕ್ಷೆ ಕೊಡುವ ಪ್ರಶ್ನೆಯಲ್ಲ ಅವರ ರುಣ ತೀರಿಸಿದ್ದೀರಿ. ರೈತ ಬದುಕುವುದಕ್ಕೆ ಒಂದು ಹೆಜ್ಜೆ ಮುಂದೆ ಇರುವುದಕ್ಕೆ ಸುಸ್ತಿ ಬಡ್ಡಿ ಮನ್ನಾ ಮಾಡಿದ್ದೀರಿ. ನಾನು ೧೯೮೭–೮೮ನೇ ಸಾಲಿಗೆ ಸುಸ್ತಿ ಬಡ್ಡಿ ಮನ್ನಾ ಮಾಡುವುದನು ಅನ್ವಯ ಮಾಡಿ ಎಂದು ಹೇಳಿದರೆ ಅದು ಆಗುವುದಿಲ್ಲ ಎಂದು ಹೇಳಿದರು. ನಾನು ಧರಣಿ ಮಾಡಿದೆ. ಆಗ ಮಾನ್ಯ ಲಕ್ಷ್ಮೀಸಾಗರ್ ಅವರು ಪ್ರಚಾರ ಕ್ಕೋಸ್ಕರ ಮಾಡ್ತೀರಾ ಎಂದು ಕೇಳಿದರು. ಹಾಗಾದರೆ ಈಗ ಏತಕ್ಕೆ ಬಡ್ಡಿ ಮನ್ನಾ ಮಾಡಿದ್ದೀರಿ ? ನೀವು ಆಡಳಿತ ಪಕ್ಷದವರು ಖುಷಿ ಬಂದಹಾಗೆ ಮಾಡುತ್ತೀರಾ ? ಹಾಗಾದರೆ ವಿರೋಧಪಕ್ಷದ ಯಾವುದೇ ಸಲಹೆ ತೆಗೆದುಕೊಳ್ಳುವುದಿಲ್ಲವೆ? ರಾಜ್ಯಪಾಲರ ಭಾಷಣದಲ್ಲಿ ಹೇಳಿರುವಂತೆ ೩೦–೬–೧೯೮೮ ರವರೆಗೆ ಸಹಕಾರ ಸಂಘದ ಸಾಲದ ಅವಧಿಯನ್ನು ವಿಸ್ತರಣೆ ಮಾಡದೇ ಇದ್ದರೆ ಒಂದು ಲಕ್ಷ ಜನ ರೈತರು ವಿಧಾನ ಸೌಧಕ್ಕೆ ಘೇರಾವೊ ಮಾಡುತ್ತಾರೆ. ಇವು ನಿಮ್ಮ ಕೊನೆಯ ದಿವಸಗಳು ಎಂದು ತಿಳಿದುಕೊಳ್ಳಿ. ರಾಜ್ಯದ ರೈತರನ್ನು ಕೆಣಕುವ ಪ್ರಯತ್ನ ಮಾಡಿದರೆ ಅಧಿಕಾರದ ಅಮಲಿನಲ್ಲಿ ಏನು ಬೇಕಾದರೂ ಮಾಡಬಹುದು ಎಂದು ತಿಳಿದುಕೊಂಡಿದ್ದರೆ, ರೈತ ಸಂಘ ಛಿದ್ರ ಛಿದ್ರ ಆಗಿಹೋಯಿತು ಎಂದು ಅಂದುಕೊಂಡಿದ್ದರೆ ಅದು ಸರಿಯಲ್ಲ ವಿಧಾನ ಸೌಧಕ್ಕೆ ಅವರು ಮುತ್ತಿಗೆ ಹಾಕುವುದಕ್ಕೆ ಮುಂಚೆ ತೀರ್ಮಾನ ತೆಗೆದುಕೊಳ್ಳಿ. ಐದು ವರ್ಷದ ಭೀಕರ ಬರಗಾಲದಿಂದ ರೈತರು ದಿವಾಳಿಯಾಗಿ ದ್ದಾರೆ. ಆದ್ದರಿಂದ ಸಾಲ ಮನ್ನಾ ಆಗಬೇಕು. ರೈತನಿಗೆ ಕುಡಿಯುವುದಕ್ಕೆ ನೀರಿಲ್ಲ. ಓಡಾಡುವುದಕ್ಕೆ ರಸ್ತೆ ಇಲ್ಲ, ತಿನ್ನುವುದಕ್ಕೆ ಅನ್ನ ಇಲ್ಲ ಇಂಥ ಪರಿಸ್ಥಿತಿಯಲ್ಲಿ ಇದ್ದರೂ ಕಷ್ಟಪಟ್ಟು ದುಡಿಯುತ್ತಿದ್ದಾನೆ. ಸಾಲ ಮನ್ನಾ ಮಾಡಿ ಎಂಬುದು ಅವನ ಬೇಡಿಕೆ ಇದೆ. ಇಂಥ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದ ರೈತರ ಸುಸ್ತಿ ಬಡ್ಡಿ ಮನ್ನಾ ಮಾಡುವ ಅವಧಿಯನ್ನು ದಿನಾಂಕ ೩೦–೬–೧೯೮೯ ರವರೆಗೆ ವಿಸ್ತರಣೆ ಮಾಡಿದೆ ಎಂದು ಹೇಳಿ. ಮಾನ್ಯ ಮುಖ್ಯಮಂತ್ರಿಗಳು ನಿರ್ದಿಷ್ಟವಾದ ವಿಚಾರ ಪ್ರಸ್ತಾಪ ಮಾಡಿ, ನೀವು ಜನರಲ್ಲಾಗಿ ಮಾತನಾಡಿದರೆ ನಾನು ಜನರಲ್ಲಾಗಿ ಉತ್ತರ ಕೊಡುತ್ತೇನೆ ಎಂದು ಹೇಳುತ್ತಾರೆ ಆದರೆ ನಾನು ಹೇಳುತ್ತಿದ್ದೇನೆ ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದಾರೋ ಅದನ್ನು ಜಾರಿಗೆ ತರಬೇಕು. ಇಲ್ಲಿ ಕೋ–ಆಪರೇಟೀವ್ ಮಿನಿಸ್ಟರ್ ಇಲ್ಲ. ರೈತ ಸಾಲ ಮನ್ನಾ ಆಗಿದೆ ಎಂದು ದುಡ್ಡು ಕಟ್ಟಿದ. ೩೦–೬–೮೭ರಲ್ಲಿ ಪ್ರಾಥಮಿಕ ಸಹಕಾರಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್, ಹಿರೇಕಟ್ಟೆಗೆರೆ, ಚಿತ್ರದುರ್ಗ ತಾಲ್ಲೂಕು ಇಲ್ಲಿಗೆ ಹಣ ಕಟ್ಟಿದ.

ಡಿಕ್ರಿ ಬಡ್ಡಿ ೨೪೪, ಸುಸ್ತಿ ಬಡ್ಡಿ ೪೪೪ ರೂಪಾಯಿಗಳು ಹೀಗೆ ಎಲ್ಲಾ ಸೇರಿಸಿ ೧೩೭೦ ರೂಪಾಯಿ ಗಳಿಗೆ ಬಿಲ್ಲನ್ನು ಹಾಕಿಕೊಟ್ಟಿದ್ದಾರೆ. ಸರ್ಕಾರಿ ಆಜ್ಞೆ ಅವರಿಗೆ ಅರ್ಥವಾಗುವುದಿಲ್ಲವೆ? ೩೦–೬–೧೯೮೮ರ ಒಳಗೆ ಕಟ್ಟುವಂತಹ ದುಡ್ಡನ್ನು ಅಸಲಿಗೆ ಜಮಾ ಮಾಡಿಕೊಳ್ಳಬೇಕು ಎಂಬುದಾಗಿ ಸ್ಪಷ್ಟವಾಗಿದ್ದರೂ ಅವರಿಗೆ ಎಷ್ಟೇ ಹೇಳಿದರೂ ಅರ್ಥಮಾಡಿಕೊಳ್ಳುವುದಕ್ಕೆ ಸಿದ್ಧರಿಲ್ಲ. ಈ ರೀತಿಯಾಗಿ ರೈತರ ತಲೆಯನ್ನು ಬೋಳಿಸುತ್ತಿದ್ದಾರೆ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವಂತಹ ಅವಕಾಶವನ್ನು ನಾವು ೩೦–೬–೧೯೮೮ರ ವರೆಗೆ ವಿಸ್ತರಣೆ ಮಾಡಲೇಬೇಕು.

ನಂತರ ಈ ಸದನದಲ್ಲಿ ಅರಣ್ಯ ಇಲಾಖೆಗೆ ಸಂಬಂಧಪಟ್ಟ ಒಂದು ತಿದ್ದುಪಡಿಯನ್ನು ಮಂಡಿಸ ಲಾಗಿದೆ. ಆ ಒಂದು ತಿದ್ದುಪಡಿ ಪಾಸಾದರೆ ಈ ರಾಜ್ಯದಲ್ಲಿ ಸುಮಾರು ೩೦ ಸಾವಿರ ಜನರು ಬೀದಿ ಪಾಲಾಗುತ್ತಾರೆ. ಇದರಲ್ಲಿ ಬಹಳಷ್ಟು ಜನರು ಕಡುಬಡವರು, ಹರಿಜನ–ಗಿರಿಜನರು ಇದ್ದಾರೆ. ಇದು ರೆವಿನ್ಯೂ ಲ್ಯಾಂಡ್. ಗೋಮಾಳದ ಜಮೀನಾಗಿದ್ದು ೨–೩ ಎಕರೆ ಜಮೀನಿನಲ್ಲಿ ವ್ಯವಸಾಯವನ್ನು ಮಾಡಿಕೊಂಡು ಬರುತ್ತಿದ್ದಾರೆ. ಸರ್ಕಾರ ಅದನ್ನು ಸಿ ಮತ್ತು ಡಿ ಲ್ಯಾಂಡ್ ಎಂಬುದಾಗಿ ವಿಂಗಡಿಸಿ ದ್ದಾರೆ. ಈಗ ಈ ಒಂದು ತಿದ್ದುಪಡಿ ಪಾಸಾದ ಮೇಲೆ ಆ ಲ್ಯಾಂಡ್ ಎಲ್ಲಾ ಅರಣ್ಯ ಭೂಮಿಯಾಗು ತ್ತದೆ. ಸರ್ಕಾರಿ ನೌಕರರು ಅಥವಾ ಕಾರ್ಖಾನೆಯ ನೌಕರರಾದರೆ ಸಂಘಟನೆ ಮಾಡಿಕೊಂಡು ದೊಡ್ಡ

ಗಲಾಟೆ ಮಾಡುತ್ತಾರೆ. ಆದರೆ ಈ ಬಡ ರೈತರು ಆ ರೀತಿ ಹೋರಾಟ ಮಾಡುವುದಕ್ಕೆ ಸಾಧ್ಯ ಇಲ್ಲ. ಸೊರಬ ತಾಲ್ಲೂಕಿನ ತನನದಿ ಗ್ರಾಮದ ಬಡ ರೈತರೊಬ್ಬರು ಹೀಗೆ ಬರೆಯುತ್ತಾರೆ.

'' ಇಂದವಳ್ಳಿ ಹುಚ್ಚರಾಯಪ್ಪ ಮತ್ತು ಮಕ್ಕಳು ಕಳಕಳಿಯಿಂದ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ನಮ್ಮೂರಿನಲ್ಲಿ ೧೭೦ ರೈತ ಕುಟುಂಬಗಳಿದ್ದು ಪ್ರತಿಯೊಬ್ಬರು ೧ ರಿಂದ ಎರಡೂವರೆ ಎಕರೆಯಷ್ಟು ಮಾತ್ರ ಭೂಮಿಯನ್ನು ಹೊಂದಿದವರಾಗಿದ್ದೇವೆ. ಈ ಕಾರಣದಿಂದ ೧೯೫೫-೬೦ರಿಂದ ಸರ್ವೆ ನಂ. ೧೯೫ರಲ್ಲಿ ''ಬಗರ್ ಹುಕ್ಕುಂ'' ಸಾಗುವಳಿ ಮಾಡಿಕೊಳ್ಳುತ್ತಾ ಬಂದಿದ್ದೆವು. ಈ ಒಂದು ''ಬಗರ್ ಹುಕ್ಕುಂ'' ನಿಂದ ಅಂತೂ ''ಗಂಜಿ'' ಕುಡಿದು ಜೀವನ ಸಾಗಿಸುತ್ತಾ ಬಂದಿದ್ದೇವೆ. ಆದರೆ ಈಗ ಅರಣ್ಯ ಇಲಾಖೆಯವರು ''ಪ್ಲಾಂಟೇಷನ್ ಮಾಡುವುದಕ್ಕಾಗಿ'' ಗದ್ದೆಗಳನ್ನು ಹೊಡೆಸುತ್ತಲಿದ್ದಾರೆ''.

ಇದು ರೆವಿನ್ಯೂ ಲ್ಯಾಂಡ್. ಅದನ್ನು ಸಿ ಮತ್ತು ಡಿ ಲ್ಯಾಂಡ್ ಎಂಬುದಾಗಿ ಕನ್ವರ್ಟ್ ಮಾಡಿ ಆ ಬಡ ರೈತರು ಬೀದಿಗೆ ಬರುವ ಸಂದರ್ಭ ಬಂದಿದೆ.

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ನಿರುದ್ಯೋಗ ಪದವೀಧರರಿಗೆ ೫೦ ರೂಪಾಯಿಗಳನ್ನು ಭಿಕ್ಷೆಯಾಗಿ ಕೊಟ್ಟಿದ್ದೀರಿ. ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಿ ೧೦ ವರ್ಷವಾಯಿತು. ಅವರೆಲ್ಲರಿಗೂ ೪೦-೪೨ ವರ್ಷ ವಯಸ್ಸಾಗಿದೆ. ಈ ರೀತಿ ೫೦ ರೂಪಾಯಿಗಳ ಭಿಕ್ಷೆಕೊಟ್ಟರೆ ಅವರು ಯಾವ ರೀತಿ ಜೀವನ ಸಾಗಿಸಬೇಕು ಹೇಳಿ. ಅವರೇನೂ ಸರ್ಕಾರಿ ನೌಕರಿಯನ್ನು ಮಾಡುತ್ತಿಲ್ಲವೆ ? ಎಂದರೆ ನೀವು ಕೊಡುವ ಅಂಕಿಅಂಶಗಳನ್ನು ನೋಡಿದರೆ ಯಾರಿಗೂ ಕೂಡ ಅರ್ಥ ಆಗುವ ರೀತಿಯಲ್ಲಿ, ಜನರಿಗೆ ಅನುಕೂಲ ಆಗುವ ರೀತಿಯಲ್ಲಿ ಪ್ರಯತ್ನವನ್ನು ಮಾಡುತ್ತಿಲ್ಲ. ೧೯೮೭-೮೮ರ ಒಪ್ಪಲಾದ ಯೋಜನಾ ಮೊಬಲಗು ರೂ. ೮೭೦ ಕೋಟಿಗಳಾಗಿದ್ದು ಅದನ್ನು ಆಯವ್ಯಯ ಅಂದಾಜಿನಲ್ಲಿ ರೂ. ೬೧೭ ಕೋಟಿಗೆ ಏರಿಸಲಾಯಿತು ಮತ್ತೆ ಹಣದ ಕೊರತೆಯಿಂದಾಗಿ ನೀರಾವರಿ ಯೋಜನೆಗಳ ವಲಯಕ್ಕೆ ಕಡಿಮೆ ಮಾಡಲಾಯಿತು ಎಂದು ಆರ್ಥಿಕ ಸಮೀಕ್ಷೆಯು ೩ನೇ ಪುಟದಲ್ಲಿ ಹೇಳಿದ್ದೀರಿ. ಇದೇ ಪುಸ್ತಕದಲ್ಲಿ ಈ ಕೆಳಕಂಡಂತೆ ಹೇಳಿದ್ದೀರಿ. ''ಈ ಹಿಂದೆ ವಿವರಿಸಲಾದಂತೆ ಆಯವ್ಯಯದಲ್ಲಿ ತೋರಿಸಲಾಗಿರುವ ರೂ. ೨೩೭.೮೮ ಕೋಟಿಯ ಮೊಬಲಗಿನ ಬದಲು ನೀರಾವರಿ ಮತ್ತು ನೆರೆ ಹಾವಳಿ ನಿಯಂತ್ರಣದ ಮೊತ್ತ ರೂ. ೪೧.೭೧ ಕೋಟಿಗೆ ಇಳಿಸಲಾಗಿದೆ. ಮತ್ತೆ ರಾಜ್ಯದ ತೆರಿಗೆ ತಲಾವಾರು ಶೇಕಡಾ ಎಷ್ಟು ಎಂದು ಹೇಳಿದ್ದೀರಿ ೧೯೮೬-೮೭ರಲ್ಲಿ ಇದು ೧೭.೦೬ ಇದ್ದದ್ದು ೧೯೮೭-೮೮ರಲ್ಲಿ ೧೯.೫೨ ಆಗಿದೆ ಎಂದು ಹೇಳಿದ್ದೀರಿ. ಆದರೆ ಬೇರೆ ರಾಜ್ಯಗಳ ಒಂದು ಅಂಕಿಅಂಶಗಳನ್ನು ತೆಗೆದುಕೊಂಡರೆ ತಮಿಳುನಾಡು ಮತ್ತು ಆಂಧ್ರಪ್ರದೇಶವನ್ನು ಬಿಟ್ಟರೆ ಹೆಚ್ಚಿನ ತೆರಿಗೆ ಭಾರ ಹೊತ್ತಿರುವುದು ನಮ್ಮ ರಾಜ್ಯದವರೇ. ಈ ರೀತಿಯಾಗಿ ಕಳೆದ ೧೯೮೭-೮೮ನೇ ಸಾಲಿನಲ್ಲಿ ಈ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನವನ್ನು ಆರ್ ಎಲ್.ಇ.ಜಿ.ಪಿ., ಐ.ಆರ್.ಡಿ.ಪಿ. ಅಥವಾ ಅಂತ್ಯೋದಯ ಕಾರ್ಯಕ್ರಮಗಳ ಅಡಿಯಲ್ಲಿ ಯಾವುದೇ ರೀತಿಯ ಕಾರ್ಯಕ್ರಮ ಹಾಕಿಕೊಂಡಿಲ್ಲ. ಹಾಗೂ ಯಾವುದೇ ರೀತಿಯಲ್ಲಿ ಜನರ ಹಿತದೃಷ್ಟಿಯಿಂದ ಕೆಲಸ ಮಾಡುವ ಸ್ಥಿತಿಯಲ್ಲಿ ನೀವು ಇಲ್ಲ. ಇವತ್ತು ವಿಧಾನಸಭೆಯಲ್ಲಿ ಯಾವುದೇ ಒಂದು ಪ್ರಶ್ನೆಯನ್ನು ಕೇಳಿದರೂ ಜಿಲ್ಲಾ ಪರಿಷತ್ತಿನ ವ್ಯವಸ್ಥೆ ಆಗಿದೆ, ಅಲ್ಲಿ ಎಲ್ಲಾ ಅನುಕೂಲತೆ ಸಿಗುತ್ತದೆ ಎಂದು ಹೇಳುತ್ತೀರಿ. ಜಿಲ್ಲಾಪರಿಷತ್ ಹಾಗೂ ಮಂಡಲ ಪಂಚಾಯಿತಿಗಳಿಗೆ ಸುಮಾರು ೬೦೦ ಕೋಟಿ ರೂಪಾಯಿಗಳನ್ನು ಇಟ್ಟು ಕೇವಲ ೨೫೦-೩೦೦ ಕೋಟಿ ಹಣವನ್ನು ಕೂಡಾ ನಿಮಗೆ ಕೊಡುವುದಕ್ಕೆ ಆಗದೇ ಇರುವಾಗ ಈ ಹಳ್ಳಿಗಾಡಿನ, ಗ್ರಾಮಾಂತರ ಪ್ರದೇಶದ ಏಳಿಗೆ ಕೂಡಾ ಎಲ್ಲಿ ಆಗುತ್ತದೆ ಎಂದು ನಾನು ಕೇಳುತ್ತೇನೆ ಜಿಲ್ಲಾ ಪರಿಷತ್ತುಗಳ ಅವ್ಯವಸ್ಥೆ ಬಗ್ಗೆ ಗಮನಹರಿಸಿ ಮಾನ್ಯ ಮುಖ್ಯಮಂತ್ರಿಗಳು ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತನ್ನು ಹೇಳಿಸಿದ್ದಾರೆ.

''ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಬೆಳವಣಿಗೆಗೆ ನೆರವು ನೀಡುವುದಕ್ಕಾಗಿ ನನ್ನ ಸರ್ಕಾರವು ಅವುಗಳ ಕಾರ್ಯನಿರ್ವಹಣೆಯ ಬಗ್ಗೆ ಮೌಲ್ಯನಿರ್ಣಯ ಮಾಡಿ ಸುಧಾರಣಾ ಕ್ರಮಗಳನ್ನು ಆದಷ್ಟು ಶೀಘ್ರವಾಗಿ ಕೈಗೊಳ್ಳುವಂತೆ ಮಾಡಲು ಒಂದು ಸ್ಥಾಯೀ ಆಡಳಿತ ಯಂತ್ರವನ್ನು ರಚಿಸಲು ಉದ್ದೇಶಿಸಿದೆ''

ಈ ರೀತಿ ಸರ್ಕಾರ ಜನ ವಿರೋಧಿ ನೀತಿಯನ್ನು ದಯಮಾಡಿ ಅನುಸರಿಸಬೇಡಿ, ಎಂಬುದಾಗಿ ಸರ್ಕಾರವನ್ನು ಅಗ್ರಹಪಡಿಸುತ್ತಿದ್ದೇನೆ. ವಿಶೇಷ ಘಟಕ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ೧೯೮೭-೮೮ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯವರ ಬಗ್ಗೆ ತೆಗೆದುಕೊಂಡಿರುವಂತಹ ವಿಶೇಷ ಘಟಕ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ ಆ ಯೋಜನೆಯಡಿಯಲ್ಲಿ ಖರ್ಚು ಮಾಡಿರುವಂತಹ ಹಣದ ಬಗ್ಗೆ ಅಂಕಿ ಅಂಶಗಳೇ ಇಲ್ಲ. ಬಡತನದ ರೇಖೆಯಿಂದ ಕೆಳಗಡೆ ಇರತಕ್ಕಂಥ ಪರಿಶಿಷ್ಟ ಜಾತಿಯವರಿಗೆ ೨೫೦೦ ರೂಪಾಯಿಗಳು ಬೆಲೆ ಬಾಳುವ ಒಂದು ಜೊತೆ ಎತ್ತುಗಳನ್ನು ಹಾಗೂ ಬೇಕಾದಂತಹ ಬೀಜಗಳನ್ನು ಕೊಡುತ್ತೇವೆಂದು ಹೇಳಿದರು. ಈ ವರ್ಷ ಆ ಕಾರ್ಯಕ್ರಮ ಸ್ಥಗಿತವಾಗಿದೆ. ಹೋದ ವರ್ಷವೂ ಆಗಲೇ ಇಲ್ಲ. ಮಹಿಳೆಯರ ಬಗ್ಗೆ ಹೇಳುವುದಾದರೆ, ಕೇಂದ್ರ ಸರ್ಕಾರದ ಆದೇಶದ ಪ್ರಕಾರ ೫೦೦ ಜನಸಂಖ್ಯೆ ಇರುವ ಒಂದು ಹಳ್ಳಿಗೆ ಒಂದು ಮಹಿಳಾ ಮಂಡಲವನ್ನು ಕೊಡುತ್ತೇವೆಂದು ಹೇಳಿದರು, ಅದಕ್ಕಾಗಿ ಒಬ್ಬ ಮಹಿಳಾ ಮಂತ್ರಿಯೂ ಕೂಡ ಇದ್ದಾರೆ. ನಿಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಇಲಾಖೆಯಲ್ಲಿ ಇರತಕ್ಕ ನೌಕರರಿಗೆ ಸಂಬಳವನ್ನು ಏನು ಕೊಡುತ್ತಿದ್ದಾರೆ, ಆ ದುಡ್ಡನ್ನು ಈ ರಾಜ್ಯದಲ್ಲಿರುವ ಮಹಿಳಾ ಸಮಾಜಗಳ ಅಭಿವೃದ್ಧಿಗೋಸ್ಕರ ಹಣವನ್ನು ಕೊಟ್ಟು ಮಹಿಳೆಯರನ್ನು ಉದ್ಧಾರಮಾಡಬೇಕಾದರೆ ಆ ಬಗ್ಗೆ ಸರ್ಕಾರಕ್ಕೆ ಪ್ರಾಮಾಣಿಕ ಪ್ರಯತ್ನ ಇರಬೇಕು. ಅದರ ಬಗ್ಗೆಯೂ ಅಂಕಿ ಅಂಶಗಳೇ ಇಲ್ಲ. ಈ ಕಾರ್ಯಕ್ರಮವನ್ನು ನೋಡಿಕೊಳ್ಳುವುದಕ್ಕೋಸ್ಕರ ಒಬ್ಬ ಹೆಣ್ಣುಮಗಳಿಗೆ ಕೇವಲ ಕುರ್ಚಿಯನ್ನು ಕೊಟ್ಟಿದ್ದೀರೋ ಅಥವಾ ನಿಜವಾಗಿ ಆ ಬಗ್ಗೆ ಕಾರ್ಯಕ್ರಮಗಳನ್ನು ರೂಪಿಸಿ ಅದರ ಉಸ್ತುವಾರಿಯನ್ನು ನೋಡಿಕೊಳ್ಳಿ ಎಂಬುದಾಗಿ ನೇಮಿಸಿದ್ದೀರೋ ಎಂಬುದಾಗಿ ನಾನು ತಮ್ಮ ಮೂಲಕ ಸರ್ಕಾರದ ಮಂತ್ರಿಗಳನ್ನು ಕೇಳುತ್ತಿದ್ದೇನೆ. ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆ? ಇದರ ಬಗ್ಗೆ ಹೆಚ್ಚಿನ ಕಳಕಳಿ ನಿಮಗೆ ಇಲ್ಲವೆಂದು ಬೇಸರದಿಂದ ಹೇಳಬೇಕಾಗುತ್ತದೆ. ೧೯೮೬-೮೭ರಲ್ಲಿ ವಿಶೇಷ ಘಟಕ ಯೋಜನೆಯಲ್ಲಿ ೭ನೇ ಪಂಚವಾರ್ಷಿಕ ಯೋಜನೆಯ ರೀತಿ ೨೨ ತಾಲ್ಲೂಕುಗಳಿಗೆ ೧೦ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆಂದು ಹೇಳಿದ್ದೀರಿ. ಅದರ ಪೈಕಿ ನನ್ನ ತಾಲ್ಲೂಕಿನಲ್ಲೂ ೪ ಕೆಲಸಗಳನ್ನು ಹರಿಜನ್‌ವಾದ್ ಎಂಬ ಯೋಜನೆಯಲ್ಲಿ ತೆಗೆದುಕೊಂಡಿದ್ದಂತಹವು ಇನ್ನೂ ಮುಗಿದಿಲ್ಲ.

ಅದೇ ರೀತಿ ಗ್ರಾಮೀಣ ಉದ್ಯೋಗ ಭರವಸೆಯ ಯೋಜನೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ೧೯೮೬-೮೭ರಲ್ಲಿ ೫ ಜಿಲ್ಲೆಗಳಿಗೆ ೧೨೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಅದೇ ರೀತಿ ೧೯೮೭-೮೮ರಲ್ಲಿ ೬ ಜಿಲ್ಲೆಗಳಿಗೆ ೧೦೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆಂದು ಹೇಳಿದ್ದಾರೆ. ಆದರೆ ಇದರಲ್ಲಿ ಖರ್ಚಾದಂತಹ ವಿವರಗಳೇ ಇಲ್ಲ. ಈ ರೀತಿ ಹೇಳಿಸಿರುವುದಕ್ಕೆ ಕಾರಣ ಏನು ? ಅವುಗಳು ಸರಿಯಾಗಿ ಅಪೇಕ್ಷಿತ ಮಟ್ಟದಲ್ಲಿ ನಡೆಯದೇ ಇರುವುದರಿಂದ ಈ ಮಾತನ್ನು ಹೇಳಿಸಿದ್ದೀರಿ ಅಲ್ಲವೇ ? ಕಳೆದ ಒಂದು ವರ್ಷದಿಂದ ಇವುಗಳು ಸರಿಯಾಗಿ ನಡೆಯದೇ ಇರುವುದರಿಂದ ಈ ಮಾತನ್ನು ಒಂದು ತಿಂಗಳ ಹಿಂದೆ ತಾವು ಹೇಳಿದ್ದು ಈ ಬಗ್ಗೆ ಕಾರ್ಯರೂಪಕ್ಕೆ ತರುವ ಕಾರ್ಯಕ್ರಮಗಳನ್ನು ಈ ಮಧ್ಯೆ ಏನನ್ನಾದರೂ ಹಾಕಿಕೊಂಡಿದ್ದೀರಾ ? ಹಾಕಿಕೊಂಡಿದ್ದರೆ ಅವು ಯಾವ ರೂಪದ ಕಾರ್ಯಕ್ರಮಗಳನ್ನು ಎನ್ನುವುದನ್ನಾದರೂ ಇಲ್ಲಿ ತಿಳಿಸಬಹುದಾಗಿತ್ತಲ್ಲವೇ ? ಇದರ ಬಗ್ಗೆ ಪ್ರಸ್ತಾಪ ಇಲ್ಲ. ಮತ್ತೆ ಸಂಪನ್ಮೂಲ ಸಂಗ್ರಹಣೆ ಬಗ್ಗೆ ಹೇಳಬೇಕೆಂದರೆ ೧೯೮೫-೮೬ರಲ್ಲಿ ೨೧೩ ಕೋಟಿ ರೂಪಾಯಿಗಳನ್ನು ಬೇರೆ ಬೇರೆ ಬಾಬುಗಳಿಂದ ಸಂಗ್ರಹಣೆ ಮಾಡಿದ್ದರೆ ೧೯೮೬-೮೭ರಲ್ಲಿ ೪೮೧ ಕೋಟಿ ರೂಪಾಯಿ ಸಂಗ್ರಹ ಮಾಡಿದ್ದಾರೆ. ಹಾಗೆಯೇ ೧೯೮೭-೮೮ರಲ್ಲಿ ಇದುವರೆವಿಗೂ ೧೬೦೦ ಕೋಟಿ ರೂಪಾಯಿಗಳು ಆಗಿಲ್ಲ. ಎಂದರೆ ನಮ್ಮ ರಾಜ್ಯದಬೊಕ್ಕಸಕ್ಕೆ ಬೇರೆ ಬೇರೆ ರೀತಿಯಲ್ಲಿ ಬರಬೇಕಾದ ಆದಾಯ ಸೋರಿಕೆ ಆಗಿದೆ. ಇದನ್ನು ತಪ್ಪಿಸಿ ಈರಾಜ್ಯದ ಬೊಕ್ಕಸಕ್ಕೆ ಹಣವನ್ನು ತುಂಬಿಸಿ ಈ ರಾಜ್ಯದ ಜನರಿಗೆ ಕೆಲಸ ಮಾಡಬೇಕೆಂಬ ಪ್ರಸ್ತಾಪವೇ ಇದರಲ್ಲಿ ಇಲ್ಲದಿರುವಾಗ ಇಂತಹ ಗೊಂದಲಮಯವಾತಾವರಣದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕಾದರೂ ಆಗುತ್ತದೆಯೇ ? ಮಾನ್ಯ ಲಕ್ಷ್ಮೀಸಾಗರ್‌ರವರಿಗೂ ಇದು ಗೊತ್ತಿದೆ. ಅವರೂ ಶಾಸಕರಾಗಿ ಇದ್ದವರು. ಹಿಂದೆ ಬಡ್ಜೆಟ್ ಮಂಡನೆ ಮಾಡುವ ಮುನ್ನ ಎಲ್ಲೆಲ್ಲಿ ರಸ್ತೆ ಆಗಬೇಕು, ನೀರಾವರಿ ಕೆಲಸ ಆಗಬೇಕು ಎನ್ನುವ ಬಗ್ಗೆ ಶಾಸಕರಿಂದ ಕೇಳಿ ಪಡೆದು ಅವುಗಳಲ್ಲಿ ಅಗತ್ಯ ಎಂದು ಕಂಡುಬಂದವನ್ನು ಆಯವ್ಯಯದಲ್ಲಿ ಸೇರಿಸುವ ಒಂದು ಕಾರ್ಯಕ್ರಮ ನಡೆದುಬಂದಿತ್ತು. ಆದರೆ ಈಗ ಅದು ಕಾಣುತ್ತಿಲ್ಲ.

೪-೩೦ ಪಿ. ಎಂ.

ಅದು ಅಗತ್ಯವೆಂದು ಕಂಡುಬಂದರೆ ಅದನ್ನು ಬಡ್ಜೆಟ್‌ನಲ್ಲಿ ಸೇರಿಸುವಂತಹ ಪ್ರಯತ್ನವನ್ನು ಮಾಡುತ್ತಿದ್ದೆವು. ಕಳೆದ ಮೂರು ವರ್ಷಗಳಿಂದ ಬಡ್ಜೆಟ್‌ನಲ್ಲಿ ಯಾವ ಕೆಲಸಗಳನ್ನು ಸೇರಿಸಲಾಗಿದೆ ? ನಾವು ಇಂತಹ ರಸ್ತೆ, ಕೆರೆ ಕೆಲಸಗಳನ್ನು ಬಡ್ಜೆಟ್‌ನಲ್ಲಿ ಸೇರಿಸಿದ್ದೇವೆಂದು ಜನಗಳಿಗೆ ಹೇಳುತ್ತಿದ್ದೆವು. ನೀರಾವರಿ ಕೆಲಸಗಳನ್ನು ಏತ ನೀರಾವರಿಕೆಲಸಗಳನ್ನು ಮಾಡಿಯೆಂದು ಹೇಳಿದರೂ ಯಾವುದೇ ಕೆಲಸವನ್ನು ಮಾಡುವಂತಹ ಪ್ರಾಮಾಣಿಕ ಪ್ರಯತ್ನ ನಿಮ್ಮ ಕೈಯಲ್ಲಿ ಆಗಲಿಲ್ಲ, ನಿಮ್ಮಿಂದಯಾವ ಕೆಲಸ ಆಯಿತು ಹೇಳಿ ೧೯೮೮-೮೯ರಲ್ಲಿ ನಿಮ್ಮ ಪಕ್ಷದ ಶಾಸಕರಿಗೆ ಯಾವ ಕೆಲಸ ಕೊಟ್ಟಿದ್ದಿರೋ ಏನೋ ಗೊತ್ತಿಲ್ಲ, ವಿರೋಧ ಪಕ್ಷದ ಯಾವ ಶಾಸಕರನ್ನಾದರೂ ಕರೆಯಿಸಿ ನಿಮ್ಮ ಸ್ಥಿತಿಯೇನು ನಿಮಗೆ ಏನು ಕೆಲಸ ಆಗಬೇಕೆಂದು ಕೇಳಿದ್ದೀರಿ ? ಆಡಳಿತ ಪಕ್ಷದ ಶಾಸಕರ ಕ್ಷೇತ್ರಗಳಲ್ಲಿ ಏನೇನು ಕೆಲಸಗಳು ಆಗಿವೆಯೋ ನನಗೆ ಗೊತ್ತಿಲ್ಲ. ಜಿಲ್ಲಾಪರಿಷತ್‌ನಲ್ಲಿ ಶಾಸಕರು ಒಂದು ಮೂಲೆಯಲ್ಲಿ ಕುಳಿತುಕೊಳ್ಳಬೇಕು ಅಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲ. ವಿಧಾನ ಸಭೆಯಲ್ಲಿ ಒಬ್ಬ ಶಾಸಕನಾಗಿ ತನ್ನ ಕ್ಷೇತ್ರದಲ್ಲಿ ೧೫ ಲಕ್ಷ ೨೦ ಲಕ್ಷ ರೂಪಾಯಿಗಳ ಕೆಲಸ ಯಾವುದು ಬೇಕೋ ಅದನ್ನು ಜನರ ಹಿತ ದೃಷ್ಟಿಯಿಂದ ಕೇಳಿದರೆ ಅದನ್ನು ಬಡ್ಜೆಟ್‌ನಲ್ಲಿ ಸೇರಿಸುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲ. ನಿಮ್ಮ ಹತ್ತಿರ ಹಣವಿಲ್ಲ. ಈ ವ್ಯವಸ್ಥೆಗೆ ಅರ್ಥವಿದೆಯೆ ? ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದರು. ೫ ವರ್ಷಗಳ ಹಿಂದೆ ರಾಜ್ಯ ಸರ್ಕಾರಿ ನೌಕರರ ಸಂಬಳ ೩೩ ಕೋಟಿ ರೂಪಾಯಿ ಇತ್ತು. ಈಗ ಅದು ೧೧೦ ಕೋಟಿ ರೂಪಾಯಿಗಳ ಹತ್ತಿರ ಹತ್ತಿರ ಹೋಗಿದೆಯೆಂದು ರಾಜ್ಯದಲ್ಲಿ ಬಂದಂತಹ ಆದಾಯದಲ್ಲಿ ಶೇಕಡ ೪೦ ಭಾಗವನ್ನು ಸರ್ಕಾರಿ ನೌಕರ ಸಂಬಳಕ್ಕೆ ಕೊಟ್ಟರೆ ಅವರನ್ನು ತೃಪ್ತಿಪಡಿಸಿದರೆ. ರಾಜ್ಯದ ಬೊಕ್ಕಸಕ್ಕೆ ಬರತಕ್ಕ ಆದಾಯದಲ್ಲಿ ಶೇಕಡ ೪೦ ಭಾಗ ಅವರಿಗೆ ಕೊಟ್ಟರೆ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಯಾವ ರೀತಿ ಮಾಡುತ್ತೀರಿ ? ಐದು ವರ್ಷಗಳವರೆಗೆ ನೀವು ಅಧಿಕಾರಕ್ಕೆ ಬಂದಿದ್ದೀರಿ. ಮತ್ತೆ ಅಧಿಕಾರಕ್ಕೆ ಬರುತ್ತೀರೋ ಏನೋ ಆ ಚಿಂತೆಯಿಲ್ಲ. ರಾಜ್ಯದಲ್ಲಿ ಒಂದು ಬದಲಾವಣೆಯನ್ನು ಮಾಡಬೇಕೆನ್ನುವ ಕಳಕಳಿ ನಿಮಗೆ ಇದೆಯೆ? ಆ ಬಗ್ಗೆ ನೀವು ಪ್ರಯತ್ನ ಮಾಡಿದ್ದೀರಾ ? ನಾವು ಶಾಸಕರಾಗಿ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಜನರಿಗೆ ನಾವು ಮುಖ ತೋರಿಸುವುದು ಹೇಗೆ ?

ಶ್ರೀ ಜಿ. ಎಸ್. ಶಿವನಂಜಪ್ಪ.— ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ಶಾಸಕರಿಗೆ ಅವರ ಕ್ಷೇತ್ರಗಳಲ್ಲಿ ಕೆಲಸ ಮಾಡುವುದಕ್ಕೆ ಹಣ ಕೊಡಿಯೆಂದು ಹೇಳುತ್ತಿದ್ದಾರೆ. ಆಡಳಿತ ಪಕ್ಷದ ಶಾಸಕರಿಗೇ ಯಾವ ಕೆಲಸವನ್ನು ಮಾಡಿಸಿಕೊಳ್ಳುವುದಕ್ಕೆ ಆಗಿಲ್ಲ.

ಶ್ರೀ ಬಾಬುರೆಡ್ಡಿ ಎ. ತುಂಗಳ್.— ನಾವು ಕೆಲಸ ಮಾಡಿಸಿಕೊಂಡಿದ್ದೇವೆ. ನಿಮಗೆ ಕೆಲಸ ಏನು ಅನ್ನುವುದೇ ಗೊತ್ತಿಲ್ಲ,

ಶ್ರೀ ಬಿ. ಎಸ್. ಯಡಿಯೂರಪ್ಪ.— ನಾನು ಆ ಕಡೆ ಶಾಸಕರು, ಈ ಕಡೆ ಶಾಸಕರು ಎಂದು ಹೇಳುತ್ತಿಲ್ಲ. ಒಬ್ಬ ಶಾಸಕರಾಗಿ ನಾವು ಮಾಡುವುದೇನು ? ನಮ್ಮ ಭಾಗದಲ್ಲಿ ೪೦ ಲಕ್ಷ ೫೦ ಲಕ್ಷ ರೂಪಾಯಿ ಕೆಲಸ ಮಾಡಿಸುವುದಕ್ಕೆ ಯೋಗ್ಯತೆ ಇಲ್ಲದೆ ಇದ್ದರೆ ನಾವು ಇದ್ದೇನು ಪ್ರಯೋಜನ ? ಅಧಿಕಾರ ವಿಕೇಂದ್ರೀಕರಣ ಮಾಡಿದ್ದೇವೆಂದು ಹೇಳುತ್ತಾರೆ, ಅಧಿಕಾರವನ್ನು ಜಿಲ್ಲಾ ಪರಿಷತ್‌ನ ಅಧ್ಯಕ್ಷರಿಗೆ ಮತ್ತು ಮಂಡಲದ ಪ್ರಧಾನರಿಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಜಿಲ್ಲಾ ಪರಿಷತ್‌ನ ಅಧ್ಯಕ್ಷರು ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ಮೇಲೆ ಈ ಜಿಲ್ಲಾ ಪರಿಷತ್‌ನ ಮೀಟಿಂಗ್‌ಗೋಸ್ಕರ ನಿಮ್ಮ ಅಧ್ಯಕ್ಷರು ಉಪಾಧ್ಯಕ್ಷರಿಗೋಸ್ಕರ ಟಿಎ. ಡಿಎ ಎಷ್ಟೆಷ್ಟು ಖರ್ಚು ಮಾಡಿದ್ದಾರೆನ್ನುವುದನ್ನು [illegible] ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಖರ್ಚು ಮಾಡಿದ್ದಾರೆನ್ನುವ ಪಟ್ಟಿಯನು ಕೊಡಿ. ಅದು ಏನಾದರೂ ಜನರಿಗೆ ಗೊತ್ತಾದರೆ ಬಡಿಗೆ ತೆಗೆದುಕೊಂಡು ವಿಧಾನಸೌಧದ ಹತ್ತಿರ ಬರುತ್ತಾರೆ ಇಲ್ಲಿ ಏನೂ ಕೆಲಸ ಆಗಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಯಡಿಯೂರಪ್ಪನವರು ಕೇಳಿದ ಪ್ರಶ್ನೆಗೆ ನಿನ್ನೆ 'ಆ' ಪ್ರಶ್ನೆಗೆ ಉತ್ತರ ಕೊಡಲಾಗಿದೆ. ಆ ಉತ್ತರದ ಪ್ರತಿಯನ್ನು ಮಾನ್ಯ ಯಡಿಯೂರಪ್ಪನವರಿಗೆ ಕೊಟ್ಟಿದ್ದಾರೆಂದು ನಾನು ಭಾವಿಸಿಕೊಂಡಿದ್ದೇನೆ.

ಶ್ರೀ ಆರ್. ಎನ್. ನಾಯಕ್.— ಈಗ ಒಂದು ಕೆಲಸ ಮಾಡೋಣ. ಮಾನ್ಯ ಅಧ್ಯಕ್ಷರೇ ನಿಮ್ಮ ಕ್ಷೇತ್ರದಲ್ಲಿ ಈ ಸರ್ಕಾರ ಬಂದ ಮೇಲೆ ಏನಾದರೂ ಕೆಲಸ ಆಗಿದೆಯೇ ಎಂದು ಕೇಳಿ.

ಅಧ್ಯಕ್ಷರು. ನಿಮ್ಮ ಕ್ಷೇತ್ರಗಳಲ್ಲಿ ಕೆಲಸ ಆಗಿದ್ದರೆ ನನ್ನ ಕ್ಷೇತ್ರದಲ್ಲಿಯೂ ಕೆಲಸ ಆಗಿದೆ ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಹಣವೆಲ್ಲಾ ನೌಕರರ ಪಗಾರಕ್ಕೆ ಹೋಗುತ್ತಾ ಇದೆ. ಕೆಲಸ ನಮ್ಮಲ್ಲೂ ಆಗಿಲ್ಲ, ನಿಮ್ಮಲ್ಲೂ ಆಗಿಲ್ಲ.

ಶ್ರೀ ಎನ್. ಎಚ್. ಗೌಡ.— ಏನೇನು ಕೆಲಸ ಆಗಿದೆ ಎನ್ನುವುದನ್ನು ಕೇಳಿದರೆ ಗೊತ್ತಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ — ಅಧ್ಯಕ್ಷರ ಕ್ಷೇತ್ರದಲ್ಲಿ ಏನಾದರೂ ಕೆಲಸ ಆದರೆ ನನಗೆ ಗೊತ್ತಾಗಲೇಬೇಕು.

ಅಧ್ಯಕ್ಷರು.— ನೀವು ಪಕ್ಕದವರು ಅದಕ್ಕೆ ಗೊತ್ತಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.— ನಿಮ್ಮಲ್ಲಿ ಏನೇ ಕೆಲಸವಾದರೂ ನಮಗೆ ಗೊತ್ತಾಗುತ್ತದೆ.

ಅಧ್ಯಕ್ಷರು.— ನಮ್ಮಲ್ಲೂ ಆಗಿಲ್ಲ, ನಿಮ್ಮಲ್ಲೂ ಆಗಿಲ್ಲ. ಬಂದ ದುಡ್ಡೆಲ್ಲಾ ಪಗಾರಕ್ಕೆ ಹೋಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದವರಾಗಿದ್ದರೂ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಇಂತಹ ಕೆಲಸಗಳನ್ನು ಮಾಡಿಸಿಕೊಡುತ್ತೇವೆಂದು ಆಶ್ವಾಸನೆಯನ್ನು ಜನಗಳಿಗೆ ಕೊಟ್ಟಿದ್ದೇವೆ. ಅಗತ್ಯವಿರುವಂತಹ ಕೆಲಸ ಮುರ್ರಾಲ್ಕು ಕೆಲಸಗಳನ್ನು ಮಾಡದಿದ್ದರೆ ಹೇಗೆ? ಐದು ವರ್ಷಗಳಲ್ಲಿ ಅಗತ್ಯವಿರುವಂತಹ ಕೆಲಸ ಮಾಡದೆ ಹೋದರೆ ನಾವು ನಮ್ಮ ಆತ್ಮಕ್ಕೆ ಸಮಾಧಾನವಾಗುವ ರೀತಿಯಲ್ಲಿ ಶಾಸಕರಾಗಿ ಜಸ್ಟೀಸ್ ಕೊಡದಿದ್ದರೆ ಏನು ಪ್ರಯೋಜನ ? ನಾವು ಶಾಸಕರಾಗಿ ಗೆದ್ದು ಬಂದು ಟಿಎ, ಡಿಎ ಎಲ್ಲಾ ಸವಲತ್ತುಗಳನ್ನು ತೆಗೆದುಕೊಂಡು ಮಾಡುವಂತಹ ಉಪಯೋಗವಾದರೂ ಏನು ? ಅದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ ನಮ್ಮ ಸಣ್ಣ ಉಳಿತಾಯ ಯೋಜನಾ ಮಂತ್ರಿಗಳು ಬಚತ್ ತಾಲ್ಲೂಕುಗಳನ್ನು ಮಾಡಿ ಹಣ ತೆಗೆದುಕೊಂಡಿದ್ದಾರೆ. ಇವರು ಅಧಿಕಾರಕ್ಕೆ ಬಂದ ಮೇಲೆ ಉಳಿತಾಯ ಯೋಜನೆಯಲ್ಲಿ ೧೯೮೪ರಲ್ಲಿ ಕೇಂದ್ರದಿಂದ ೯೦ ಕೋಟಿ ರೂಪಾಯಿ ಬಂತು. ೮೫ರಲ್ಲಿ ೧೭೬ ಕೋಟಿ ಬಂತು, ೮೬ರಲ್ಲಿ ೧೨೦ ಕೋಟಿ ಆಯಿತು. ೮೭ರಲ್ಲಿ ಸುಮಾರು ೧೪೫ರಿಂದ ೧೫೦ ಕೋಟಿಯಷ್ಟು ದುಡ್ಡು ಬಂದಿದೆ. ನಾನು ನಮ್ಮ ತಾಲ್ಲೂಕಿನಲ್ಲಿ ಇಷ್ಟೆಲ್ಲ ಓಡಾಟ ಮಾಡಿ ಇಷ್ಟೆಲ್ಲ ಕೆಲಸ ಮಾಡಿ ಒಂದು ಕೋಟಿ ೫೦ ಲಕ್ಷ ಸಂಗ್ರಹ ಮಾಡಿದ್ದರೆ ೨–೩ ಲಕ್ಷದಷ್ಟಾದರೂ ಏನಾದರೂ ಒಂದು ಕೆಲಸ, ವಾಟರ್ ಸಪ್ಲೈ ಆಗಲಿ, ಕಟ್ಟಡ ಕಟ್ಟಿ ಕೊಡತಕ್ಕಂಥಾದ್ದು ಅಥವಾ ಏನಾದರೂ ಒಂದು ಅನುಕೂಲ ಮಾಡಿಕೊಡುವಂಥಾದ್ದು ಏನಾದರೂ ಮಾಡಿದ್ದೀರಾ ? ಅಂದರೆ ಬರುತ್ತಿರುವಂಥ ದುಡ್ಡು ಏನಾಗುತ್ತದೆ ಎಂಬುದು ಪ್ರಶ್ನೆ ಇರುವಂಥಾದ್ದು. ನಿಮ್ಮ ಪ್ರಕಾರ ಹೋದ ವರ್ಷ ಯೋಜನಾ ವೆಚ್ಚದಲ್ಲಿ ೨೫೦ ಕೋಟಿ ಕಡಿತ ಎಂದಿರಿ, ಅದು ೩೦೦ ಕೋಟಿ ಕಡಿತ ಆಗಿದೆ, ಪಿ ಡಬ್ಲ್ಯೂ.ಡಿ. ಇಲಾಖೆಯಲ್ಲಿ ೧೦೦ ಕೋಟಿ ಕೆಲಸ ಆಗಲಿಲ್ಲ. ನೀವು ಬಾಕಿ ಕೊಡಬೇಕಾಗಿರುವುದು ೭೫ ಕೋಟಿ...

ಶ್ರೀ ಎ. ಲಕ್ಷ್ಮೀಸಾಗರ್.— ಪೂರಕ ಬೇಡಿಕೆಗಳ ಮೇಲೆ ಉತ್ತರ ಕೊಡುವಾಗಲೂ ಇದೇ ಪ್ರಶ್ನೆಯನ್ನು ಎತ್ತಿದರು. ಯೋಜನಾ ವೆಚ್ಚ ವರ್ಷ ವರ್ಷ ಕಡಿಮೆಯಾಗುತ್ತಿದೆ ಎಂಬ ಮಾತನ್ನು ಹೇಳಿದರು. ಇದು ವಾಸ್ತವಕ್ಕೆ ದೂರವಾಗಿದೆ. ಬಡ್ಜೆಟ್ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ ಯೋಜನಾ ವೆಚ್ಚ ಜಾಸ್ತಿ ಮಾಡಿದ್ದೇವೆ ಎಂದು. ಇಷ್ಟು ತೊಂದರೆ ಇದ್ದರೂ, ಬರಗಾಲ ಇದ್ದರೂ ಯೋಜನಾ ವೆಚ್ಚದಲ್ಲಿ ಕಡಿತವಾಗಿಲ್ಲ ಎಂಬ ಮಾತನ್ನು ಹೇಳಿದ್ದಾರೆ. ಆಗಿದೆ ಎಂದರೆ ಏನು ಹೇಳೋಣ ?

ಶ್ರೀ ಬಿ. ಎಸ್. ಯಡಿಯೂರಪ್ಪ — ನಿಮ್ಮ ಯೋಜನಾ ವೆಚ್ಚದಲ್ಲಿ ಜಾಸ್ತಿ ಖರ್ಚಾಗಿದ್ದರೆ, ನಿಮ್ಮ ಹಣಕಾಸಿನ ಸ್ಥಿತಿ ಸರಿಯಾಗಿ ಇದ್ದರೆ ಮಾರ್ಚ್ ತಿಂಗಳ ಕೊನೆಯಲ್ಲಿ ನಿಮ್ಮ ಅಧಿಕಾರಿಗಳು ಅಲ್ಲಿ ರಸ್ತೆ ಮುಂತಾದ ಕೆಲಸಗಳಲ್ಲಿ ಹಗಲು ರಾತ್ರಿ ಶ್ರಮಪಡುತ್ತಾ ಇರಬೇಕಾಗಿತ್ತು. ಆದರೆ ಅವರು ಏನೂ ಕೆಲಸ ಇಲ್ಲದೇ ಬೆಂಗಳೂರಿನಲ್ಲಿ, ವಿಧಾನಸೌಧದಲ್ಲಿ ಓಡಾಡುತ್ತಿದ್ದಾರೆ. ಪೆಟ್ರೋಲ್ ಬಿಲ್ ಕೊಟ್ಟಿಲ್ಲ, ಡೀಸಲ್ ಬಿಲ್ ಕೊಟ್ಟಿಲ್ಲ, ಪಂಪ್‌ನವರಿಗೆ ಹಣ ಕೊಟ್ಟಿಲ್ಲ. ಅವರಿಗೆ ಮುಖ ತೋರಿಸಲು ಆಗುತ್ತಿಲ್ಲ. ಆದ್ದರಿಂದ ಎನ್ ಓ.ಸಿ.ಗೋಸ್ಕರ ಇಲ್ಲಿ ಓಡಾಡುತ್ತಿದ್ದಾರೆ. ಹಾಗಾದರೆ ದುಡ್ಡು ಏನು ಆಯಿತು ? ನಾನು ಕೇಳುವುದೇನೆಂದರೆ ನೀವು ಆನಂದದಿಂದ ನಿದ್ದೆ ಮಾಡುತ್ತಿದ್ದೀರಾ ? ಮಾನ್ಯ ಮಂತ್ರಿಗಳು ತಮ್ಮ ಜಿಲ್ಲೆ, ಕ್ಷೇತ್ರದ ಯೋಚನೆ ಬಿಟ್ಟು ಇಡೀ ರಾಜ್ಯದಲ್ಲಿ ನಿಮ್ಮ ಇಲಾಖೆಯಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ಏನಾದರೂ ಪ್ರಯತ್ನ ಮಾಡಿದ್ದಾರೆಯೋ ? ಇವತ್ತು ಜಿಲ್ಲಾ ಪರಿಷತ್ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇವೆ.

ಇಷ್ಟೊಂದು ದೊಡ್ಡ ಆಸೆಯನ್ನು ಈ ರಾಜ್ಯದ ಜನತೆಯಲ್ಲಿ ಹುಟ್ಟಿಸಿದ್ದೀರಿ ೯ ಕೋಟಿಯನ್ನು ನೀವು ತೆಗೆದಿಟ್ಟಿದ್ದರಲ್ಲಿ ಕೇವಲ ೨೫೦ ರಿಂದ ೩೦೦ ಲಕ್ಷವನ್ನು ಕೊಟ್ಟಿಲ್ಲ. ಇದರ ಬಗ್ಗೆ ಯೋಚನೆ ಮಾಡಿದ್ದೀರಾ ? ದಯವಿಟ್ಟು ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ನಿಮ್ಮ ಅಂಕಿಅಂಶ ಗಳಿಂದ ಯಾರಿಗೂ ತೃಪ್ತಿ ಆಗುವುದಿಲ್ಲ. ಪ್ರಾಮಾಣಿಕವಾಗಿ ಲಕ್ಷಾಂತರ ರೈತ ಜನರಿಗೆ, ಬಡವರಿಗೆ, ಹರಿಜನ ಗಿರಿಜನರಿಗೆ ನೀವು ಏನು ಅನುಕೂಲ ಮಾಡಿಕೊಡಬೇಕಿತ್ತು, ಅದನ್ನು ಕಳೆದ ಎರಡು ವರ್ಷ ಗಳಲ್ಲಿ ೧೦೦ ಜನರಿಗೂ ಹಳ್ಳಿಗಳಲ್ಲಿ ಸೈಟುಗಳನ್ನು ಕೊಡುವಂಥ ಪ್ರಯತ್ನವನ್ನು ನೀವು ಮಾಡಲಿಲ್ಲ. ಇದರ ಬದಲಿಗೆ ಮುಂದಿನ ವರ್ಷಕ್ಕೆ ಎಲ್ಲಾ ಬಡವರಿಗೂ ಸೈಟುಗಳನ್ನು ಹಂಚುತ್ತೇವೆ ಎಂಬ ಕಾರ್ಯ ಕ್ರಮವನ್ನು ಹಾಕಿಕೊಂಡಿದ್ದೀರಿ. ಯಾವ ಸರ್ಕಾರ ಕಳೆದ ಒಂದೂವರೆ ಎರಡು ವರ್ಷಗಳಿಂದ ಬಡವರಿಗೆ ಸೈಟುಗಳನ್ನು ಕೊಟ್ಟಿಲ್ಲ, ಯಾವ ಸರ್ಕಾರ ಕಳೆದ ೨೫-೩೦ ವರ್ಷಗಳಿಂದ ಎರಡು ಎಕರೆ, ಮೂರು ಎಕರೆ ಬಗರ್ ಹುಕುಂ ಸಾಗುವಳಿ ಮಾಡಿದಂಥ ರೈತರೇನು ಇದ್ದರು ಅವರನ್ನು ಹೊರಗೆ ಹಾಕುವಂಥ ಪ್ರಯತ್ನ ಮಾಡಿದೆ, ಇದಕ್ಕೆ ಏನು ಅನ್ನಬೇಕು ? ನಿಮ್ಮ ಯೋಜನೆ, ಬಜೆಟ್, ಅವರಿಗೆ ತಲುಪದಿದ್ದರೂ ಚಿಂತೆ ಇಲ್ಲ. ಭಗವಂತ ಕೊಟ್ಟಿರುವ ಭೂಮಿಯಲ್ಲಿ, ಎರಡು ಎಕರೆ ಜಮೀನಿನಲ್ಲಿ ದುಡಿದುಕೊಂಡು ಆತ ನೆಮ್ಮದಿಯಿಂದ ಜೀವನ ಮಾಡುತ್ತಿದ್ದ ಪ್ಲಾಂಟರುಗಳಿಗೆ ಅವರಿಗೆ ಅನುಕೂಲ ವಾದ ಜಮೀನು ಕೊಡಿ. ಅದರ ಬಗ್ಗೆ ನಾವು ಚಿಂತೆ ಮಾಡುವುದಿಲ್ಲ. ಆದರೆ ಬಡವರನ್ನು ಹೊರಗೆ ಹಾಕುವಂಥ ಪ್ರಯತ್ನವನ್ನು ದಯವಿಟ್ಟು ಮಾಡಬೇಡಿ. ಈ ಮಾತನ್ನು ಹೇಳುತ್ತಾ, ಏನು ಗೊಂದಲ ವನ್ನು ಉಂಟು ಮಾಡಿಕೊಂಡಿದ್ದೀರಿ, ಅದನ್ನು ಸ್ವಲ್ಪ ಬದಿಗಿಟ್ಟು ಇತ್ತೀಚೆಗೆ ಏನು ಐದು ವರ್ಷಗಳ ಸಾಧನೆಯ ಮೇಳವನ್ನು ಮಾಡಿದಿರಿ. ಆ ಮೇಳವೇ ಕೊನೆಯಾಗಬಾರದು. ಅದು ಆಗಬಾರದು ಎನ್ನುವ ಆಸೆ ಇದ್ದರೆ ಪರಸ್ಪರ ಬಡಿದಾಟವನ್ನು ತಗೆದಿಟ್ಟು ಈ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಪ್ರಾಮಾಣಿಕವಾಗಿ ಮಂತ್ರಿಗಳು ಸಂಬಂಧಪಟ್ಟ ಇಲಾಖೆಗಳಲ್ಲಿ ಏನಾಗುತ್ತಿದೆ, ಜನರ ಕಷ್ಟನಷ್ಟಗಳು ಏನಿವೆ ಎಂದು ತಿಳಿದುಕೊಂಡು ಅವರ ಕಣ್ಣೀರನ್ನು ನಿಲ್ಲಿಸುವಂಥ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ, ಈ ಜನ ವಿರೋಧಿ ಶಾಸನವನ್ನು ತರಬೇಕೆಂದು ಏನು ಪ್ರಯತ್ನ ಮಾಡುತ್ತಿದ್ದೀರಿ, ನಿಮ್ಮ ಆಡಳಿತ ವೈಫಲ್ಯವನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ, ಶಾಸಕರ ಅಧಿಕಾರದ ಬಗ್ಗೆ ಇಡೀ ದೇಶದಲ್ಲಿ ಚರ್ಚೆಯಾಗಬೇಕೆಂದು ಹೇಳು ತ್ತಿದ್ದಾರೆ. ಯಾವ ರಾಜ್ಯದ ಒಬ್ಬ ಮುಖ್ಯಮಂತ್ರಿ ಈ ರಾಜ್ಯದಲ್ಲಿರುವ ಜನರು ಕಣ್ಣೀರಲ್ಲಿ ಕೈತೊಳೆಯಲು ಕಾರಣಕರ್ತರು ಆಗಿದ್ದಾರೆ. ಅವರು ಹೇಳುತ್ತಾರೆ ಇದರ ಬಗ್ಗೆ ದೇಶದಲ್ಲಿ ವ್ಯಾಪಕ ಚರ್ಚೆ ಆಗಬೇಕು ಎಂದು.

ವ್ಯಾಪಕವಾದ ಚರ್ಚೆಯಾಗಬೇಕೆಂದು ಹೇಳುತ್ತಿರುವುದು ನನಗೆ ಅರ್ಥವಾಗುತ್ತಿಲ್ಲ. ಇನ್ನು ಕೊನೆಯದಾಗಿ, ಈ ರಾಜ್ಯದ ಜನತೆ, ಶಾಸಕರನ್ನು ಆರಿಸಿ, ವಿಧಾನ ಸೌಧಕ್ಕೆ ಕಳಿಸುತ್ತಿದ್ದಾರೆ, ಮತ್ತು ಅವರಿಗಿರತಕ್ಕ ಗೌರವವನ್ನು ಕಾಪಾಡಿಕೊಂಡು ಬರುತ್ತಿದ್ದಾರೆ. ಸರ್ಕಾರ ಮಾಡುವಂತಹ ಸಂಗತಿಗಳು ಹೊರಗಡೆ ಹೋಗುತ್ತವೆ, ಎಂದು ಶಾಸಕರ ಬಾಯಿಮುಚ್ಚಿಸುವ ಕಾಯಿದೆಯನ್ನು ತರುತ್ತಿದ್ದಾರೆ. ಇವತ್ತು ಈ ಶಾಸನದ ಬಗ್ಗೆ ವ್ಯಾಪಕವಾದ ಚರ್ಚೆ ಆಗಬೇಕೆಂದು ಹೇಳುವುದಕ್ಕೆ ಅರ್ಥವೆಲ್ಲಿದೆ ? ಇವತ್ತು ಶಾಸಕರ ಬಾಯಿ ಮುಚ್ಚಿಸುವ ಪ್ರಯತ್ನ ಮಾಡುತ್ತಿದ್ದಾರೆ. ತಾವು ಮುಖ್ಯ ಮಂತ್ರಿಗಳಿಗೆ ಸರಿಯಾದ ಬುದ್ಧಿ ಹೇಳಿ ಈ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಬೇಕು. ತನ್ಮೂಲಕ ಚುನಾಯಿತ ಸದಸ್ಯರ ಗೌರವವನ್ನು ಉಳಿಸಬೇಕೆಂದು ಹೇಳಿ, ಈ ಬಜೆಟ್ ಮೇಲೆ ಮಾತ ನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಇವತ್ತು ನಾನು ಭಾಷಣ ಮುಗಿಸುವುದಕ್ಕೆ ಆಗುತ್ತದೆಯೋ...

ಅಧ್ಯಕ್ಷರು.—ಇವತ್ತು ಸಂಜೆ ೬ ಗಂಟೆಯವರೆವಿಗೂ ಕುಳಿತುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ನಾವು ಕುಳಿತುಕೊಳ್ಳಬಹುದು, ಆದರೆ ಎಲ್ಲಾ ಸದಸ್ಯರೂ ಕುಳಿತು ಕೊಳ್ಳುತ್ತಾರೆಯೋ ?

ಅಧ್ಯಕ್ಷರು.—ಅನಿವಾರ್ಯ, ನಾವೂ, ನೀವೂ ಎಲ್ಲರೂ ಕುಳಿತುಕೊಳ್ಳಬೇಕು.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹಣಕಾಸಿನ ಸಚಿವರೂ ಕೂಡ ಆಗಿದ್ದಾರೆ. ಅವರು ಮಂಡಿಸಿರತಕ್ಕ ಈ ಆಯವ್ಯಯ ಪತ್ರವನ್ನು ನಾನು ವಿರೋಧಿಸಿ ಭಾಷಣ ಮಾಡುವುದಕ್ಕೆ ನಿಂತಿದ್ದೇನೆ. ೧೯೮೩ ರಿಂದ ಅಧಿಕಾರದಲ್ಲಿತರಕ್ಕಂಥ ಜನತಾ ಸರ್ಕಾರ, ೫ ವರ್ಷದ ಆಳ್ವಿಕೆ ಅಂತ್ಯಗೊಂಡು, ೬ನೇ ವರ್ಷಕ್ಕೆ ಅಡಿ ಇಟ್ಟಿದೆ. ಈ ಸರ್ಕಾರದ ಆರ್ಥಿಕ ಚಿತ್ರ, ಆರ್ಥಿಕ ಪರಿಸ್ಥಿತಿ ಬಗ್ಗೆ ನೀಡಿರುವ ವಿವರಣೆಗಳನ್ನು ಅನೇಕ ಬಾರಿ ನಮ್ಮ ತುಲನಾತ್ಮಕ ಚರ್ಚೆಗೆ ಸದಾಕಾಲ ನಾವು ಒಳಪಡಿಸಿದ್ದೇವೆ. ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಒಪ್ಪುತ್ತೇನೆ. ಯಾವುದೇ ಸರ್ಕಾರ ಇದ್ದಾಗಲೂ, ಅದು ಯಾವುದೇ ಪಕ್ಷದ್ದು ಇರಬಹುದು, ಸರ್ಕಾರ ಇದ್ದಾಗ ಬೆಳವಣಿಗೆಗೆ ಹೆಚ್ಚಿನ ಸಹಕಾರ ಕೊಡತಕ್ಕಂಥ ತನ್ಮೂಲಕ ಆರ್ಥಿಕ ಪರಿಸ್ಥಿತಿಯು ಬೆಳವಣಿಗೆಯನ್ನು ಮಾಡಿ, ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಶಿಸ್ತಿಗೆ ಒಳಪಡಿಸಿ, ತನ್ಮೂಲಕ ಬೆಳವಣಿಗೆಯನ್ನು ಕಾಣತಕ್ಕಂಥ ವಿಚಾರಧಾರೆಗೆ ನಮಗೆ ಬೇಕಾಗಿರತಕ್ಕಂಥ ಪ್ರಾಮಾಣಿಕ ಪ್ರಯತ್ನ ಆಡಳಿತವನ್ನು ಸರಿಯಾದ ದಿಸೆಯಲ್ಲಿ ತೆಗೆದುಕೊಂಡು ಹೋಗತಕ್ಕಂಥ ಪರಿಸ್ಥಿತಿಯನ್ನು ನಾವು ನೋಡಿದರೆ, ಅಲ್ಲಿ ಒಂದು ಪ್ರಾಮಾಣಿಕ ಪ್ರಯತ್ನ ಇದೆ. ಬೆಳವಣಿಗೆ ಆಗುತ್ತದೆ ಎಂಬ ಭಾವನೆಯನ್ನು ನಾವು ಇಟ್ಟುಕೊಳ್ಳು ವಂತಿಲ್ಲ. ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ಒಂದು ಸರ್ಕಾರ, ಈ ಒಂದು ವಿಚಾರಧಾರೆಯನ್ನು ಕೈಬಿಡತಕ್ಕಂಥ ಪರಿಸ್ಥಿತಿ ಇವತ್ತು ಜನಸಾಮಾನ್ಯರಲ್ಲಿ ಉಂಟಾಗತಕ್ಕಂಥ ಸಂದರ್ಭ ಒದಗಿಬಂದರೆ ಅದು ಖೇದದ ಮಾತು ಅಷ್ಟೇ ಅಲ್ಲ, ಇದು ಒಂದು ದುರಾದೃಷ್ಟದ ಮತ್ತು ಆತಂಕದ ಮಾತು ಎನ್ನತಕ್ಕಂಥ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ನಾವು ಇಟ್ಟುಕೊಳ್ಳಬೇಕಾಗುತ್ತದೆ. ಇವತ್ತು ಜನಸಾಮಾನ್ಯರ ಭಾವನೆ ಏನಿದೆ ಪಂಡಿತರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ, ಇದನ್ನೂ ಕೂಡ ಆಮೇಲೆ ಮಾತನಾಡೋಣ ಮಾನ್ಯ ಮುಖ್ಯಮಂತ್ರಿಗಳ ಆರ್ಥಿಕ ಪರಿಸ್ಥಿತಿಯ ಬಗ್ಗೆಯೂ ಅನಂತರ ಬರುತ್ತೇನೆ. ಜನಸಾಮಾನ್ಯರ ಭಾವನೆಗಳು ಇವತ್ತು ಏನಿದೆ ? ಈ ರಾಜ್ಯ ಪಂಡಿತರ ವಿಚಾರ ಅಲ್ಲ, ಪಾಮರರ ಅಭಿಪ್ರಾಯಗಳು ಏನಿದೆ ಎಂಬುದನ್ನು ನೋಡಬೇಕು. ಒಂದು ಸರಕಾರ ತನ್ನ ಕಾರ್ಯಾಂಗದ ಮುಖಾಂತರ, ಹಲವಾರು ಇಲಾಖೆಗಳ ಮುಖಾಂತರ ತನ್ನ ಕರ್ತವ್ಯಗಳನ್ನು ನೆರವೇರಿಸತಕ್ಕ ಸಂದರ್ಭದಲ್ಲಿ ಅದರ ಫಲಾನುಭವಿಗಳು ಸದಾಕಾಲ ಅಲ್ಲಿ ಕಾಯುತ್ತಿರುತ್ತಾರೆ. ಯಾವುದಾದರೂ ಒಂದು ಸೌಲಭ್ಯ ಸಿಗಬಹುದೆಂಬ ದೃಷ್ಟಿಯಿಂದ ಕಾಯುತ್ತಿರುತ್ತಾರೆ. ಸಮಾಜದಲ್ಲಿರ ತಕ್ಕಂಥ ದುರ್ಬಲವರ್ಗದವರು ಇರಬಹುದು, ಹರಿಜನ ಗಿರಿಜನರು ಇರಬಹುದು, ಮುಸಲ್ಮಾನ್ ಕ್ರಿಶ್ಚಿಯನ್ ಮುಂತಾದ ಅಲ್ಪಸಂಖ್ಯಾತ ಬಾಂಧವರು ಇರಬಹುದು, ನಮ್ಮ ಸಮಾಜದಲ್ಲಿ ಶೇಕಡ ೭೦ ರಷ್ಟು ತುಂಬಿಕೊಂಡಿರತಕ್ಕಂಥ ಫಾರ್ಮಿಂಗ್ ಕಮ್ಯೂನಿಟಿ ಅಂದರೆ ರೈತಬಾಂಧವರು ಇರಬಹುದು, ಸಮಾಜದ ಈ ವರ್ಗಗಳು, ಈ ಆರ್ಥಿಕ ಚಿತ್ರದ ಹಿನ್ನೆಲೆಯಲ್ಲಿ ನಮ್ಮ ಬೆಳವಣಿಗೆ ಯಾವರೀತಿ ಆದೀತು ಅದಕ್ಕೆ ರಾಜ್ಯ ಸರಕಾರ ಯಾವರೀತಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಎನ್ನತಕ್ಕಂಥ ವಿಚಾರವನ್ನು ಸದಾಕಾಲ ಸರಕಾರದಿಂದ ನಿರೀಕ್ಷೆ ಮಾಡುತ್ತಿರುತ್ತಾರೆ. ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ಸರಕಾರ ಇದರ ಬಗ್ಗೆ ಯೋಚನೆ ಮಾಡಿ ಕಾರ್ಯಕ್ರಮ ಹಾಕುವುದನ್ನು ನಾವು ಕಂಡಿದ್ದೇವೆ. ಇದಕ್ಕೆ ಮೂಲ ಭೂತವಾಗಿ ಯಾವ ಒಂದು ಪ್ಲಾನ್ ಸೈಜ್ ಫಾರ್ ಕರೆಂಟ್ ಫೈನಾನ್ಷಿಯಲ್ ಇಯರ್ ಯಾವರೀತಿ ಇರಬೇಕು ಎನ್ನತಕ್ಕಂಥ ಮಾತನ್ನು ನಾವು ಆಡುತ್ತೇವೆ. ಆ ವರ್ಷದ ಯೋಜನಾ ಗಾತ್ರದ ಬಗ್ಗೆ ನಾವು ಹೆಚ್ಚಿನ ಗಮನವನ್ನು ನೀಡಬೇಕು. ನಾವು ಯೋಜನಾ ಗಾತ್ರವನ್ನು ಜಾಸ್ತಿ ಮಾಡಿದರೆ, ವರ್ಷದಿಂದ ವರ್ಷಕ್ಕೆ ಜಾಸ್ತಿ ಮಾಡುತ್ತಾ ಹೋದರೆ, ಸಮಾಜದಲ್ಲಿರತಕ್ಕಂಥ ಇಂತಹ ಜನತೆಯ ಬೇಡಿಕೆ ಗಳಿಗೆ ನಾವು ಗಮನ ಕೊಡತಕ್ಕದ್ದು, ಕರ್ತವ್ಯ ನೆರವೇರಿಸತಕ್ಕಂಥದ್ದು, ಉತ್ತೇಜನ ಕೊಡ ತಕ್ಕಂಥದ್ದು ಇದಕ್ಕೆ ಸುಮಾರಾಗಿ ಗಮನ ಬೀಳುತ್ತದೆ. ಇರತಕ್ಕಂಥ ಪ್ಲಾನ್ ಸೈಜ್ ಸ್ಲ್ಯಾಷ್ ಆಗುತ್ತಾ ಹೋದರೆ, ಯೋಜನಾ ಆಯೋಗದವರು ಏನು ಯೋಜನೆಯನ್ನು ಅಂತಿಮಗೊಳಿಸಿರುತ್ತಾರೆ ಆ ಯೋಜನಾ ಗಾತ್ರ ಕುಗ್ಗುವಂತಹ ಒಂದು ಆರ್ಥಿಕ ಪರಿಸ್ಥಿತಿ ಬಂದರೆ, ಸಹಜವಾಗಿ ಯಾವ ಕಾರ್ಯ ಕ್ರಮಗಳನ್ನು ನೀವು ರಾಜ್ಯಪಾಲರ ಭಾಷಣದಲ್ಲಿ ಪಾಲಿಸಿ ಮ್ಯಾಟರ್ ಎಂದು ತಾವು ಹೇಳಿರುತ್ತೀರಿ, ನೀತಿಯ ಪ್ರಶ್ನೆಯಾಗಿ ಆಯವ್ಯಯ ಪತ್ರದಲ್ಲಿ ನಮೂದು ಮಾಡಿರುತ್ತೀರಿ, ಆ ಕರ್ತವ್ಯಗಳನ್ನು ನೆರವೇರಿಸುವುದಕ್ಕೆ ನಿಮ್ಮಿಂದ ಆಗುವುದಿಲ್ಲ. ಈ ವರ್ಷದ ಯೋಜನಾ ಗಾತ್ರ ಒಂಭೈನೂರು ಚಿಲ್ಲರೆ ಕೋಟಿ ಇದೆ. ಇದನ್ನು ಯೋಜನಾ ಆಯೋಗದವರು ಒಪ್ಪಿದ್ದಾರೆ. ಇದನ್ನು ಒಪ್ಪಬೇಕೆಂದು ನಾವು ಸಹಜವಾಗಿ ಒತ್ತಡವನ್ನು ಹೇರತಕ್ಕದ್ದು ಸುಲಭ ನಾವು ರಿಸೋರ್ಸಸ್ ಮೊಬಿಲೈಸೇಷನ್ ಮಾಡುತ್ತೇವೆ ಸಂಪನ್ಮೂಲಗಳನ್ನು ಹುಡುಕತಕ್ಕ ವಿಚಾರದಲ್ಲಿ ಇಷ್ಟಿಷ್ಟು ಕಾರ್ಯಕ್ರಮಗಳನ್ನು ಹಾಕಿದ್ದೇವೆ ಎಂಬ

ಮಾತನ್ನು ತಾವು ಅವರಿಗೆ ಹೇಳುತ್ತೀರಿ. ಅದು ನಿಮ್ಮಿಂದ ಆಗದೇ ಇದ್ದರೆ, ಪ್ಲಾನ್ ಸೈಜ್ ಕುಗ್ಗುವುದಕ್ಕೆ ನೀವೇ ಕಾರಣಭೂತರಾಗುತ್ತೀರಿ. ಆಡಳಿತವನ್ನು ಸರಿಯಾದಂಥ ದಿಸೆಯಲ್ಲಿ ತೆಗೆದು ಕೊಂಡು ಹೋದರೆ ಪ್ಲಾನ್ ಸೈಜ್ ಕುಗ್ಗುವುದಕ್ಕೆ ಕಾರಣ ಇಲ್ಲ ಎಂಬುದು ನಮಗೆ ಕಂಡುಬರುತ್ತದೆ. ಇದು ಇವತ್ತಿನ ಮಾತಲ್ಲ ಹಲವಾರು ವರ್ಷಗಳ ಆರ್ಥಿಕ ವಿಚಾರ ನಮ್ಮ ಅನುಭವದಲ್ಲಿ ಬಂದಿರ ತಕ್ಕದ್ದು. ಶಾಸನಸಭೆಗಳ ಸದಸ್ಯರಾಗಿ ಇರಬಹುದು ಅಥವಾ ಶಾಸನಸಭೆಗಳ ಸದಸ್ಯರಾಗದ ಜನ ಸಾಮಾನ್ಯರ ಮನಸ್ಸಿನಲ್ಲಿ ಇರತಕ್ಕ ವಿಚಾರ ಇರಬಹುದು. ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರುವಹಾಗೆ ಇದ್ದರೆ ಸುಮಾರಾಗಿ ಇವರ ಸರಕಾರ ಬಂದಮೇಲೆ ಯೋಜನಾ ಗಾತ್ರವನ್ನು ಎಷ್ಟಕ್ಕೆ ಯೋಜನಾ ಆಯೋಗದವರು ನಿಗದಿ ಮಾಡಿದ್ದಾರೆ ಅದು ನಂತರ ಯಾವರೀತಿ ಕುಗ್ಗುತ್ತಾ ಬಂದಿದೆ ಎಂಬುದನ್ನು ಹೇಳುತ್ತೇನೆ. ೧೯೮೩-೮೪ ರಿಂದ ಯೋಜನಾ ಗಾತ್ರ ಯಾವರೀತಿ ಸ್ಲ್ಯಾಷ್ ಡೌನ್ ಆಗುತ್ತಿದೆ ಎಂಬುದನ್ನು ಸುಮ್ಮನೆ ನಿಮ್ಮ ಗಮನಕ್ಕೆ ತರುತ್ತೇನೆ. ೧೯೮೩-೮೪ ರಲ್ಲಿ ಪ್ಲಾನಿಂಗ್ ಕಮಿಷನ್‌ನವರು ೫೭೫ ಕೋಟಿ ಯೋಜನಾ ಗಾತ್ರವನ್ನು ಅಪ್ರೂವ್ ಮಾಡಿದರು.

ಆದರೆ ಆಕ್ಚುಯಲ್ ಪ್ಲಾನ್ ಔಟ್‌ಲೇ ೧೯೮೪-೮೫ರಲ್ಲಿ ಎಷ್ಟಾಯಿತೆಂದರೆ ೬೫೦.೫೮ ಕೋಟಿ ರೂಪಾಯಿಗಳು. ಆದರೆ ನೀವು ನ್ಯಾಷನಲ್ ಪ್ಲಾನಿಂಗ್ ಕಮಿಷನ್‌ನಲ್ಲಿ ಅಪ್ರೂವ್ ಮಾಡಿಸಿಕೊಂಡಿದ್ದುದ? ೭೩೪.೨೪ ಕೋಟಿ ರೂಪಾಯಿಗಳು. ಅಪ್ರೂವ್ ಮಾಡಿಸಿಕೊಂಡಿದ್ದರಲ್ಲಿ ಎಷ್ಟಕ್ಕೆ ಇಳಿಯಿತು ೬೫೦.೫೮ ಕೋಟಿ ರೂಪಾಯಿಗಳಿಗೆ ಇಳಿಯಿತು. ಆಮೇಲೆ ೬೪೩.೬೮ crores as against 651 crores in 85–86. 636.32 crores as against 765 crores in 86–87. ಆಮೇಲೆ ೧೯೮೫-೮೬ನೇ ಇಸವಿಯಲ್ಲಿ ಎಲ್ಲಿಗೆ ಹೋಯಿತೆಂದರೆ ೭೬೫ ಕೋಟಿ ರೂಪಾಯಿಗಳಿಗೆ ಪ್ಲಾನಿಂಗ್ ಕಮಿಷನ್‌ನಲ್ಲಿ ಅಪ್ರೂವ್ ತೆಗೆದುಕೊಂಡು ೬೩೬.೩೨ ಕೋಟಿ ರೂಪಾಯಿಗಳಿಗೆ ಇಳಿಯಿತು. ನಂತರ ೮೭-೮೮ರಲ್ಲಿ ೮೭೦ ಕೋಟಿ ರೂಪಾಯಿಗಳಿಗೆ ಅಪ್ರೂವ್ ಮಾಡಿಸಿಕೊಂಡು ೫೮೩, ಕೋಟಿ ರೂಪಾಯಿಗಳಿಗೆ ಇಳಿಯಿತು. ಇಷ್ಟು ಉದಾಹರಣೆ ಕೊಟ್ಟಿದ್ದೇನೆ ಇಷ್ಟು ೧೯೮೭-೮೮ರವರೆಗೆ ಆಯಿತು. ಆಮೇಲೆ ೧೯೮೮-೮೯ ಪ್ಲಾನ್ ಔಟ್ ಲೇ ಫಿಕ್ಸ್ ಮಾಡುತ್ತೀರಿ ಒಂದು ೯೦೦ ಕೋಟಿ ರೂಪಾಯಿಗಳಿಗೆಂದು ಇಟ್ಟುಕೊಳ್ಳಿ, We are sure to see the position. Again this plan size is going to be diminished. ಇಷ್ಟು ನೋಡಿದರೂ ಪ್ರತಿ ಸಾರಿಯೂ ಕಡಿಮೆ ಯಾಗುತ್ತಲೇ ಬರುತ್ತಿದೆ. ಇನ್ನು ರಿಸೋರ್ಸಸ್ ಮೊಬಿಲೈಜೇಷನ್ ಬಹಳ ಮುಖ್ಯವಾಗಿರತಕ್ಕಂಥ ವಿಚಾರ. ನಮಗೆಲ್ಲಾ ಗೊತ್ತಿರುವ ಹಾಗೆ ರಿಸೋರ್ಸ್ ಮೊಬಿಲೈಜೇಷನ್ ಮಾಡುವುದರಲ್ಲಿ ರಾಜ್ಯ ಸರ್ಕಾರ ಪದೇ ಪದೇ ಮುಂದಕ್ಕೆ ಇಡತಕ್ಕಂಥ ಹೆಜ್ಜೆ ಹಿಂದಕ್ಕೆ ಇಟ್ಟುಕೊಂಡೇ ಬಂದಿರುವುದು ನಮಗೆಲ್ಲಾ ಗೊತ್ತಿರುವ ವಿಚಾರ ರಿಸೋರ್ಸ್ ಮೊಬಿಲೈಜೇಷನ್ ವಿಚಾರದಲ್ಲಿ ಹೇಳುವುದಾದರೆ ೩೭೪.೭೧ ಕೋಟಿ ರೂಪಾಯಿಗಳಲ್ಲಿ ಕಳೆದ ಒಂದು ವರ್ಷದಲ್ಲಿ ಕಡಿಮೆ ಆಯಿತು. ಅಲ್ಲಿಗೆ ಎಲ್ಲಿಗೆ ಹೋಯಿತು ನಿಮ್ಮ ರಿಸೋರ್ಸ್ ಮೊಬಿಲೈಜೇಷನ್ಸ್, ಇದರಲ್ಲಿ ವ್ಯತ್ಯಾಸ ಸುಮಾರು ೪೦-೪೫ ಕೋಟಿ ರೂಪಾಯಿಗಳಾಯಿತು. ಇಷ್ಟೊಂದು ಡಿಫಿಸಿಟ್ ಆಯಿತು ಆಗ ಸಾಮಾನ್ಯವಾಗಿ ನಿಮ್ಮ ಪ್ಲಾನ್ ಔಟ್‌ಲೇ ಕಡಿಮೆ ಆಯಿತು. ೧೯೮೪-೮೫ನೇ ಇಸವಿಯಲ್ಲಿ ರಿಸೋರ್ಸ್ ಮೊಬಿಲೈಜೇಷನ್ ೪೪೮.೬೪ ಕೋಟಿ ರೂಪಾಯಿಗಳಷ್ಟು ಮಾಡುತ್ತೇವೆಂದು ನೀವು ಪ್ಲಾನಿಂಗ್ ಕಮಿಷನ್ ಮುಂದೆ ಹೇಳಿದಿರಿ. ಆದರೆ ಆಕ್ಚುಯಲಿ ಮಾಡಿದ್ದುದು ಎಷ್ಟು ೨೯೭.೯೯ ಕೋಟಿ ರೂಪಾಯಿಗಳಷ್ಟು ಇಲ್ಲಿ ಎಷ್ಟು ಡಿಫಿಸಿಟ್ ಆಯಿತೆಂದರೆ ಸುಮಾರು ೧೬೦ ಕೋಟಿ ರೂಪಾಯಿಗಳಷ್ಟು. 100 and add crores that is during ೮೪-೮೫ ೧೯೮೫-೮೬ರಲ್ಲಿ ೧೬೦ ಕೋಟಿ ರೂಪಾಯಿಗಳ ರಿಸೋರ್ಸ್ ಮಾಡುವುದಕ್ಕೆ ಆಗಲಿಲ್ಲ. ಆಗ ನಿಮ್ಮ ಪ್ಲಾನ್ ಔಟ್‌ಲೇ ಎಲ್ಲಿಗೆ ಹೋಯಿತು ? ಆಮೇಲೆ ೧೯೮೬-೮೭ನೇ ಇಸವಿಯಲ್ಲಿ ಸುಮಾರು ೨೫೦.೩೪ ಕೋಟಿ ರೂಪಾಯಿಗಳನ್ನು ಮಾತ್ರ ರಿಸೋರ್ಸ್ ಮೊಬಿಲೈಜೇಶನ್ ಮಾಡುವುದಕ್ಕೆ ಸಾಧ್ಯವಾಯಿತು. ಆ ವರ್ಷ ಕೂಡ ಹೋಯಿತು. ಆಮೇಲೆ ೧೯೮೭-೮೮ನೇ ಇಸವಿಯಲ್ಲಿ ೫೦೧.೭೪ ಲಕ್ಷ ರೂಪಾಯಿಗಳಷ್ಟು ಮೊಬಿಲೈಜೇಶನ್ಸ್ ಮಾಡುತ್ತೇವೆಂದು ಹೇಳಿ ೨೫೦.೩೪ ಲಕ್ಷ ರೂಪಾಯಿಗಳನ್ನು ಮಾತ್ರ ರಿಸೋರ್ಸ್ ಮೊಬಿಲೈಸ್ ಮಾಡಲಾಯಿತು. ಅಲ್ಲಿಗೆ ಷಾರ್ಟ್‌ಫಾಲ್ ಎಷ್ಟು ಎಂದರೆ during the last five years, it fell short of target by 842.13 crores. ೮೪೨.೧೩ ಕೋಟಿಯಷ್ಟು ಸಂಪನ್ಮೂಲವನ್ನು ನೀವು ಹೆಚ್ಚು ಮಾಡಿಕೊಳ್ಳಬೇಕಾಗಿತ್ತು, ಕಳೆದ ೫ ವರ್ಷಗಳ ನಿಮ್ಮ ಆಡಳಿತದ ಅವಧಿಯಲ್ಲಿ ಇಷ್ಟೊಂದು ಕೊರತೆ ಯನ್ನು ನೀವು ಕಂಡಿದ್ದೀರಿ. ಈ ೫ ವರ್ಷಗಳಲ್ಲಿ ಬರಗಾಲ ಇತ್ತು ಅದಕ್ಕೋಸ್ಕರ ಸಂಪನ್ಮೂಲಗಳನ್ನು

ಕ್ರೋಡೀಕರಣ ಮಾಡುವುದಕ್ಕಾಗಲಿಲ್ಲವೆಂದು ನೀವು ಹೇಳುತ್ತೀರಿ. ಮಾನ್ಯ ಸಭಾಧ್ಯಕ್ಷರೇ, ಎಕ್ಸೈಸ್ ಕಂಟ್ರಾಕ್ಟರುಗಳಿಂದ ಸರ್ಕಾರಕ್ಕೆ ಬರಬೇಕಾಗಿರುವ ಹಣದ ಬಗ್ಗೆ ಸೇಲ್ಸ್ ಟ್ಯಾಕ್ಸ್‌ನಿಂದ ಸರ್ಕಾರಕ್ಕೆ ಬರುವ ಹಣದ ಬಗ್ಗೆ, ಮತ್ತು ಟ್ರಾನ್ಸ್‌ಪೋರ್ಟ್‌ನಿಂದ ಸರ್ಕಾರಕ್ಕೆ ಬರತಕ್ಕ ಹಣದ ಬಗ್ಗೆ ನಾವು ಪದೇ ಪದೇ ಮಾತನಾಡಿದ್ದೇವೆ. ಹಿಂದಿನ ಕಾಲದಲ್ಲಿ ಬರೀ ಕಂದಾಯ ಮಾತ್ರ ಸರ್ಕಾರದ ಆದಾಯವಾಗಿರುತ್ತಿತ್ತು. ಆಗ ವರ್ಷಕ್ಕೆ ೫ ಅಥವಾ ೬ ಕೋಟಿ ರೂಪಾಯಿಗಳಲ್ಲೇ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕಾಗಿತ್ತು. ಆದರೆ ಕಾಲ ಕಳೆದ ಹಾಗೆ, ಬೇರೆ ರೀತಿಯಲ್ಲಿ ಚೆನ್ನಾಗಿ ಉತ್ತೇಜನ ಬಂದು ಸುಮಾರಾಗಿ ಮೋಟಾರು ತೆರಿಗೆ, ಸೇಲ್ಸ್ ಟ್ಯಾಕ್ಸ್. ಎಕ್ಸೈಸ್ ಮುಂತಾದ ಬಾಬುಗಳಿಂದ ಸರ್ಕಾರಕ್ಕೆ ಹೆಚ್ಚು ಆದಾಯ ಬರುತ್ತಿದೆ. ಈ ಮೂರು ಇಲಾಖೆಗಳಿಂದ ಬರುವ ಆದಾಯವೇ ಬಹು ದೊಡ್ಡದು. ಸೇಲ್ಸ್ ಟ್ಯಾಕ್ಸ್‌ನಿಂದ ರಾಜ್ಯ ಸರ್ಕಾರಕ್ಕೆ ಸುಮಾರು ಇನ್ನೂರು ಕೋಟಿ ಅಥವಾ ಮುನ್ನೂರು ಕೋಟಿ ಬರುತ್ತಿದೆ. ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನಿಂದ ಇನ್ನೂ ಹೆಚ್ಚಿಗೆ ಸರ್ಕಾರಕ್ಕೆ ಆದಾಯ ಬರುವ ದಾರಿಗಳು ಇವೆ. ಸೇಲ್ಸ್ ಟ್ಯಾಕ್ಸ್ ಬಗ್ಗೆ ಅನೇಕ ಕೇಸ್‌ಗಳು ಕೋರ್ಟ್‌ನಲ್ಲಿ ಇವೆ. ಕೋರ್ಟಿನವರು ಸ್ಟೇ ಆರ್ಡರ್‌ಗಳನ್ನು ಕೊಟ್ಟಿದ್ದಾರೆ. ಯಾರು ಯಾರು ಕೋರ್ಟಿನಲ್ಲಿ ಕೇಸ್ ಹಾಕಿದ್ದಾರೋ ಅವರುಗಳನ್ನು ಬಿಟ್ಟರೂ ಉಳಿದ ಜನರಿಂದ ಸರಿಯಾಗಿ ವಸೂಲಿ ಮಾಡಿದರೆ ಬಹಳಷ್ಟು ಹಣ ಬರುವ ಹಾಗೆ ಆಗುತ್ತದೆ. ಅದೂ ಅಲ್ಲದೇ ಕೋರ್ಟಿನವರು ತಡೆ ಆಜ್ಞೆ ಕೊಟ್ಟಿರುವುದನ್ನು ತೆರವು ಮಾಡಿಸುವುದಕ್ಕೆ ಸರ್ಕಾರವು ಸರಿಯಾದ ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ. ಇದರ ಬಗ್ಗೆ ನಾವು ಈ ಹಿಂದೆಯೂ ಸದನದಲ್ಲಿ ಅನೇಕ ಸಾರಿ ಪ್ರಸ್ತಾಪ ಮಾಡಿದ್ದೇವೆ. ಸರ್ಕಾರಕ್ಕೆ ಸಂಪನ್ಮೂಲ ಶೇಖರಣೆ ಮಾಡತಕ್ಕ ವಿಚಾರದಲ್ಲಿ ನಾವು ಪ್ರಯತ್ನ ಮಾಡದಿದ್ದರೆ ಡೆವೆಲಪ್‌ಮೆಂಟಲ್ ಆಕ್ಟಿವಿಟೀಸ್ ಎಲ್ಲಾ ಕಂಪ್ಲೀಟ್ ಆಗಿ ಹಾಳಾಗುತ್ತದೆ. ಮಾನ್ಯ ಸಭಾಧ್ಯಕ್ಷರೇ, ನಮಗೆಲ್ಲಾ ಗೊತ್ತಿರುವ ಹಾಗೆ ಜನತಾ ಸರ್ಕಾರದವರು ಯಾವಾಗಲೂ ಕೇಂದ್ರ ಸರ್ಕಾರದ ಅಸಿಸ್ಟೆನ್ಸ್ ರಾಜ್ಯ ಸರ್ಕಾರಕ್ಕೆ ಸಿಕ್ಕುತ್ತಿಲ್ಲವೆಂದು ಹೇಳುತ್ತಲೇ ಇರುತ್ತಾರೆ. ನಾನು ಇದರ ಬಗ್ಗೆ ವಿವರಕ್ಕೆ ಹೋಗದೆ ಇದ್ದರೂ ಸುಮಾರಾಗಿ ಹೇಳುತ್ತೇನೆ. ಕಾಂಗ್ರೆಸ್ ಸರ್ಕಾರ ಕರ್ನಾಟಕದಲ್ಲಿ ಇದ್ದಾಗ ಮತ್ತು ಜನತಾ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಸೆಂಟ್ರಲ್ ಗೌರ್ನ್‌ಮೆಂಟಿನಿಂದ ಎಷ್ಟು ಅಸಿಸ್ಟೆನ್ಸ್ ಬಂದಿದೆ ಎಂಬುದನ್ನು ಸದನದ ಗಮನಕ್ಕೆ ತರುತ್ತೇನೆ. ನಮ್ಮ ರಾಜ್ಯಕ್ಕೆ ಕಾಂಗ್ರೆಸ್ ಸರ್ಕಾರ ಇದ್ದಾಗ ಅಂದರೆ ೧೯೭೮ ರಿಂದ ೮೩ರವರೆಗೆ ೭ ೭೯ ಪರ್‌ಸೆಂಟ್ ನಷ್ಟು ನಮಗೆ ಸೆಂಟ್ರಲ್ ಅಸಿಸ್ಟೆನ್ಸ್ ಸಿಕ್ಕಿದೆ. ೧೯೮೩ ರಿಂದ ೮೮ರವರೆಗೆ ಅಂದರೆ ಜನತಾ ಸರ್ಕಾರ ಆಡಳಿತಕ್ಕೆ ಬಂದಾಗಿನಿಂದ ಈ ತಹಲ್‌ವರೆಗೆ, ೫ ವರ್ಷಗಳ ಜನತಾ ಸರ್ಕಾರದ ಅವಧಿಯಲ್ಲಿ ಸೆಂಟ್ರಲ್ ಗೌರ್ನ್‌ಮೆಂಟಿನಿಂದ ೧೮,೨ ಪರ್‌ಸೆಂಟ್‌ನಷ್ಟು ಅಸಿಸ್ಟೆನ್ಸ್ ಬಂದಿದೆ. ನಮ್ಮ ಕಾಲದಲ್ಲಿ ೮ ಪರ್‌ಸೆಂಟ್ ನಷ್ಟು ಸೆಂಟ್ರಲ್ ಅಸಿಸ್ಟೆನ್ಸ್ ಬಂದಿದೆ ಎಂದು ಇಟ್ಟುಕೊಂಡರೂ ನಮ್ಮ ಕಾಲಕ್ಕೂ ಇವರ ಕಾಲಕ್ಕೂ ಹೋಲಿಸಿದರೆ ೧೦ ಪರ್‌ಸೆಂಟ್‌ನಷ್ಟು ಹೆಚ್ಚುವರಿಯಾಗಿ ಸೆಂಟ್ರಲ್ ಅಸಿಸ್ಟೆನ್ಸ್ ಜನತಾ ಸರ್ಕಾರಕ್ಕೆ ಸಿಕ್ಕಿದೆ. ಕೇಂದ್ರ ಸರ್ಕಾರ ನಮ್ಮ ರಾಜ್ಯ ಸರ್ಕಾರಕ್ಕೆ ಯಾವುದೇ ಸಹಾಯವನ್ನು ಕೊಡುತ್ತಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಹೇಳಿದ್ದಾರೆ, ಯಾವ ವರ್ಷದ ಬಜೆಟ್ ಸ್ಪೀಚ್ ತೆಗೆದುಕೊಂಡು ನೋಡಿದರೂ ಅದರಲ್ಲಿ ಅರ್ಧಕ್ಕರ್ಧ ಪೇಜ್‌ಗಳಲ್ಲಿ ಕೇಂದ್ರದ ಮೇಲೆ ದೂರು ಹೇಳುವುದಕ್ಕೆ ಉಪಯೋಗಿಸಿಕೊಂಡಿದ್ದಾರೆ. ಈ ವರ್ಷದ ಬಜೆಟ್ ಸ್ಪೀಚ್‌ನಲ್ಲಿ ಸುಮಾರು ೧೨ ಪೇಜ್‌ನಷ್ಟು ಹೇಳಿದ್ದಾರೆ.

ಶ್ರೀ. ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಬಂಗಾರಪ್ಪನವರು, ರಾಜ್ಯದಲ್ಲಿ ಸಂಪನ್ಮೂಲಗಳ ಕೊರತೆ ಇದೆ. ಅದನ್ನು ಸರ್ಕಾರದವರು ಭರಿಸದೆ ಯೋಜನಾ ಗಾತ್ರವನ್ನು ಜಾಸ್ತಿ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಅದನ್ನು ಕಡಿಮೆ ಮಾಡಬೇಕೆಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಕಡಿಮೆ ಮಾಡಬೇಕೆಂದು ಹೇಳಿಲ್ಲ. ಯೋಜನೆ ಫಿಕ್ಸ್ ಆದಮೇಲೆ ಅದಕ್ಕೆ ತಕ್ಕಂತೆ ಹಣವನ್ನು ಒದಗಿಸಬೇಕು. ಇಲ್ಲದಿದ್ದರೆ ಆಟೋಮೆಟಿಕ್ ಆಗಿ ಕಡಿಮೆಯಾಗುತ್ತದೆ.

೫-೦೦ ಪಿ.ಎಂ.

ಶ್ರೀ ಎ. ಲಕ್ಷ್ಮೀಸಾಗರ್,—ಕಡಿಮೆ ಆಯಿತು ಎಂದು ಕೂಗುತ್ತಾರೆ ಎಂದು ನೀವು ಹೇಳಿದ್ದನ್ನು ನಾನು ಬರೆದುಕೊಂಡಿದ್ದೇನೆ ಹಾಗೆಯೇ ಇದರಿಂದ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿವೆ ಎಂಬ ಮಾತನ್ನು ಕೂಡ ಹೇಳಿದ್ದೀರಿ. ಈ ರೀತಿಯ ನಿಮ್ಮ ವಾದಕ್ಕೆ ನಮ್ಮ ಅಭ್ಯಂತರ ಏನೂ ಇಲ್ಲ ಆದರೆ

ಕೇಂದ್ರ ಸರಕಾರದಿಂದ ಬರತಕ್ಕಂಥ ಸಹಾಯ ಕೂಡ ಜಾಸ್ತಿಯಾಗಿದೆ ಎಂದು ತಾವು ಹೇಳಿದ್ದೀರಿ. ಆ ಬಗ್ಗೆ "ಕೇಂದ್ರಸರಕಾರದ ಸಹಾಯ" ಎನ್ನುವ ಪದಕ್ಕೆ ಒಂದು ವಿವರವನ್ನು ಕೊಟ್ಟರೆ ಒಳ್ಳೆಯದು ಎಂದು ನಾನು ತಮ್ಮನ್ನು ವಿನಂತಿಸಿ ಕೊಳ್ಳುತ್ತೇನೆ,

ಕೇಂದ್ರಸರಕಾರದ ಸಹಾಯ ಅಂದರೆ, ಈ ರಾಜ್ಯಕ್ಕೆ ಸಂವಿಧಾನಾತ್ಮಕವಾಗಿ ಬರತಕ್ಕಂಥ ತೆರಿಗೆಯ ಪಾಲು ಅವರು ನಮಗೆ ದಾನದ ರೂಪದಲ್ಲಿ ಕೊಡತಕ್ಕಂಥ ಕೆಲಸವನ್ನು ಮಾಡಬೇಕೆಂದು ನಾವು ಹೇಳುವುದಿಲ್ಲ, ಹಾಗೆಯೇ ಅವರು ದಾನವಾಗಿ ನಮಗೆ ಕೊಟ್ಟಿರುವುದೂ ಇಲ್ಲ.

ಎರಡನೇಯದಾಗಿ ಸತತವಾಗಿ ರಾಜ್ಯವಲ್ಲಿ ಬರಗಾಲ ಪರಿಸ್ಥಿತಿಯ ಉ ಟಾಯಿತು. ಇಂತಹ ಸಂದರ್ಭದಲ್ಲಿ ನಾವು ನಿಮ್ಮ ಕೇಂದ್ರ ಸರಕಾರದ ಶಕ್ತಿಯಲ್ಲಿಯೇ ಇದನ್ನು ಭರಿಸುವುದಕ್ಕಾಗುವುದಿಲ್ಲ. ಅಂತಹ ಕಾಲದಲ್ಲಿ ನಮಗೆ ಹಣವನ್ನು ಸಹಾಯ ಕೊಡಿ ಎಂದು ನಾವು ಕೇಳುತ್ತೇವೆ, ಹಾಗೆಯೇ ಈ ಪರಿಸ್ಥಿತಿಯಲ್ಲಿರುವ ಇತರ ರಾಜ್ಯಗಳವರೂ ಕೇಳುತ್ತಾರೆ. ಕೇಂದ್ರದವರೂ ಧನಸಹಾಯ ವನ್ನು ಅಂತಹ ಪರಿಸ್ಥಿತಿಗಳಲ್ಲಿ ಕೊಟ್ಟಿದ್ದಾರೆ. ಆದರೆ ಇದು advance plan assistance... ನಮ್ಮ ಪ್ಲಾನ್ ಅಸಿಸ್ಟೆನ್ಸ್‌ನಿಂದ ವರ್ಷವರ್ಷ ಕೊಡತಕ್ಕಂಥ ಹಣದಲ್ಲಿ ಮುಂಗಡವಾಗಿ ಈ ಮೊತ್ತವನ್ನು ನಮಗೆ ಕೊಡುತ್ತಾರೆ. ಹೀಗೆ ಮುಂಗಡವಾಗಿ ಕೊಟ್ಟ ಹಣವನ್ನು ಅನಂತರ ಕಡಿತ ಮಾಡುತ್ತಾ ಹೋಗುತ್ತಾರೆ. ಈ ವಿಚಾರವನ್ನು ನಾನು ಮಾನ್ಯ ಬಂಗಾರಪ್ಪನವರಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಕೇಂದ್ರ ಸರಕಾರದಿಂದ ನಮ್ಮ ರಾಜ್ಯಸರಕಾರಕ್ಕೆ ಕಳೆದ ಎರಡು ಮೂರು ವರ್ಷಗಳಲ್ಲಿ ಹಣ ಜಾಸ್ತಿ ಬಂದಿದ್ದರೂ ಕೂಡ ಅದು ಅವರು ಮಾಡಿದ ಸಹಾಯ ಅಲ್ಲ, ಅದು ಸಂವಿಧಾನ ಬದ್ಧವಾಗಿ, ಕಾನೂನು ಬದ್ಧವಾಗಿ ನಮಗೆ ಬರಬೇಕಾಗಿದ್ದ ಹಣವಾಗಿತ್ತು. ಅವರು ನಮಗೆ ಧಾನವಾಗಿ ಆ ಹಣವನ್ನು ಕೊಟ್ಟಿಲ್ಲ ಎಂದು ಹೇಳಿದರು ಮಾನ್ಯರು ನನ್ನ ಮಾತಿಗೆ ತಪ್ಪು ಕಂಡುಹಿಡಿಯುವುದಿಲ್ಲ ಎಂದು ನಾನು ಭಾವಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಒಂದು ಮಾತನ್ನು ನಾನು ಒಪ್ಪುತ್ತೇನೆ ರಾಜ್ಯ ಸರ್ಕಾರಕ್ಕೆ ನಮ್ಮ ಸೆಂಟ್ರಲ್‌ಪೂಲ್‌ನಿಂದ ಯಾವ ಯಾವ ಬಾಬಿನಿಂದ ಬರುತ್ತದೆ ಎಂಬ ಬಗ್ಗೆ ಒಂದು ಉದಾಹರಣೆ ಹೇಳುವುದಾದರೆ, ನಮ್ಮ ವೀರಣ್ಣನವರ ಇಲಾಖೆಗೆ ಎನ್.ಎಸ್.ಸಿ. ಬರುತ್ತದೆ. ಇವರು ನಮ್ಮ ರಾಜ್ಯ ಲ್ಲಿದವಿನಾದರೂ ಹಣವನ್ನು ಈ ಕಂರಿತು ವಸೂಲು ಮಾಡಿದರೆ it is an investment made by an individual ಹಾಗೆಯೇ ಅವರು ಹೇಳಿದರು, ಯಾವ ಯಾವ ಬಾಬಿನಲ್ಲಿ ಸೆಂಟ್ರಲ್ ಅಸಿಸ್ಟೆನ್ಸ್ ಬರುತ್ತದೆ ಅದು ನಮಗೆ ಕೊಡತಕ್ಕಂಥಾದ್ದು, out and grants ಅದು ಗ್ರ್ಯಾಂಟ್ಸ್ ಅಲ್ಲ, ಆ ಹಣವು ನಮಗೆ ಕೊಡತಕ್ಕಂಥ ಮುಂಗಡ ಹಣ, ಅದನ್ನು ಕೊಟ್ಟು ಅನಂತರ ಮುರಿದುಕೊಳ್ಳುತ್ತಾರೆ ಎಂದು ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—In Drought relief they have given from advance plan assistance. ಮಾನ್ಯ ಬಂಗಾರಪ್ಪನವರು ನಮ್ಮ ಕೇಂದ್ರಸರಕಾರದವರು ಕೊಟ್ಟರು, ನಮ್ಮವರು ಕೊಟ್ಟರು ಎಂದು ಪದೇ ಪದೇ ಹೇಳುತ್ತಾ ಇದ್ದಾರೆ. ರಾಜ್ಯದಲ್ಲಿ ಬಂದಿರುವ ಬರಗಾಲ ಪರಿಸ್ಥಿತಿಯನ್ನು ಲಕ್ಷದಲ್ಲಿಟ್ಟುಕೊಂಡು ಹಣವನ್ನು ಕೇಂದ್ರದವರು ಕೊಟ್ಟಿದ್ದಾರೆ. ಆದರೆ ಅವರು ಕೊಟ್ಟಿರುವ ಹಣವನ್ನು that will be deducted every year which we have to pay to them. ಇದು ಒಂದು ಭಾಗ ಎರಡನೆಯದು ಏನೆಂದರೆ devolution of fund, ನಮ್ಮ ಸೇಲ್ಸ್‌ಟ್ಯಾಕ್ಸ್‌ನಲ್ಲಿ ನಮಗೆ ಬರುವ ಭಾಗ. ಇನ್‌ಕಮ್‌ಟ್ಯಾಕ್ಸ್‌ನಲ್ಲಿ ನಮಗೆ ಬರುವ ಭಾಗ ಮತ್ತು ಇತರ ಬಾಬುಗಳಿಂದ ಕೇಂದ್ರ ಸರಕಾರದಿಂದ ಸಂವಿಧಾನ ಬದ್ಧವಾಗಿ ಬರಬೇಕಾದಂಥ ಹಣ, ಫೈನಾನ್ಸ್ ಕಮಿಶನ್‌ನವರು ಕೊಟ್ಟ ರೆಕಮಂಡೇಶನ್ ಪ್ರಕಾರವೇ ಕೊಟ್ಟಿರುತ್ತಾರೆ. ಈ ಹಣವು ನಮಗೆ ರೀತ್ಯಾನುಸಾರ ಬರತಕ್ಕಂಥ ಬಾಬತ್ತು ಎಂಬುದನ್ನು ಮಾನ್ಯ ಬಂಗಾರಪ್ಪನವರು ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತಾ ಕೇಂದ್ರ ಸರ್ಕಾರದವರು ನಮಗೆ ಪುಕ್ಕಟೆಯಾಗಿ ಕೊಡುವುದಿಲ್ಲ ಎಂದು ಹೇಳಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನೀವು ಮೊದಲು ಬರಗಾಲ ಪರಿಹಾರಕ್ಕಾಗಿ ಎಂದು ಹೇಳಲಿಲ್ಲ. ಈ ವಿಚಾರವಾಗಿ ಮುಂಗಡವಾಗಿ ಕೊಟ್ಟಿದ್ದುದು ಎಂದು ಕೊನೆಗೆ ಕ್ಲಾರಿಫಿಕೇಶನ್ ಮಾಡಿದ್ದೀರಿ. ಬರಗಾಲ ಪರಿಹಾರಕ್ಕೆ ಏನು ಹಣವನ್ನು ಕೊಡುತ್ತಾರೆ ಅದನ್ನು ಪ್ಲಾನ್‌ಫಂಡ್‌ನಲ್ಲಿ ಕೊಡುತ್ತಾರೆಎನ್ನತಕ್ಕಂಥಾದ್ದು

ನಿಜ ಎನ್ನುವ ಮಾತನ್ನು ಯಾರೂ ಅಲ್ಲಗಳೆಯುವುದಿಲ್ಲ. ಆ ರೀತಿ ಸಹಾಯವನ್ನು ಕೊಡುವುದು ಈ ಒಂದು ರಾಜ್ಯಕ್ಕೆ ಮಾತ್ರವಲ್ಲ, ರಾಷ್ಟ್ರದಲ್ಲಿನ ಎಲ್ಲಾ ರಾಜ್ಯಗಳಿಂದ ಈ ಬಗ್ಗೆ ಬೇಡಿಕೆ ಬಂದಾಗ ಕೊಡುತ್ತಾರೆ ಏನು ಬೇಡಿಕೆ ಬರುತ್ತದೆ, ಹಾಗೆ ಬಂದಾಗ ಸೆಂಟ್ರಲ್‌ನವರು ಮೊದಲೇ ಹಣವನ್ನು ಮುಂಗಡವಾಗಿ ಕೊಡತಕ್ಕಂತಹ ಪದ್ಧತಿಯನ್ನು ಇಟ್ಟಿದ್ದಾರೆ. I quite agree the principle adopted by the Central Government. ನಾನು ಅದನ್ನು ಹೇಳುತ್ತಿಲ್ಲ. ನಾನು ರೆಫರ್ ಮಾಡಿದ್ದುದು ಪ್ಲಾನ್ಸ್‌ಗಳಿಗೆ ಸೆಂಟ್ರಲ್ ಅಸಿಸ್ಟೆನ್ಸ್ ಕೊಡತಕ್ಕಂತಹ ವಿಚಾರದಲ್ಲಿ ಹೇಗೆ ವರ್ಷದಿಂದ ವರ್ಷಕ್ಕೆ ಜಾಸ್ತಿಯಾಗುತ್ತಾ ಹೋಗಿದೆ ಹಾಗೇ ಕೊಡುತ್ತಾ ಬಂದಿದ್ದಾರೆ ಎನ್ನುವುದು ಪ್ಲಾನ್ಸ್‌ಗಳ ವೆಚ್ಚ ಜಾಸ್ತಿಯಾದ ಹಾಗೆ ಅಸಿಸ್ಟೆನ್ಸ್ ಕೂಡ ಜಾಸ್ತಿಯಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಸಿಸ್ಟೆನ್ಸ್ ಅನ್ನುವುದು ತಪ್ಪು. ಅದು ನಮಗೆ ನ್ಯಾಯವಾಗಿ ಬರಬೇಕಾದುದು. ಅಸಿಸ್ಟೆನ್ಸ್ ಎಲ್ಲಿ ಬಂತು ಅದು ನಮಗೆ ನ್ಯಾಯವಾಗಿ ಬರತಕ್ಕಂತಹ ಷೇರ್ ಅಸಿಸ್ಟೆನ್ಸ್ ಎಂದರೆ ಅವರೇನು ನಮಗೆ ದಾನ ಕೊಡುತ್ತಾರೆಯೇ ? ದಾನ ಕೊಡುವುದಕ್ಕೆ ಅವರ ಹತ್ತಿರ ಕೂಡ ಹಣವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಿಂದೆ ನೀವು ಇಲ್ಲಿದ್ದಾಗ ಅದೇ ಮಾತನ್ನು ಹೇಳುತ್ತಿದ್ದಿರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಬಂಗಾರಪ್ಪನವರು ಈ ಕಡೆ ಇದ್ದಾಗ ಮತ್ತು ನಮ್ಮ ಜೊತೆಯಲ್ಲಿದ್ದಾಗಲೂ ಕೂಡ ಇದೇ ಮಾತನ್ನು ಹೇಳಿದ್ದೆ, ನೀವು ಇದ್ದಾಗಲೂ ಕೂಡ ಇದೇ ಮಾತನು ಹೇಳುತ್ತಿದ್ದೆ. ಈಗಲೂ ಅದೇ ಮಾತನ್ನು ಹೇಳುತ್ತೇನೆ ಪ್ರತಿ ಫೈನಾನ್ಸ್ ಕಮಿಷನ್ ಅಪಾಯಿಂಟ್ ಆದಾಗಲೂ ಕೂಡ ಯಾವುದೇ ಸರಕಾರ ರಾಜ್ಯದಲ್ಲಿರಲಿ ನಮಗೆ ಕೇಂದ್ರ ಸರಕಾರದಿಂದ ನ್ಯಾಯವಾಗಿ ಬರಬೇಕಾದಂತಹ ಪಾಲು ಬರುತ್ತಿಲ್ಲ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ಅದರ ತೀಕ್ಷ್ಣತೆ ಹೆಚ್ಚೂ ಕಡಿಮೆ ಇರಬಹುದು. ಅವರು ಇದ್ದಾಗ ತೀಕ್ಷ್ಣತೆ ಕಡಿಮೆ ಇರಬಹುದು. ನಾವು ಇದ್ದಾಗ ತೀಕ್ಷ್ಣತೆಯನ್ನು ಉಪಯೋಗಿಸಿ ಹೆಚ್ಚು ಹೇಳಿದ್ದೇವೆ ನಿಜ. ವಸ್ತು ಪರಿಸ್ಥಿತಿಯಲ್ಲಿ ಬದಲಾವಣೆಯಾಗಿಲ್ಲ ಈ ಮಾತನ್ನು ನಾನು ಹೇಳಿದ್ದೇನೆಯೇ ಹೊರತು ಮಾನ್ಯ ಖರ್ಗೆಯವರು ನಾನು ಏನೋ ಹೇಳಬಾರದ್ದನ್ನು ಹೇಳಿದ್ದೇನೆ ಎಂಬ ಅರ್ಥ ಬರುವ ರೀತಿಯಲ್ಲಿ ಹೇಳುವುದು ಸರಿಯಲ್ಲ. ಅಸಿಸ್ಟೆನ್ಸ್ ಅಂದರೆ ಅದು ನಮ್ಮ ಷೇರ್ ನಮಗೆ ಬರಬೇಕಾದುದು. ೩-೪ ಸಲ ನಮ್ಮವರು ಹೋಗಿದ್ದಾರೆ. ಅದರ ಮೇಲೆ ಡಿಟರ್‌ಮೈನ್ ಮಾಡುತ್ತಾರೆ ಅದಕ್ಕೆ ಸೂತ್ರಗಳನ್ನು ಇಟ್ಟಿದ್ದಾರೆ ದಾನ ಕೊಡತಕ್ಕಂತಹ ವ್ಯವಸ್ಥೆ ನಮ್ಮ ಹಣಕಾಸಿನ ಪರಿಸ್ಥಿತಿಯಲ್ಲಿ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವುದೇ ಸರಕಾರವಿದ್ದಾಗ ಇದೇ ಪದ್ಧತಿ ಇತ್ತು ಹಿಂದೆ ಜನತಾ ಸರಕಾರ ಕೇಂದ್ರದಲ್ಲಿದ್ದಾಗ ಕೂಡ ಇದೇ ಪದ್ಧತಿಯಿಂದ ಹಣ ಕೊಡುತ್ತಿದ್ದರು. ಈಗಲೂ ಕೂಡ ಅದೇ ಪದ್ಧತಿ ಇದೆ, ಕೇಂದ್ರಸರಕಾರವನ್ನು ದೂರುವುದು ಬೇಡವೆಂದು ಹೇಳತಕ್ಕಂಥಾದ್ದು ನಮ್ಮ ವಾದ ವರ್ಷದಿಂದ ವರ್ಷಕ್ಕೆ ಸೆಂಟ್ರಲ್ ಅಲೋಕೇಷನ್ ಕೂಡ ಜಾಸ್ತಿಯಾಗುತ್ತದೆ ಆದರೂ ಕೂಡ ನಿಮ್ಮ ಡವಲಪ್‌ಮೆಂಟ್ ಇಷ್ಟು ಕುಂಠಿತವಾಗಿದ ಅದನ್ನು ನೋಡಿಕೊಳ್ಳಿ ಅದಕ್ಕೆ ನಿಮ್ಮ ಹತ್ತಿರ ಉತ್ತರ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನೀವು ವಾದ ಮಾಡಿ ಉತ್ತರ ಹೇಳುತ್ತೇನೆ.

SRI S. BANGARAPPA.—We are entitled under each ನೀವು ಹೇಳತಕ್ಕಂತಹ ವಿಚಾರ ಅಲ್ಲ ಇದು ಎಲ್ಲರಿಗೂ ಗೊತ್ತಿದೆ. ನಮ್ಮ ಸರಕಾರವಿರಬಹುದು, ಬೇರೆ ಸರಕಾರವಿರಬಹುದು, We are entitled for that. Suppose, Congress Government is there we say we are entitled to this share under this head. ಅನ್ನತಕ್ಕಂತಹ ಮಾತನ್ನು ನಾವೂ ಕೂಡ ಕೇಂದ್ರ ಸರಕಾರಕ್ಕೆ ಹೇಳತಕ್ಕಂತಹ ಸಂದರ್ಭದಲ್ಲಿ ಹೇಳಿದ್ದೇವೆ. ನೀವು ಹೇಳಿದರೂ ಒಂದೇ ನಾವು ಹೇಳಿದರೂ ಒಂದೇ ಇವತ್ತು ಕೂಡ ಹೇಳುತ್ತೇವೆ. ಅಲೋಕೇಷನ್ ಮಾಡುವಾಗ ಕೇಂದ್ರಸರಕಾರದವರು ಹೇಳುತ್ತಾರೆ ಈ ವರ್ಷದಲ್ಲಿ ಇಷ್ಟು ಹಣ ಕೊಡುತ್ತೇವೆಂದು ಅದರ ಆಧಾರದ ಮೇಲೆ ಕೆಲವು ಕಾರ್ಯಕ್ರಮಗಳನ್ನು ರಾಜ್ಯ ಸರಕಾರ ಹಮ್ಮಿಕೊಳ್ಳುತ್ತದೆ.

ನನಗೆ ಗೊತ್ತಿರುವ ಇಲ್ಲಿ ಇನ್ನೊಂದು ಫಿಗರ್‌ನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ What exactly is the money promised by the Central Government and

what exactly the amount given. ಈಗ ಹತ್ತು ರೂಪಾಯಿ ಕೊಡುತ್ತೇನೆಂದು ಪ್ರಾವಿಮ್ಸ್ ಮಾಡಿದ ಮೇಲೆ ೯ ರೂಪಾಯಿ ಸೆಂಟ್ರಲ್ ಗೌರ್ನಮೆಂಟ್ ಕೊಟ್ಟರೆ ಅದು ಅನ್ಯಾಯ ಮಾಡಿದಂತೆ, ಅದು ಅನ್ಯಾಯ ಎಂಬ ಮಾತನ್ನು ಆಗ ಆಡಲೇಬೇಕಾಗುತ್ತದೆ. ಆದರೆ ಹತ್ತು ರೂಪಾಯಿ ಕೊಡುತ್ತೇನೆಂದು ಪ್ರಾಮಿಸ್ ಮಾಡಿ ೧೨ ೧೩.೧೪ ಕೊಟ್ಟರೆ ಅಲ್ಲಿ ಅನ್ಯಾಯವಾಗಿದೆ ಎಂದು ಹೇಳುವುದಕ್ಕೆ ಸಾಧ್ಯ ಇಲ್ಲ. ನಾನು ನಿಮ್ಮ ಗಮನಕ್ಕೆ ಕೆಲವು ಅಂಕಿಅಂಶಗಳನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ೮೩-೮೪ರಲ್ಲಿ ನಿಮ್ಮ ಪೀರಿಯಡ್‌ನಿಂದಲೇ ಪ್ರಾರಂಭ ಮಾಡುತ್ತೇನೆ. ಬೇರೆಯದಕ್ಕೆ ಹೋಗುವುದಿಲ್ಲ, ನೀವು ಏನು ಅನ್ಯಾಯ ಎಂದು ಹೇಳುತ್ತೀರಿ ಅದಕ್ಕೆ ಈ ಅಂಕಿಅಂಶಗಳನ್ನು ಹೇಳುತ್ತೇನೆ. ೮೩-೮೪ರಲ್ಲಿ ೨೦೦.೭೯ ಎಂದು ಇದ್ದದ್ದು. ಸೆಂಟಲ್ ಗೌರ್ನಮೆಂಟ್‌ನವರು ಕೊಟ್ಟಿರತಕ್ಕಂಥದ್ದು ೨೧೮.೨೨ ಕೋಟಿ. ನನ್ನ ಪ್ರಕಾರ ಸುಮಾರು ೧೮ ಕೋಟಿ ರೂಪಾಯಿ ಜಾಸ್ತಿ ಕೊಟ್ಟಿದ್ದಾರೆ. ೮೪-೮೫ರಲ್ಲಿ ೨೩೮.೭೫ ಕೊಡುತ್ತೇವೆಂದು ಹೇಳಿದ್ದರು. ಕೊಟ್ಟಿರತಕ್ಕಂಥದ್ದು ೨೪೪.೨೬ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ, ನನ್ನ ಪ್ರಕಾರ ಸುಮಾರು ಆರೂವರೆ ಕೋಟಿ ರೂಪಾಯಿ ಅಲ್ಲಿ ಜಾಸ್ತಿ ಕೊಟ್ಟಿದ್ದಾರೆ ೮೫-೮೬ರಲ್ಲಿ ೩೦೫.೪೯ ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳಿ ೩೦೬.೭೦ ಕೋಟಿ ರೂಪಾಯಿ ಕೊಟ್ಟಿದ್ದಾರೆ, ಅಲ್ಲಿಗೆ ಒಂದು ಕೋಟಿ ಚಿಲ್ಲರೆ ರೂಪಾಯಿ ಅಲ್ಲಿ ಜಾಸ್ತಿ ಕೊಟ್ಟಿದ್ದಾರೆ. ಆಮೇಲೆ ೧೯೮೬-೮೭ರಲ್ಲಿ ೩೪೭.೨೬ ಕೋಟಿ ರೂಪಾಯಿ ಪ್ರಕಾರವೇ ಮಾತಿನ ಪ್ರಕಾರವಾಗಿಯೇ ಅಷ್ಟೇ ಹಣವನ್ನು ಅಂದರೆ ೩೪೭.೨೬ ಕೋಟಿ ರೂಪಾಯಿಯನ್ನು ಕೊಟ್ಟಿದ್ದಾರೆ, ಆಮೇಲೆ ೮೬-೮೭ರಲ್ಲಿ ಮಾತ್ರ ೩.೮೯ ಕೋಟಿ ರೂಪಾಯಿ ಮಾತ್ರ ಪಾರ್ಟ್‌ಫಾಲ್ ಇದೆ. ೮೬-೮೭ರದು ಮಾತ್ರ ಬಿಟ್ಟುಬಿಟ್ಟರೆ ಉಳಿದಿರತಕ್ಕಂಥದ್ದರಲ್ಲಿ there was considerable increase in the matter of allocation of funds: ನಾನು ಈ ಅಂಕಿಅಂಶಗಳನ್ನು ೮೬-೮೭ರ ವರೆಗೆ ಅಷ್ಟು ಮಾತ್ರ ಕಲೆಕ್ಟ್ ಮಾಡುವುದಕ್ಕೆ ಸಾಧ್ಯವಾಯಿತು. ನಿಮಗೆ ನಾನು ಇಷ್ಟು ವಿವರಗಳನ್ನು ಮಾತ್ರ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಅಲೊಕೇಟ್ ಮಾಡತಕ್ಕಂಥ ವಿಚಾರದಲ್ಲಿ ಮಾತುಕತೆಗೆ ಹಣಕಾಸಿನ ಸಚಿವರ ಜೊತೆಗೆ ಹೋಗುತ್ತೀರಿ. ಅಲ್ಲಿ ಹೋಗಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಇಷ್ಟು ಹಣ ಕೊಡುತ್ತೇವೆಂದು ಹೇಳಿ ಕಡಿಮೆ ಹಣವನ್ನು ಕೊಟ್ಟುಬಿಟ್ಟರೆ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರ ಅನ್ಯಾಯ ಮಾಡಿದೆ ಎಂಬ ಮಾತನ್ನು ನಾವು ಆಡಬೇಕಾಗುತ್ತದೆ. ಇಲ್ಲಿ ಆ ರೀತಿ ಆಗಿಲ್ಲ. ನೀವು ಕೊಟ್ಟಿರತಕ್ಕಂಥ ಬಜೆಟ್‌ನಲ್ಲಿರತಕ್ಕಂಥ ಕೆಲವು ಅಂಕಿಅಂಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದರಲ್ಲಿ ನಾನು ನಾನ್-ಟ್ಯಾಕ್ಸ್ ರೆವಿನ್ಯೂ ಬಗ್ಗೆ ಹೋಗುವುದಿಲ್ಲ, ಏಕೆಂದರೆ ಅದು ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟ ವಿಚಾರ. ನಾನು ಆ ವಿಚಾರವನ್ನು ಎತ್ತುತ್ತಿಲ್ಲ. ನೀವೇ ಪ್ರಿಂಟ್ ಮಾಡಿಸಿ ನಿಮ್ಮ ಬಜೆಟ್ ಸ್ಪೀಚ್‌ನಲ್ಲಿ ಹೇಳಿರತಕ್ಕಂಥ ವಿಚಾರ. ಬಜೆಟ್ ಎಸ್ಟಿಮೇಟ್ ೮೭-೮೮ರದು ೪೩೫ ೨೬ ಕೋಟಿ ರೂಪಾಯಿ. ರಿವೈಸ್ಡ್ ಎಸ್ಟಿಮೇಟ್ ೧೯೮೭-೮೮ ರದ್ದು ಇದೇ ವರ್ಷಕ್ಕೆ ೪೫೧.೧೧ ಇದನ್ನು ನೋಡಿದರೆ ಇಲ್ಲಿಯೇ ಎಷ್ಟು ಹೆಚ್ಚು ಮಾಡಿದ್ದೀರಿ ಎನ್ನುವುದು ಗೊತ್ತಾಗುತ್ತದೆ. There is considerable increase in grants from the Central Government. ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ನಾನು ಔಟ್‌ರೇಟ್ ಗ್ರಾಂಟ್ ಬಗ್ಗೆ ಮಾತನಾಡುತ್ತಿದ್ದೇನೆ. ಇದು ನೀವೇ ಪ್ರಿಂಟ್ ಮಾಡಿಸಿರತಕ್ಕಂಥ ವಿಚಾರ. ೮೭-೮೮ರದು ಗ್ರಾಂಟ್ಸ್ ಫ್ರಮ್ ಸೆಂಟ್ರಲ್ ಗೌರ್ನಮೆಂಟ್ ೨೬೪.೬೬ ಕೋಟಿ ರೂಪಾಯಿ. ರಿವೈಸ್ಡ್ ಎಸ್ಟಿಮೇಟ್ ೨೭೧.೨೯ ಎಂದರೆ ಸುಮಾರಾಗಿ ಏಳೂವರೆ ಕೋಟಿ ರೂಪಾಯಿ ಜಾಸ್ತಿಯಾಗಿದೆ. ಇದು ಜಾಸ್ತಿ ಅಲ್ಲವೇ ? ಕೇಂದ್ರದಿಂದ ಬರುತ್ತಿರುವ ಗ್ರಾಂಟ್ಸ್ ವರ್ಷೇ ವರ್ಷೇ ಜಾಸ್ತಿ ಆಗಿದೆ ಎಂಬುದು ನಿಮ್ಮ ಬಡ್ಜೆಟ್‌ನಲ್ಲಿರುವ ಅಂಕಿಅಂಶಗಳಿಂದಲೇ ತಿಳಿದು ಬರುತ್ತದೆ. ಇವರು ಯಾವಾಗಲೂ ಬರಗಾಲ, ಬರಗಾಲ ಎಂದು ಹೇಳುತ್ತಾರೆ. ನಮಗೆ ಗೊತ್ತಿರುವಂತೆ ಕೇಂದ್ರ ಸರ್ಕಾರದವರು ಬರಗಾಲದ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಸುಮಾರು ೧೫೦ ಕೋಟಿ ರೂಪಾಯಿಗಳಿಂದ ೧೮೦ ಕೋಟಿ ರೂಪಾಯಿಗಳವರೆಗೆ ಸಹಾಯ ಮಾಡಿದ್ದಾರೆ. ಈ ಹಣವನ್ನು ಪ್ಲಾನ್ ಫಂಡ್ಸ್‌ನಲ್ಲಿ ಅವರು ಅಡ್ವಾನ್ಸ್ ಆಗಿ ಕೊಟ್ಟಿರುವುದರ ಜೊತೆಗೆ ದನಕರುಗಳಿಗೆ ಬೇಕಾದ ಮೇವನ್ನು ಬೇರೆ ಕಡೆಗಳಿಂದ ನಮ್ಮ ರಾಜ್ಯಕ್ಕೆ ರೈಲ್ವೆ ಮೂಲಕ ಸಾಗಿಸಲು ಕೇಂದ್ರದವರು ಸಹಾಯ ಮಾಡಿದ್ದಾರೆ. ಈ ರಿಯಾಯಿತಿ ಸಹ ಇದರಲ್ಲಿ ಬರುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.— ಕೇಂದ್ರ ಸರ್ಕಾರ ರಾಜ್ಯ ಸರ್ಕಾರದವರು ಕೇಳಿದ್ದಕ್ಕಿಂತ ಜಾಸ್ತಿ ಹಣ ಕೊಟ್ಟಿದೆ ಎಂದು ತಾವು ಹೇಳಿದಿರಿ. ಆದರೆ ತಾವು ಪುಟ ೩೭ರಲ್ಲಿರುವುದನ್ನು ಸ್ವಲ್ಪ ನೋಡಬೇಕು.

ಶ್ರೀ ಜಿ. ಎಂ. ಕಾನಡೆ.– ಮಾನ್ಯ ಮಂತ್ರಿಗಳು ಇವೊತ್ತೇ ಉತ್ತರ ಕೊಡಲು ಹೊರಟಿದ್ದಾರೆಯೋ ಹೇಗೆ ?

ಅಧ್ಯಕ್ಷರು.—ಅವರು ಉತ್ತರ ಕೊಡುವುದಿಲ್ಲ, ವಿವರಣೆ ಕೊಡುತ್ತಾರೆ.

SRI A. LAKSHMISAGAR.—I just read from page 37 —Annexure-III

> Financial Transfers from the Union Government to the State Governments Under the Instrument of the Finance Commission, Planning Commission and at the Discretion of the Union Ministers.

I just brought to your kind notice.

ಶ್ರೀ ಎಸ್. ಬಂಗಾರಪ್ಪ.—ಅದನ್ನು ನಾನು ಸಹ ನೋಡಿದ್ದೇನೆ. ಬಡ್ಜೆಟ್‌ನಲ್ಲಿ ನೀವು ಏನು ಪ್ರಿಂಟ್ ಮಾಡಿಸಿದ್ದೀರಿ, ಅದನ್ನೇ ನಾನು ಓದಿದ್ದುದು, ಕೇಂದ್ರ ಸರ್ಕಾರದವರು ಹಣ ಕೊಡುತ್ತಿಲ್ಲ, ಕೊಡುತ್ತಿಲ್ಲ ಎಂದು ತಾವು ಯಾವಾಗಲೂ ಹೇಳುತ್ತೀರಿ. ಅದಕ್ಕಾಗಿ ತಾವೇ ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ಅವರು ಹೆಚ್ಚು ಕೊಟ್ಟಿದ್ದಾರೆಂಬುದನ್ನು ತಮಗೆ ತಿಳಿಸುವುದಕ್ಕಾಗಿ ಇದನ್ನೆಲ್ಲಾ ಹೇಳುತ್ತಿದ್ದೇನೆ, ಕೇಂದ್ರ ಸರ್ಕಾರದವರು ನಮ್ಮ ರಾಜ್ಯ ಸರ್ಕಾರಕ್ಕೆ ಕಾನೂನು ಪ್ರಕಾರ ಕೊಡುವಂತಹ ಹಣ ಇರಬಹುದು, ಅಥವಾ ಅವರ ಸ್ವಂತ ವಿವೇಚನೆಯಿಂದ ಕೊಡುವಂತಹ ಹಣದ ಸಹಾಯ ಇರಬಹುದು, ಇದು ಯಾವುದರಲ್ಲಿಯೂ ಅವರು ಈ ರಾಜ್ಯದ ಜನತೆಗೆ ಅನ್ಯಾಯ ಮಾಡಿಲ್ಲ ಎಂಬ ಮಾತನ್ನು ಹೇಳುವುದಕ್ಕೋಸ್ಕರವಾಗಿ ಇದನ್ನು ಒಂದು ಉದಾಹರಣೆಯಾಗಿ ಕೊಟ್ಟು ಹೇಳಿದೆ. ಬೇಕಾದರೆ ಇನ್ನೂ ಹೆಚ್ಚಿನ ವಿವರಗಳನ್ನು ಕೊಡಬಹುದು. ಆದರೆ ಈಗ ಸಮಯವಿಲ್ಲದ ಕಾರಣ ನಾನು ಹೆಚ್ಚಿನ ವಿವರಗಳಿಗೆ ಹೋಗುವುದಿಲ್ಲ.

ಮಾನ್ಯ ಅಧ್ಯಕ್ಷರೇ, ಇಲ್ಲಿ ನಾವು ಇನ್ನೊಂದು ವಿಚಾರವನ್ನು ಗಮನಿಸಬೇಕಾಗುತ್ತದೆ. ಏನೆಂದರೆ, ಬಡ್ಜೆಟ್‌ನಲ್ಲಿ ಹಣವನ್ನು ನಾನಾ ಇಲಾಖೆಗಳಿಗೆ ಹಂಚುವ ಸಂದರ್ಭ ಬಂದಾಗ ಕೆಲವು ಕ್ಷೇತ್ರಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗುತ್ತದೆ. ವಿದ್ಯುತ್ ಉತ್ಪಾದನೆ ಮತ್ತು ನೀರಾವರಿ ಯೋಜನೆಗಳು ಏ ವೆ. ಈ ಎರಡು ಕ್ಷೇತ್ರಗಳಿಗೆ ನಾವು ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡಬೇಕಾಗುತ್ತದೆ. ಆದ್ದರಿಂದ ಹೆಚ್ಚಿನ ಹಣವನ್ನು ಈ ಬಾಬುಗಳಿಗೆ ತೆಗೆದಿಡಬೇಕಾಗುತ್ತದೆ. ಈ ಬಗ್ಗೆ ಬಜೆಟ್‌ನಲ್ಲಿ 'ಕರ್ನಾಟಕ ವಿದ್ಯುಚ್ಛಕ್ತಿ ನಿಗಮಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿಂದ ಬರಬೇಕಾದ ಬಹಳಷ್ಟು ಹಣ ಬಾಕಿ ಇದೆ' ಎಂದು ಹೇಳಿದ್ದಾರೆ. ಕರ್ನಾಟಕ ವಿದ್ಯುಚ್ಛಕ್ತಿ ನಿಗಮದಲ್ಲಿ ಹಣದ ಮುಗ್ಗಟ್ಟು ಇರುವ ಕಾರಣ ಹೊಸದಾಗಿ ಹೆಚ್ಚಿನ ವಿದ್ಯುತ್ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲವೆಂಬ ಮಾತನ್ನು ಸಹ ಹೇಳಿದ್ದಾರೆ.

ಅಲ್ಲಿ ವಿವರಗಳನ್ನು ಕೊಡಲಿಕ್ಕೆ ಹೋಗಿಲ್ಲ, ಒಂದೇ ಒಂದು ಸೆಂಟೆನ್ಸ್‌ನಲ್ಲಿ ಮುಗಿಸಿದ್ದಾರೆ. ಬಡ್ಜೆಟ್‌ನಲ್ಲಿ ಹೇಳಬೇಕಾಗಿತ್ತು, ಕಾಳೀ ಯೋಜನೆ ಬಗ್ಗೆ ವಿವರಗಳನ್ನು ಬರೆದಿದ್ದೀರಿ. ಓದಿದರೆ ಗೊತ್ತಾಗುತ್ತದೆ. This is completely devoid of any descriptions ಇಲ್ಲವೇ ಇಲ್ಲ ಇದು ಏನು ತೋರಿಸುತ್ತದೆ ಎಂದರೆ ನೀವು ಎಷ್ಟು ಜವಾಬ್ದಾರಿಯಿಂದ ಸದನಕ್ಕೆ ಆಯವ್ಯಯ ಪತ್ರವನ್ನು ನೀಡಬೇಕಾಗಿತ್ತೋ ಆ ರೀತಿ ಕೊಡುವುದಕ್ಕಾಗಿಲ್ಲ, ವಿವರಗಳನ್ನು ಕೊಡುವುದಕ್ಕೆ ನಿಮಗೆ ಆಗಲಿಲ್ಲ. ಅಂದರೆ Completely you have failed so far as that sector is concerned and to have more power generated also in the State. ನಿಮಗೆ ಮಾಡುವುದಕ್ಕೆ ಆಗುತ್ತಾ ಇಲ್ಲ. ಕೆ. ಪಿ. ಸಿ ಗತಿ ಏನಾಗಿದೆ. ಇವತ್ತು. ಶರಾವತಿ ವ್ಯಾಲಿ ಹೈಡಲ್ ಪ್ರಾಜೆಕ್ಟ್ ನಮಗೆ ಇರತಕ್ಕ ಒಂದು ಪ್ರಾಜೆಕ್ಟ್, ಶಿವಮೊಗ್ಗ ಜಿಲ್ಲೆಯಲ್ಲಿರತಕ್ಕಂಥಾದ್ದು. ಮತ್ತೊಂದು ಕಾಳಿ ಯೋಜನೆ ನಮಗೆ ಇರತಕ್ಕದ್ದು. These are the two main hydro-electric projects. ನೀರಿನಿಂದ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಿಕೊಳ್ಳಬೇಕು. ಆಯವ್ಯಯದಲ್ಲಿ ಶರಾವತಿ ಟೇಲ್ ರೇಸ್ ಯೋಜನೆ ಬಗ್ಗೆ ಹೇಳಿದ್ದೀರಿ, ಆದರೆ ವಿವರಗಳನ್ನು ಕೊಟ್ಟಿಲ್ಲ. ಇದನ್ನು ಯಾವಾಗ ಮಾಡುತ್ತೀರಿ ? ಹಣವನ್ನು ಎಲ್ಲಿ ತಂದಿಟ್ಟಿದ್ದೀರಿ ಎನ್ನುವುದರ ಬಗ್ಗೆ ವಿವರಗಳನ್ನು ಕೊಡದೆ ಬರೀ ಹೆಸರನ್ನು ಮಾತ್ರ ಪ್ರಕಟ ಮಾಡಿದ್ದೀರಿ. ಮಾನ್ಯ ಸದಸ್ಯರು ವಿವರಗಳನ್ನು ಕೊಟ್ಟು ಹೇಳುವುದಕ್ಕೆ

ಬರದೇ ಇರತಕ್ಕಂಥ ಸ್ಥಿತಿಯಲ್ಲಿಟ್ಟಿದ್ದೀರಿ ಕಾಳಿ ಪ್ರಾಜೆಕ್ಟ್ ವಿಚಾರದಲ್ಲಿ ಎಲ್ಲಿ ವಿವರಗಳಿವೆ. ವಿವರಗಳು ಏನೇನೂ ಇಲ್ಲದೆ ಇರತಕ್ಕ ಪರಿಸ್ಥಿತಿ ಇದೆ. ಇದು ಯಾವಾಗ ಪ್ರಾರಂಭವಾಗುತ್ತದೆ, ಉಳಿದಿರತಕ್ಕದ್ದು ಯಾವುದು ಒಟ್ಟು ಉತ್ಪಾದನಾ ಸಾಮರ್ಥ್ಯ ಎಷ್ಟು ಎಷ್ಟು ಆಗಿದೆ. ಎಷ್ಟು ಆಗಬೇಕು ಟೈಂ ಟಾರ್ಗೆಟ್ ಏನು ಹಣದ ಟಾರ್ಗೆಟ್ ಏನು ಅವೇಲಬಿಲಿಟಿ ಆಫ್ ಫಂಡ್ಸ್ ಎಷ್ಟು, ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ಏನೂ ಹೇಳದೇ, ಕಾಳೀ ಪ್ರಾಜೆಕ್ಟ್ ಬಗ್ಗೆ ವಿವರಗಳನ್ನು ಕೊಡದೆ, ಸದನಕ್ಕೆ ವಿವರಗಳನ್ನು ಕೊಡದೆ ಇಡೀ ಕರ್ನಾಟಕದ ಜನತೆಯನ್ನು ಹೀಗೆಯೇ ಕತ್ತಲಲ್ಲಿ ಇಟ್ಟಿದ್ದೀರಿ ? ಇನ್ನು ರಾಯಚೂರಿನ ಥರ್ಮಲ್ ಪವರ್ ಪ್ಲಾಂಟ್ ಇದು ನಮಗಿರತಕ್ಕ ಒಂದೇ ಒಂದು ಪ್ಲಾಂಟ್ ಇದು ಸಂಪೂರ್ಣವಾಗಿ ಕಮಿಷನ್ ಆದರೂ ಕೂಡ ಎಷ್ಟಾಗುತ್ತದೆ. ವಾರಾಹಿ, ಚಕ್ರ ಇವೆಲ್ಲಾ ಡೈವರ್ಷನ್ ಸ್ಕೀಮ್ಸ್ ನಾವೆಲ್ಲಾ ಕೆಲಸವನ್ನು ಮಾಡಿದ್ದೇವೆ. ವಾರಾಹಿ ಮಲ್ಟಿ-ಪರ್ಪಸ್ ಪ್ರಾಜೆಕ್ಟ್. ಚಕ್ರ ಡೈವರ್ಷನ್ ಸ್ಕಿಂ. ಈ ಪ್ರಾಜೆಕ್ಟ್‌ಗಳಿಂದ ಒಟ್ಟಾರೆ ಎಷ್ಟು ವಿದ್ಯುಚ್ಛಕ್ತಿ ಉತ್ಪಾದನೆ ಮಾಡಬಹುದು, ಎಷ್ಟು ಸಾಮರ್ಥ್ಯ ಇದೆ ಎಷ್ಟು ಸಿಗುತ್ತದೆ ಎಂದು ವಿದ್ಯುಚ್ಛಕ್ತಿ ಇಲಾಖೆಯ ಇಂಜಿನಿಯರ್ಸ್ ಮಾಡಿ ಇಟ್ಟಿದ್ದಾರೆ ಒಂದು ವಿಚಾರ ಹೇಳಬೇಕಾಗಿದೆ. ಇದು ನಮ್ಮ ಕೈಯಲ್ಲಿ ಇಲ್ಲ ನಿಮ್ಮ ಕೈಯಲ್ಲೂ ಇಲ್ಲ, ರೇನ್‌ಫಾಲ್ ವರ್ಷದಿಂದ ವರ್ಷಕ್ಕೆ ಕೆಳಗೆ ಹೋಗುತ್ತಿದೆ, ನಮ್ಮ ರಾಷ್ಟ್ರ ಒಂದೇ ಅಲ್ಲ, ನಮ್ಮ ರಾಜ್ಯ ಒಂದೇ ಅಲ್ಲ, ಅಖಂಡ ಪ್ರಪಂಚದಲ್ಲಿ ರೇನ್‌ಫಾಲ್ ವರ್ಷೇ ವರ್ಷೇ ಷ ರ್ಜೀ ಜಾಗುತ್ತಾ ಹೋಗುತ್ತಿದೆ. ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಇರಬಹುದು, ಕಾಳೀ ಇರಬಹುದು ಅಥವಾ ಬೇರೆ ಇರಬಹುದು, ಅಲ್ಲೆಲ್ಲಾ ನೀರು ತುಂಬುವುದು ಯಾವಾಗ ? ಥರ್ಮಲ್ ಪ್ಲಾಂಟ್ ಸಂಪೂರ್ಣವಾಗಿ ಕಮಿಷನ್ ಆದ ಮೇಲೆ, ಕಾಳೀ ಪ್ರಾಜೆಕ್ಟ್ ಸಂಪೂರ್ಣ ಆದ ಮೇಲೆ ಅದು ತುಂಬಿದರೂ ಕೂಡ ವಿದ್ಯುಚ್ಛಕ್ತಿಯ ಕಂಪ್ಲೀಟ್ ಕೊರತೆ ನಮಗೆ ಅಗಾಧ ಪ್ರಮಾಣದಲ್ಲಿದೆ. ಇನ್ನು ಕಾರವಾರದ ಕೈಗಾ ಅಣು ವಿದ್ಯುತ್ ಸ್ಥಾವರವನ್ನು ಕೇಂದ್ರ ಸರ್ಕಾರದವರು ಮಂಜೂರು ಮಾಡಿ ಕೊಟ್ಟಿದ್ದಾರೆ. ಅದು ಆದ ಮೇಲೂ ಕೂಡ ಕರ್ನಾಟಕ ರಾಜ್ಯ ಇನ್ನೂ ವಿದ್ಯುಚ್ಛಕ್ತಿ ಕೊರತೆಯಲ್ಲಿ ಬೀಳುತ್ತದೆ. ರಾಜ್ಯದಲ್ಲಿ ಈ ಪರಿಸ್ಥಿತಿ ಇರಬೇಕಾದರೆ ನಿಮ್ಮ ಕರ್ತವ್ಯವೇನು ? ಕೊನೆಯ ಪಕ್ಷ ಬೇರೆ ಬೇರೆ ಪ್ರಾಜೆಕ್ಟ್‌ಗಳು, ಹೈಡಲ್ ಪ್ರಾಜೆಕ್ಟ್‌ಗಳು. ಬೇರೆ ಥರ್ಮಲ್ ಪ್ಲಾಂಟ್‌ಗಳನ್ನು ಮತ್ತೊಂದು ಕಡೆ ಮಾಡಬೇಕಾದಂಥ ವಿಚಾರವನ್ನು ಇಡತಕ್ಕಂಥ ವಿಚಾರಧಾರೆ ನಿಮ್ಮ ಹತ್ತಿರ ಇಲ್ಲ. ೧೯೮೩–೮೪ ರಿಂದ ಆಯವ್ಯಯವನ್ನು ನೋಡುತ್ತಾ ಇದ್ದೇನೆ. ಕೋರ್ ಸೆಕ್ಟಾರ್‌ಗೆ ಸಂಬಂಧಪಟ್ಟ ವಿಚಾರದಲ್ಲಿ ನೀವು ಗಮನ ಕೊಡದೇ ಇದ್ದೀರಿ. ಇವತ್ತು ಹೈಟೆನ್‌ಷನ್ ವಿದ್ಯುತ್ ಬಳಕೆ ಬಹಳ ಪ್ರಮಾಣದಲ್ಲಿ ಹೆಚ್ಚಿವೆ, ಡೊಮೆಸ್ಟಿಕ್ ಉಪಯೋಗ ಕಡಿಮೆ ಇದೆ. ಬೆಳಗಾಂನಲ್ಲಿರತಕ್ಕ ಅಲ್ಯೂಮಿನಿಯಂ ಫ್ಯಾಕ್ಟರಿಗೆ ಸಿಕ್ಕಾಪಟ್ಟೆ ಪವರ್ ಬೇಕಾಗಿದೆ. ಅದು ಸಾಕಷ್ಟು ಹೆಚ್ಚು ಪ್ರಮಾಣದಲ್ಲಿ ವಿದ್ಯುತ್ ಬಳಸುತ್ತಿದೆ. ಅದರ ಬಗ್ಗೆ ವಿವರಗಳು ಇವೆ, ನಾನು ಇಲ್ಲಿ ತಂದಿಲ್ಲ ಬೆಂಗಳೂರು ನಗರದಲ್ಲಿ ಕೂಡ ಹೆಚ್ ಟಿ. ಯೂಸರ್ಸ್ ಸಂಖ್ಯೆ ಜಾಸ್ತಿ ಇದೆ. ೨೮ ಕಂಪನಿಗಳು ಹೆಚ್. ಟಿ ಯೂಸ್ ಮಾಡುತ್ತಿವೆ. ಡೈಮೆಂಡ್ ಸಿಮೆಂಟ್ ಇತರೆ ಕಂಪನಿಗಳು ಪವರ್‌ನ್ನು ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸುತ್ತಿವೆ. ಇವತ್ತು ಗ್ಯಾಸ್ ಬಂದ ಮೇಲೆ ಎಂ.ಇ.ಹೆಚ್. ಪ್ರಮಾಣ ಕಡಿಮೆಯಾಗಿದೆ ಹಳ್ಳಿಗಳಲ್ಲಿ ಗ್ಯಾಸ್ ಸಿಗುವುದಿಲ್ಲ. ಇವತ್ತು ಹಳ್ಳಿಗಾಡುಗಳಲ್ಲಿ ಎ. ಇ. ಹೆಚ್. ಜಾಸ್ತಿ ಮಾಡಿಸುತ್ತಿದ್ದಾರೆ. ಅವರಿಗೆ ಇತ್ತೀಚೆಗೆ ಸೌದೆ ಸಿಗುವುದು ಕಷ್ಟವಾಗಿದೆ. ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಬೋರ್ಡಿನಿಂದ ಸಹಾಯಧನ ಕೊಟ್ಟು ಗೋಬರ್ ಗ್ಯಾಸ್ ಪ್ಲಾಂಟುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಮಲೆನಾಡು ಪ್ರದೇಶದಲ್ಲಿ ಮರ ಕಡಿಯುವುದನ್ನು ನಿಲ್ಲಿಸುವ ದೃಷ್ಟಿಯಿಂದ ಇಂಥ ಒಂದು ಕೆಲಸವನ್ನು ಮಾಡಬೇಕಾಗಿದೆ, ಆದರೆ, ಇದರ ಬಗ್ಗೆ ಬಜೆಟ್ ಭಾಷಣದಲ್ಲಿ ಒಂದು ಮಾತೂ ಇಲ್ಲ ಪವರ್ ಉಳಿಸುವ ವಿಚಾರದಲ್ಲಿ ಒಂದು ಶಬ್ದ ಕೂಡ ಇಲ್ಲ. ಗೋಬರ್ ಗ್ಯಾಸ್‌ಗೆ ಉತ್ತೇಜನ ಕೊಡುವಂಥ ಒಂದು ಮಾತನ್ನಾಡಿಲ್ಲ. ಇದಕ್ಕೆ ಕೊಡಬೇಕಾದ ಸಬ್ಸಿಡಿ ಹಣ ಕೊಟ್ಟಿಲ್ಲ. ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಬೋರ್ಡ್ ಜನರಲ್ ಬಾಡಿ ಮೀಟಿಂಗ್ ಕೂಡ ಮಾಡಿಲ್ಲ, ಸರ್ಕಾರದ ಕೃಪಾಕಟಾಕ್ಷದಿಂದ ಹೀಗೆಯೇ ಹೋಗುತ್ತಿದೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಪ್ರಧಾನ ವಲಯಗಳಿಗೆ ಗಮನ ಕೊಡದೆ ಸಂಪೂರ್ಣವಾಗಿ ರಾಜ್ಯದ ಅಭಿವೃದ್ಧಿ ನಾಶವಾಗುವುದಕ್ಕೆ ನೇರವಾಗಿ ಸರ್ಕಾರದವರು ಕಾರಣಕರ್ತರಾಗಿದ್ದಾರೆ. ಕೇಂದ್ರ ಸರ್ಕಾರ ಕೊಟ್ಟಿರುವಂಥ ಹಣವನ್ನು ಕೂಡ ಕೊಟ್ಟಿಲ್ಲ. ನೀರಾವರಿ ಬಗ್ಗೆ ನೋಡಿದರೆ ನಿಮ್ಮ ಹೇಳಿಕೆ, ಮಾನ್ಯ ದೇವೇಗೌಡರ ಹೇಳಿಕೆ ಒಂದೊಂದು ರೀತಿ ಇದೆ. ಕೃಷ್ಣ ಬೇಸಿನ್‌ಗೆ ೨೦೦ ಕೋಟಿ ರೂಪಾಯಿಗಳು, ಕಾವೇರಿ ಬೇಸಿನ್‌ಗೆ ೧೨೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು

ಮಾತನಾಡಿದರು. ನಿನ್ನೆ ಮೊನ್ನೆ ಕೂಡ ಇಲ್ಲಿ ವಿಚಾರ ಬಂತು. ಇವತ್ತು ಎಷ್ಟು ಹಣ ಕೊಟ್ಟಿದ್ದಾರೆಂಬುದನ್ನು ಕಳೆದ ವರ್ಷದ ಆರ್ಥಿಕ ಸಮೀಕ್ಷೆಯಲ್ಲಿ ನೋಡಿದರೆ ಗೊತ್ತಾಗುತ್ತದೆ. ಪ್ರಧಾನ ವಲಯಗಳಾದ ನೀರಾವರಿಗೆ ಮತ್ತು ಪವರ್‌ಗೆ ಅಷ್ಟು ಗಮನವನ್ನು ಕೊಟ್ಟಿಲ್ಲ. ಈ ಸಾಲಿನ ಬಡ್ಜೆಟ್ಟಿನಲ್ಲೂ ಏಳಷ್ಟು ಗಮನ ಕೊಡದೆ ರಾಜ್ಯದ ಅಭಿವೃದ್ಧಿಗೆ ಧಕ್ಕೆ ತರುವುದಕ್ಕೆ ನೀವೇ ಕಾರಣರಾಗಿದ್ದೀರೆಂದು ಅನಿವಾರ್ಯವಾಗಿ ಹೇಳಬೇಕಾಗಿದೆ. ಇವತ್ತು ಕೈಗಾರಿಕೆಗಳಿಗೆ ಪವರ್ ಇಲ್ಲದೇ ನಷ್ಟದಲ್ಲಿವೆ, ಉತ್ಪಾದನೆ ಕಡಿಮೆಯಾಗಿದೆ. ಕೋಟಿಗಟ್ಟಲೆ ನಷ್ಟವನ್ನು ಕೈಗಾರಿಕೆಗಳು ಅನುಭವಿಸುತ್ತಿವೆ.

೫-೩೦ ಪಿ.ಎಂ.

ನೀವು ಹೇಳಿದ್ದೀರಿ, ಈ ಅನಿವಾಸಿ ಭಾರತೀಯರರು, ನಾನ್ ರೆಸಿಡೆಂಟ್ ಇಂಡಿಯನ್ಸ್ (ಎನ್.ಆರ್ ಐ.) ಇವರ ಕಡೆ ತಾವು ಒಂದು ಟ್ರಿಪ್ ಹೋಗಿದ್ದೀರಿ, ಅಂದರೆ ಪೂರ್ವದ ಕಡೆ ಒಂದು ಟ್ರಿಪ್ ಹೋಗಿದ್ದೀರಿ. ಸಿಂಗಪುರ್, ಹಾಂಕಾಂಗ್, ಬಾಂಕಾಕ್, ಜಪಾನ್ ಮತ್ತು ಟೋಕಿಯೋ. ಈ ಕಡೆಗೆಲ್ಲಾ ಹೋಗಿ ಬಂದಿದ್ದಾರೆ. ಇವರು ಅಲ್ಲೆಲ್ಲಾ ಹೋಗಿ ಬಂದ ಮೇಲೆ ಎಂತಹ ರೋಜಿ ಪಿಕ್ಚರ್ ಕೊಟ್ಟರು ಎನ್ನುವುದು ತಮಗೆಲ್ಲಾ ಗೊತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ಪಟೇಲ್‌ರವರು ಒಂದು ಕಡೆ ಪೂರ್ವದ ಕಡೆ ಹೋಗಿ ಪ್ರಯಾಣ ಮಾಡಿ ಬಂದರು. ಇದಕ್ಕೆ ಒಂದು ದಿಗ್ವಿಜಯ ಎಂದು ಹೇಳಬೇಕಾಗುತ್ತದೆ, ಆಗಿನ ಕಾಲದಲ್ಲಿ ಅಶ್ವಮೇಧಯಾಗ ಎಂದು ಮಾಡುತ್ತಿದ್ದರು, ಆಗ ಬಿಟ್ಟಿರತಕ್ಕಂತಹ ಕುದುರೆ ಕಟ್ಟಿಬಿಟ್ಟರೆ ಸಾಕು ದಿಗ್ವಿಜಯ ಸಾಧಿಸಬೇಕಾಗಿತ್ತು. ಆ ತರಹ ಇವರು ಪೂರ್ವದ ಕಡೆಗೆ ಹೋಗಿಬಿಟ್ಟುಬಂದು ಒಂದು ರೋಜಿ ಪಿಕ್ಚರ್ ಕೊಟ್ಟುಬಿಟ್ಟರು, ನೂರಾರು ಕೋಟಿ ರೂಪಾಯಿ ಬಂಡವಾಳ ತರುತ್ತೇವೆಂದು ಹೇಳಿದರು. ನಿಜವಾಗಿ ಹೇಳಬೇಕೆಂದರೆ ಅಷ್ಟೊಂದು ಏಡ್ ತರುತ್ತೇವೆಂದು ಹೇಳಿದರು, ಇವರು ಹೋಗಿ ಯಾವ ಏಡ್ ತಂದರು. ನಾನು ಆ ಒಂದು ಅರ್ಥದಲ್ಲಿ ಹೇಳುವುದಿಲ್ಲ, ಹಣಕಾಸಿನ ನೆರವಿನ ದೃಷ್ಟಿಯಲ್ಲಿ ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಪೂರ್ವಕ್ಕೆ ಒಂದು ಕಡೆ ಹೋದರು, ಅನಂತರ ಪಶ್ಚಿಮಕ್ಕೆ ಅಂದರೆ ಅಮೆರಿಕಕ್ಕೆ ಹೋಗಿ ಬಂದರು. ಇವರು ಹೋಗಿ ಎಷ್ಟು ಏಡ್ ತಂದಿದ್ದಾರೆ ಎನ್ನುವ ಬಗ್ಗೆ ವಿಚಾರಣೆ ಆಗಬೇಕು. ಇವರು ಎಷ್ಟೆಷ್ಟು ಸಹಾಯ ಧನ ಎನ್.ಆರ್.ಐ. ಅವರ ಕಡೆಯಿಂದ ತಂದರು ಅದರ ಬಗ್ಗೆ ವಿಚಾರಣೆಯಾಗಬೇಕು. ಲಕ್ಷಗಟ್ಟಲೆ ಹಣ ಖರ್ಚು ಮಾಡಿ ಇವರು ಪ್ರವಾಸಕ್ಕೆ ಹೋಗಿ ಇಲ್ಲಿ ವರ್ಣರಂಜಿತ ಚಿತ್ರವನ್ನು ಕೊಟ್ಟು ಮಾನ್ಯ ಸದಸ್ಯರಿಗೆ ಕರ್ನಾಟಕದ ಜನತೆಗೆ ನಂಬಿಕೆ ಬರುವ ರೀತಿಯಲ್ಲಿ ವ್ಯಾಖ್ಯಾನ ಮಾಡಿಬಿಟ್ಟರು. ಇವರು ಎಷ್ಟು ಹಣ ತಂದಿದ್ದಾರೆ, ಇದರ ಬಗ್ಗೆ ಸಂಪೂರ್ಣವಾಗಿ ವಿಚಾರಣೆಯಾಗಬೇಕು? ಯಾವ ತರಹದ ವಿಚಾರಣೆ ಆಗಬೇಕು ಎನ್ನುವ ಬಗ್ಗೆ ಮಾನ್ಯ ಅಧ್ಯಕ್ಷರಿಗೆ ಬಿಡುತ್ತೇನೆ. ತಾವು ಈ ಸದನದ ಸಮಿತಿಯನ್ನಾದರೂ ಮಾಡಿ, ಅಥವಾ ನ್ಯಾಯಾಂಗ ತನಿಖೆಯಾಗಲಿ ಅಂದರೆ ಅದನ್ನೇ ಮಾಡಿಸಿ, ತನಿಖೆ ಯಾವರೀತಿ ಆಗಬೇಕು ಎನ್ನುವ ವಿಚಾರವನ್ನು ನಾನು ಅಧ್ಯಕ್ಷರಿಗೆ ಬಿಡುತ್ತೇನೆ. ಏಕೆಂದರೆ, ದೊಡ್ಡ ದೊಡ್ಡ ಮಾತುಗಳನ್ನು ಆಡಿ, ಬಾರಿ ಹೇಳಿಕೆಗಳಿಂದ ಜನರನ್ನು ನಂಬಿಸಿ ವಂಚನೆ ಮಾಡತಕ್ಕ ಮಟ್ಟಕ್ಕೆ ಹೋಗಿರತಕ್ಕ ಸರ್ಕಾರ ಇನ್ನು ಯಾವ ಮಟ್ಟಕ್ಕೆ ಇವರು ರಾಜ್ಯದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಗಮನವನ್ನು ಕೊಡುತ್ತಾರೆ? ಇವರು ಮೊದಲು ಆಸ್ಟೆರಿಟಿ ಮೆಜರ್ ತರುತ್ತೇವೆಂದು ಹೇಳಿದ್ದರು. ಇವರು ಹೇಳಿರತಕ್ಕದ್ದನ್ನೆಲ್ಲಾ ನಾನು ಪದೇ ಪದೇ ಹೇಳಲಿಕ್ಕೆ ಆಸಕ್ತಿ ಇಲ್ಲ. ಅನ್ಯಾಯವಾಗಿ ಆಗತಕ್ಕ ವೆಚ್ಚವನ್ನು ಕಡಿಮೆ ಮಾಡುವಂಥದ್ದು ಮತ್ತು ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡುಂಥ ಕೆಲಸವನ್ನು ಇವರು ಮಾಡಬೇಕಾಗಿತ್ತು. ಇವೊತ್ತು ಕರ್ನಾಟಕದಲ್ಲಿ ೧೯ ಜಿಲ್ಲೆಗಳು ಇರುವಂಥಾದ್ದು ಇವು ೨೨ ಜಿಲ್ಲೆಗಳೇನೂ ಆಗುವುದಿಲ್ಲ, ಇವುಗಳೇನು ಹಿಗ್ಗುವುದಿಲ್ಲ, ಕುಗ್ಗುವುದಿಲ್ಲ. ಅವುಗಳ ಸಮಸ್ಯೆಗಳು ಇರುತ್ತವೆ. ಇವೊತ್ತು ನಮಗೆ ಹಣದ ವಿಚಾರದಲ್ಲಿ ಕೇಂದ್ರ ಸರ್ಕಾರ ಕೊಡುತ್ತದೆ, ಇಲ್ಲಿ ಹಣ ರೂಢಿಸಿಕೊಳ್ಳುವಂಥಾದ್ದು ಇರುತ್ತದೆ. ಇದರ ಬಗ್ಗೆ ನಾನು ಪದೇ ಪದೇ ಮಾತನಾಡಿದ್ದೇನೆ, ಅನ್ಯಾಯವಾಗಿ ವೆಚ್ಚವಾಗುವುದನ್ನು ನಿಲ್ಲಿಸುವಂಥಾದ್ದರ ಕಡೆಗೆ ಇವರು ಹೆಚ್ಚು ಗಮನ ಕೊಡಬೇಕು. ಇವೊತ್ತು ಮಾನ್ಯ ಸಚಿವರೊಬ್ಬರು ಇದರ ಬಗ್ಗೆ ಪ್ರಸ್ತಾಪವಾಗಿದೆ ಮತ್ತೆ ಏತಕ್ಕೆ ಈಗ ಎಂದು ಹೇಳಿದರು. ಅದು ಪ್ರಸ್ತಾಪವಾಗಿರಬಹುದು, ಪ್ರಸ್ತಾಪ ಬೇರೆ, ಚರ್ಚೆಯೇ ಬೇರೆ. ಇನ್ನು ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳು ಬಂದಮೇಲೆ ಇವರು ಹೇಳತಕ್ಕದ್ದು ನೋಡಿದರೆ ಕಾಮಧೇನು ಕಲ್ಪವೃಕ್ಷ, ಕಾಮಧೇನು ಕೆಚ್ಚಲಿಗೆ ಕೈ ಹಾಕಿದರೆ, ಕೊಡದ

ತುಂಬಾ ಹಾಲುಂ ಹಂಡೆ ತುಂಬಾ ಹಾಲು ಎನ್ನುವ ಮಾತನ್ನು ಆಡಿದರು. ಇವೊತ್ತು ಏನಾಗಿದೆ ಇವುಗಳೆಲ್ಲಾ ಒಣಗಿ ನಾರುತ್ತಿವೆ. ಅವುಗಳ ಹತ್ತಿರಕ್ಕೆ ಹೋದರೆ ಸಾಕು ಒದೆಯುತ್ತವೆ. ಇವರು ಒಂದು ವರ್ಷಕ್ಕೆ ೧೬ ಲಕ್ಷ ರೂಪಾಯಿಗಳನ್ನು ಮಂಡಲ್ ಪಂಚಾಯಿತಿಗಳಿಗೆ ಬೇಕು ಎಂದು ಹೇಳಬೇಕಾದರೆ ಇವರು ಒಂದು ಹಿಡಿತ ಇಟ್ಟುಕೊಂಡು ಏನಾದರೂ ಹೇಳಿದರೇನು ? ಹೋಗಲಿ, ಲಕ್ಷಾಂತರ ರೂಪಾಯಿ ಬೇಡ, ನಿಜವಾಗಿ ನಿಮಗೆ ೫೦ ಸಾವಿರ ರೂಪಾಯಿಗಳನ್ನು ಕೊಡುತ್ತೇವೆ ಪ್ರತಿ ವರ್ಷವೂ ಎಂದು ಹೇಳಿದ್ದರೂ ನಾನು ಒಪ್ಪಿಕೊಳ್ಳುತ್ತಿದ್ದೆ ಸ್ವಾಮಿ ನಾನು ಹೇಳುತ್ತಿದ್ದೇನೆ, ಇವರಿಗೆ ಆರ್ಥಿಕ ಪ್ರಜ್ಞೆಯೇ ಇಲ್ಲ. ಮಂಡಲ ಪಂಚಾಯತಿಗಳಿಗೆ ಒಂದು ವರ್ಷಕ್ಕೆ ೧೬ ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದರು. ಮಾನ್ಯ ಅಧ್ಯಕ್ಷರೆ, ತಮಗೂ ಗೊತ್ತಿದೆಯೆಂದು ಅಂದುಕೊಂಡಿದ್ದೇನೆ. ಹಿರೇಕೆರೂರು ಮತ್ತು ಸೊರಬದಲ್ಲಿ ನಾವೂ ನೋಡಿದ್ದೇವೆ. ತಾವು ಹಳ್ಳಿಯಿಂದ ಬಂದಿರತಕ್ಕವರು. ಮಾನ್ಯ ಲಕ್ಷ್ಮೀಸಾಗರ್‌ರವರು ಪಟ್ಟಣದಲ್ಲಿದ್ದುಕೊಂಡು ಇಲ್ಲೇ ಆರಿಸಿ ಬಂದಿರುವವರು ಆದ್ದರಿಂದ ಅವರಿಗೆ ಹಳ್ಳಿಯ ಜನರ ಕಷ್ಟ ಗೊತ್ತಿಲ್ಲ. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಇವುಗಳಿಗೆ ತಾವು ಇದುವರೆಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ? ನಾವು ಒಂದು ವರ್ಷಕ್ಕೆ ಒಂದು ಮಂಡಲ ಪಂಚಾಯತ್‌ಗೆ ೧೬ ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಮೊದಲನೆಯ ಸಾರಿ ಯಾವಾಗ ನೀವು ಹೇಳಿದಿರೋ ಆಗಲೇ ಎಲ್ಲಾ ಜನರ ಬಾಯಲ್ಲೂ ಜೊಲ್ಲು ಸುರಿಯುವುದಕ್ಕೆ ಶುರುವಾಯಿತು. ನೀವು ಏನು ಮಾಡಿದಿರಿ ಎಂದರೆ ಮೂಗಿಗೆ ತುಪ್ಪ ಹಚ್ಚಿಬಿಟ್ಟಿರಿ. ಆದರೆ ಅದು ನಾಲಿಗೆಗೆ ಸಿಕ್ಕುವಂತಿಲ್ಲ ವಾಸನೆಯೂ ತಪ್ಪುವಂತಿಲ್ಲ ನೀವು ಲಕ್ಷ ಎಂದು ಅಂದ ಕೂಡಲೇ ಎಲ್ಲರ ಬಾಯಲ್ಲೂ ಜೊಲ್ಲು ಸುರಿಯುವುದಕ್ಕೆ ಶುರುವಾಯಿತು, ಎಲ್ಲರೂ ಕನಸನ್ನು ಕಾಣುವುದಕ್ಕೆ ಪ್ರಾರಂಭ ಮಾಡಿದರು. ಆ ಕನಸು ಏನಪ್ಪಾ ಎಂದರೆ, ನಾನೂ ಮಂಡಲ ಪಂಚಾಯಿತಿಯ ಸದಸ್ಯನಾಗಿದ್ದರೆ, ನಾನು ಮಂಡಲ ಪಂಚಾಯಿತಿಯ ಪ್ರಧಾನನಾಗಿದ್ದರೆ, ನಾನು ಉಪ ಪ್ರಧಾನನಾಗಿದ್ದರೆ ಹಾಗಿರುತ್ತಿದ್ದೆ, ಹೀಗಿರುತ್ತಿದ್ದೆ ಎಂದು ಕನಸು ಕಾಣುವುದಕ್ಕೆ ಪ್ರಾರಂಭ ಮಾಡಿದರು. ಇದು ಹೇಗಪ್ಪಾ ಎಂದರೆ ತಿರುಕನ ಕನಸು ಇದ್ದಂತೆ.

ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ನನಗೆ ಒಂದು ಕಥೆ ನೆನಪಿಗೆ ಬರುತ್ತದೆ. ಒಬ್ಬ ತಿರುಕ ಊರಿನೊಳಗೆ ಪ್ರತಿಯೊಂದು ಮನೆಯ ಹತ್ತಿರಕ್ಕೂ ಹೋಗಿ ಹೋಗಿ ತಿರಿದುಕೊಂಡು ಬಂದ. ಮಟಮಟ ಮಧ್ಯಾಹ್ನ, ಮೊನ್ನೆ ಆದ ಯುಗಾದಿಯಂತೆ. ಅದೂ ಕೂಡ ಯುಗಾದಿಯ ಟೈಂ, ಅವನು ತಿರುಗೀ ತಿರುಗೀ ಸುಸ್ತಾಗಿದ್ದ. ಊರಿನ ಮುಂದೆ ಬಂದ, ಅಲ್ಲೊಂದು ಹಾಳು ಗುಡಿಯ ಗೋಡೆಗೆ ಒರಗಿದ. ಅವನು ಸುಸ್ತಾಗಿದ್ದುದರಿಂದ ಚೆನ್ನಾಗಿ ನಿದ್ದೆ ಬಂದು ಒಂದು ಕನಸು ಬಿತ್ತು. ಅದು ರಾಜರ ಕಾಲ. ಈಗಿನ ಕಾಲದಲ್ಲಿ ಇವರೇ ರಾಜರು. ಆ ಕಾಲದಲ್ಲಿ ರಾಜ ಮಹಾರಾಜರು ಇದ್ದರು. ಆ ದೇಶದ ರಾಜನಿಗೆ ಮಕ್ಕಳೇ ಇರಲಿಲ್ಲ. ಆದ್ದರಿಂದ ಮುಂದೆ ಈ ಸಿಂಹಾಸನದ ಮೇಲೆ ಯಾರನ್ನು ಕೂಡಿಸಬೇಕೆಂದು ಯೋಚನೆ ಮಾಡುತ್ತಿದ್ದ. ಆಮೇಲೆ ಏನು ಆಲೋಚನೆ ಬಂತು ಎಂದರೆ ತನ್ನ ಅರಮನೆಯಲ್ಲಿರುವ ಪಟ್ಟದ ಆನೆಯ ಸೊಂಡಿಲಿಗೆ ಒಂದು ಹಾರವನ್ನು ಸಿಕ್ಕಿಸಿಬಿಡುವುದು. ಅಲ್ಲಿ ಸಾವಿರಾರು ಜನರು ಸೇರಿರುತ್ತಾರೆ. ಈ ಆನೆ ಯಾರ ಕೊರಳಿಗೆ ಹಾರವನ್ನು ಹಾಕುತ್ತದೆ ಅವನೇ ಈ ರಾಜ್ಯದ ಉತ್ತರಾಧಿಕಾರಿ, ಅವನೇ ಈ ರಾಜ್ಯದ ಮಹಾರಾಜನಾಗತಕ್ಕವನು ಎನ್ನತಕ್ಕ ವಿಚಾರವನ್ನು ಆ ರಾಜ ಡಂಗುರವನ್ನು ಹೊಡೆಸಿದ. ಇದು ಆ ತಿರುಕನಿಗೂ ಗೊತ್ತಾಯಿತು ಎಂದು ಕಾಣಿಸುತ್ತದೆ. ಅಥವಾ ಅವನೂ ಅದನ್ನೇ ಯೋಚನೆ ಮಾಡಿದ್ದನೋ ಏನೋ ಗೊತ್ತಿಲ್ಲ. ಆ ತಿರುಕನೂ ಕೂಡ ಅಲ್ಲಿ ಸೇರಿದ ಜನರ ಮಧ್ಯೆ ಹೋಗಿ ಕುಳಿತುಬಿಟ್ಟಿದ್ದ. ಇದು ಆ ತಿರುಕನ ಲಕ್ಕೋ ಏನೋ ಗೊತ್ತಿಲ್ಲ. ಈ ಪಟ್ಟದ ಆನೆ ಮಾಲೆಯನ್ನು ತಂದು ಈ ತಿರುಕನ ಕೊರಳಿಗೆ ಹಾಕಿಬಿಟ್ಟಿತು. ಆತನು ಸಿಂಹಾಸನಕ್ಕೆ ಏರಿಯೇಬಿಟ್ಟ. ಆ ಸಂತೋಷದಲ್ಲಿ ಅವನು ಕಣ್ಣನ್ನು ಬಿಟ್ಟು ನೋಡುತ್ತಾನೆ, ಆ ತಿರುಕ ಅಲ್ಲಿಯೇ ಇದ್ದಾನೆ, ಹೊಟ್ಟೆಗೆ ಅನ್ನವೂ ಇಲ್ಲ. ಈ ತಿರುಕನ ಕನಸಿನಂತೆ ನಿಮ್ಮ ಜಿಲ್ಲಾ ಪರಿಷತ್ತು, ಮಂಡಲ ಪಂಚಾಯಿತಿಗಳ ಗತಿ ಆಯಿತು. ನೀವು ಯಾವಾಗ ಪ್ರತಿ ಮಂಡಲ ಪಂಚಾಯಿತಿಗೂ ವರ್ಷಕ್ಕೆ ೧೬ ಲಕ್ಷ ರೂಪಾಯಿಗಳು ಕೊಡುತ್ತೇವೆಂದು ಹೇಳಿದಿರೋ ಎಲ್ಲರ ಬಾಯಲ್ಲೂ ಜೊಲ್ಲು ಸುರಿಯುವುದಕ್ಕೆ ಶುರುವಾಗಿತ್ತು. ಆದರೆ ೧ ವರ್ಷ ಕಳೆದಮೇಲೆ ನಿಮ್ಮ ಹೂರಣ ಜನರಿಗೆ ಗೊತ್ತಾದಮೇಲೆ ಅವರ ಬಾಯಲ್ಲಿ ಸುರಿಯುತ್ತಿದ್ದ ಜೊಲ್ಲು ಒಣಗಿಹೋಯಿತು. ಈಗ ಜೊಲ್ಲು ಸುರಿಯುವುದು ನಿಂತಿದೆ. ಅದು ಜನತಾ ಪಕ್ಷದ ಮಂಡಲ ಪಂಚಾಯತ್ ಇರಬಹುದು, ಕಾಂಗ್ರೆಸ್ ಪಕ್ಷದ ಮಂಡಲ ಪಂಚಾಯತ್

ಇರಬಹುದು ಅಥವಾ ಬೇರೆ ಪಕ್ಷದ ಆಡಳಿತದಲ್ಲಿರತಕ್ಕ ಮಂಡಲ ಪಂಚಾಯತ್ ಇರಬಹುದು, ಪಕ್ಷ ಪಂಗಡದ ಬಗ್ಗೆ ನಾನು ಮಾತನಾಡುವುದಿಲ್ಲ. ನೀವು ಇವರಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರೆಂದರೆ ೨೦–೩೦ ಸಾವಿರ ರೂಪಾಯಿ, ಅಂದರೆನೀವುಕೊಡತಕ್ಕ೩೦ಸಾವಿರರೂಪಾಯಿಗಳಿಗೆ೧.೬ಲಕ್ಷರೂಪಾಯಿಎಂದು ತಿಳಿದುಕೊಳ್ಳೋಣವೇ ಇಡೀ ದೇಶಕ್ಕೆ ಒಬ್ಬರು ಪ್ರಧಾನಿಯವರನ್ನು ನಾವು ನೋಡಿದ್ದೆವು. ಆದರೆ ನಿಮ್ಮ ಕಾಲದಲ್ಲಿ ಮಂಡಲ ಪಂಚಾಯಿತಿಯನ್ನು ಮಾಡಿ ಅದಕ್ಕೆ ಪ್ರಧಾನ, ಉಪ ಪ್ರಧಾನರು ಎಂದು ಮಾಡಿದಿರಿ. ಇವರು ಕೇವಲ ಪ್ರಧಾನರು ಅಷ್ಟೇ ಅಲ್ಲ ಪ್ರಧಾನಿಗಳೇ ಆಗಿದ್ದಾರೆ. ಜನತಾ ಪಕ್ಷ, ಕಾಂಗ್ರೆಸ್ ಪಕ್ಷ, ಕಮ್ಯುನಿಸ್ಟ್ ಅಥವಾ ಇನ್ನೊ ಬೇರೆಬೇರೆ ಪಕ್ಷದ ಪ್ರಧಾನಿಗಳನ್ನು ಸೃಷ್ಟಿ ಮಾಡಿದ ಮಹಾನ್ ವೀರರು ನೀವು. ಸ್ವಾಮಿ, ಮಂಡಲ ಪಂಚಾಯಿತಿಯ ಪ್ರಧಾನ್‌ಗೆ ನೀವು ಕೊಡತಕ್ಕ ಸಂಬಳ ಎಷ್ಟು ? ೩೦೦ ರೂಪಾಯಿಗಳು. ಉಪ ಪ್ರಧಾನ್‌ಗೆ ೧೫೦ ರೂಪಾಯಿಗಳು. ಇವತ್ತು ಅವರ ಗತಿ ಏನಾಗಿದೆ ಎಂದರೆ ಅವರು ಧೈರ್ಯವಾಗಿ ರೋಡ್‌ನಲ್ಲಿ ಓಡಾಡುವಂತಿಲ್ಲ. ನೀವು ಮೊದಲು ಹೇಳಿದ್ದುದು ಕಾಮಧೇನುವಿನ ಕೆಚ್ಚಲನ್ನು ಮುಟ್ಟಿದರೆ ಕೊಡದ ತುಂಬ ಹಾಲು ಎಂದು. ಆದರೆ ಇವತ್ತು ಈ ಪ್ರಧಾನ್ ಮತ್ತು ಉಪ ಪ್ರಧಾನರು ತಲೆ ತಪ್ಪಿಸಿಕೊಂಡು ಓಡಿಹೋಗಿ ಕದ್ದು ಕುಳಿತುಕೊಳ್ಳಬೇಕಾಗಿದೆ. ಹಳ್ಳಿಯಲ್ಲಿ ಜನ ಏನನ್ನುತ್ತಾರೆಂದರೆ ೩೦೦ ರೂಪಾಯಿಗಳ ಸಂಬಳವನ್ನು ತೆಗೆದುಕೊಂಡು ಪ್ರಧಾನಿ ಓಡಿಹೋಗುತ್ತಿದ್ದಾನೆ. ಅವನನ್ನು ಹಿಡಿದು ಕೊಳ್ಳಿ, ಉಪ ಪ್ರಧಾನ ೧೫೦ ರೂಪಾಯಿ ಸಂಬಳ ತೆಗೆದುಕೊಳ್ಳುವವನು ಓಡಿಹೋಗುತ್ತಿದ್ದಾನೆ ಅವನನ್ನು ಹಿಡಿದುಕೊಳ್ಳಿ ಎಂದು ಹೇಳುತ್ತಾ ಅವರು ಆ ಊರಿನಲ್ಲಿ ಒಂದು ರೋಡಿಗೆ ಮಣ್ಣು ಹಾಕಿಸುವುದಕ್ಕಾಗುವುದಿಲ್ಲ, ಅಥವಾ ಬಡವರಿಗೆ ಒಂದು ಮನೆ ಕೊಡುವುದಕ್ಕಾಗುವುದಿಲ್ಲ. ಅಂದಮೇಲೆ ಪ್ರಧಾನ್‌ಗೆ ೩೦೦ ರೂ, ಉಪ ಪ್ರಧಾನ್‌ಗೆ ೧೫೦ ರೂಪಾಯಿ ಸಂಬಳ ಅಂತ ಕೊಟ್ಟು ಈ ರೀತಿ ಏತಕ್ಕೆ ಈ ಬೆಂಕಿ ಹಚ್ಚುತಕ್ಕ ಕೆಲಸವನ್ನು ಮಾಡಿದಿರಿ ?

ಸ್ವಾಮಿ, ಇನ್ನು ಒಂದೊಂದು ಮೀಟಿಂಗ್‌ಗೆ ೧೫ ರೂಪಾಯಿ ಸಿಟಿಂಗ್ ಛಾರ್ಜ್ ಎಂದು ಕೊಡುತ್ತೀರಿ, ಇದರ ಜೊತೆಗೆ ಆ ಪಂಚಾಯಿತಿಯ ಉಪಯೋಗಕ್ಕೆ ಸ್ಟೇಷನರಿ, ಕುರ್ಚಿ ಎಲ್ಲಾ ಕೊಡಬೇಕು. ಇದರ ಜೊತೆಗೆ ೭೦–೮೦ ರೂಪಾಯಿಗಳ ಸಂಬಳ ಕೊಟ್ಟು ಒಬ್ಬನನ್ನು ಇಟ್ಟಿದ್ದೀರಿ. ಅವನು ಏನು ಹೇಳುತ್ತಾನೆಂದರೆ, ಸ್ವಾಮಿ, ಮಿನಿಮಂ ವೇಜಸ್ ಆಕ್ಟ್ ಪ್ರಕಾರ ನನಗೆ ದಿವಸಕ್ಕೆ ೯ ರೂಪಾಯಿ ಚಿಲ್ಲರೆಯಂತ ಕೊಟ್ಟರೆ ಅದರಲ್ಲಿ ನಾವು ಹೇಗಾದರೂ ಜೀವನ ಮಾಡಿ ಕೊಳ್ಳುತ್ತೇವೆ ಈ ರೀತಿ ೭೦–೮೦ ರೂಪಾಯಿಗಳನ್ನು ಕೊಟ್ಟರೆ ಹೇಗೆ ಜೀವನ ನಡೆಸಬೇಕು ಎಂದು. ಒಂದೆರಡು ರೋಡಿಗೆ ಎರಡು ಬುಟ್ಟಿ ಮಣ್ಣನ್ನು ಹಾಕಿಸಿಬಿಟ್ಟರೆ, ಹೋಗಿ ನೋಡಿ ರೋಡಿಗೆ ನಾನು ಮಣ್ಣು ಹಾಕಿಸಿದ್ದೇನೆ ಇನ್ನು ನಿಮ್ಮ ಊರಿಗೆ ಕೂಡ ಮಣ್ಣು ಹಾಕಿಸುತ್ತೇವೆ, ಕಲ್ಲುಹಾಕಿಸುತ್ತೇವೆಂದು ಆ ಮಾತನ್ನು ಕೂಡ ಆಗಲೇ ಹೇಳುತ್ತಾರೆ. ನಿಜ ಹೇಳಬೇಕಾದರೆ ಜಿಲ್ಲಾ ಪರಿಷತ್‌ಗಳ ಮುಖಾಂತರ ಏನೇನು ಕೆಲಸ ಆಗಿದೆ ಎಂದರೆ ಎನ್‌ಆರ್‌ಇಪಿ ೫೦ ಪರ್ಸೆಂಟ್ ರಾಜ್ಯ ಸರ್ಕಾರದ್ದು ಆದರೆ ಕೇಂದ್ರ ಸರ್ಕಾರದ್ದು ೫೦ ಪರ್ಸೆಂಟ್ ಖರ್ಚುಮಾಡುವುದು ಇರುತ್ತದೆ. ಮತ್ತೆ ಆರ್‌ಎಲ್‌ಇಜಿಪಿ, ಮತ್ತು ಎನ್‌ಆರ್‌ಇಪಿ ಉಳಿದಿರತಕ್ಕಂಥ ಯೋಜನೆಗಳಿಗೆ ಏನಾದರೂ ಕೇಂದ್ರ ಸರ್ಕಾರದವರು ಹಣವನ್ನು ಕೊಡುವುದು ನಿಲ್ಲಿಸಿಬಿಟ್ಟಿದ್ದರೆ ನಿಮ್ಮ ಮಂಡಲ್ ಪಂಚಾಯತ್‌ಗಳು ಮತ್ತು ಜಿಲ್ಲಾ ಪರಿಷತ್‌ಗಳನ್ನು ಇಷ್ಟುಹೊತ್ತಿಗೆ ಹರಾಜು ಮಾಡಬೇಕಾಗುತ್ತಿತ್ತು. ನೀವು ಮುಖವನ್ನು ಹೊತ್ತುಕೊಂಡು ಹೋಗದಂತಾಗುತ್ತಿತ್ತು. ನಿಜ ಹೇಳಬೇಕಾದರೆ ನಿಮ್ಮ ಮಂಡಲ್ ಪಂಚಾಯತ್‌ಗಳಿಗೆ ಮತ್ತು ಜಿಲ್ಲಾ ಪರಿಷತ್‌ಗಳಿಗೆ ಮರ್ಯಾದೆ ಉಳಿಸಿದ್ದು ಎಂದರೆ ಪ್ರಧಾನಮಂತ್ರಿ ಶ್ರೀ ರಾಜೀವ್‌ಗಾಂಧಿಯವರು ಕೇಂದ್ರ ಸರ್ಕಾರದವರು. ನೀವು ಅದಕ್ಕೆ ಅಭಾರಿಯಾಗಿರಬೇಕು. ಆ ಮಟ್ಟಕ್ಕೆ ನಿಮ್ಮ ಹಣಕಾಸಿನ ಪರಿಸ್ಥಿತಿ ಹೋಗಿದೆ ಇವೊತ್ತಿನದಿವಸ ಆ ಮಟ್ಟಕ್ಕೆ ರಾಜ್ಯದಲ್ಲಿ ಹಣಕಾಸಿನ ಪರಿಸ್ಥಿತಿ ಬಂದು ಕುಳಿತಿದೆ ಎಂದು ಅನಿವಾರ್ಯವಾಗಿ ಈ ಮಾತನ್ನು ನಾವು ಹೇಳಬೇಕಾಗಿದೆ, ಸ್ವಾಮಿ ಖರ್ಚನ್ನು ನೀವು ಅನಿವಾರ್ಯವಾಗಿ ಅನ್ಯಾಯವಾಗಿ ಮಾಡತಕ್ಕಂಥದ್ದನ್ನು ನಿಲ್ಲಿಸಬೇಕೆಂದು ಹೋದಸಾರಿಯೇ ಹೇಳಿದ್ದೆನು ಈಗಲೂ ಕೂಡ ಹೇಳುತ್ತೇನೆ. ನಿಮ್ಮ ಬಗ್ಗೆ ಜನರ ಪ್ರೀತಿ ವಿಶ್ವಾಸ ಹೋಗುತ್ತಿರತಕ್ಕಂಥ ಸಂದರ್ಭ ಬಂದಿದೆಂದು ಕೆಲವರು ಹೇಳಿದರು; ನಿಮಗೆ ಇನ್ನೂ ಕೂಡ ಚಾನ್ಸ್ ಇದೆ. ಮನಸ್ಸುಮಾಡಿದರೆ ಚಾನ್ಸ್ ಇದೆ. ಜಿಲ್ಲಾಪರಿಷತ್ತಿಗೆ, ಮಂಡಲ್ ಪಂಚಾಯತ್‌ಗಳಿಗೆ ಒಹುಶ: ಕಾನೂನು ಪ್ರಕಾರ ಹೋಗಿ ಕೇಳಿದರೆ ಅವರು ನಾವು ಇಲ್ಲಿ ಏನು ಮಾಡುತೆವೆಯೋ ಇಲ್ಲವೆನ್ನುವ ಮಾತನ್ನು ಹೇಳುತ್ತಿದ್ದಾರೆ. ಈರೀತಿ ಹೇಳುವುದಕ್ಕೋಸ್ಕರವಾಗಿಯೇ ಒಬ್ಬರು ಮಂತ್ರಿಗಳು ಇರಬೇಕೆ ? ತಾವು ವಿಚಾರಮಾಡಿ ? ಈಗ ನಾವು ವಿರೋದಪಕ್ಷದಲ್ಲಿ ಕುಳಿತುಕೊಂಡಿರುವುದರಿಂದ ಹೇಳುತ್ತಿದ್ದೇವೆಂದಲ್ಲ. ನೀವು ಕೂಡ

ವಿರೋಧಪಕ್ಷದಲ್ಲಿ ಕುಳಿತುಕೊಂಡಿದ್ದಾಗ ಮಾತನಾಡಿದ್ದೇವೆಂದು ಹೇಳಿದಿರಿ, ಸ್ವಾಮಿ ನಿಜವಾಗಿಯೂ ಹೇಳಬೇಕಾದರೆ ನೀವು ಈಕಡೆ ಕುಳಿತುಕೊಳ್ಳಿ, ನಾವು ಆ ಕಡೆ ಕುಳಿತುಕೊಳ್ಳುತ್ತೇವೆ, ಪಕ್ಷಭೇದ ಭಾವನೆ ಮರೆತು ನಾವು ಮಾತನಾಡೋಣ. ಜಿಲ್ಲಾಪರಿಷತ್ ಅಧ್ಯಕ್ಷರು, ಉಪಾಧ್ಯಕ್ಷರುಗಳಿಗೆ ಮಿನಿಸ್ಟರ್ ಕೇಡರ್ ಕೊಟ್ಟಿದ್ದೀರಿ, ಅವರಿಗೆ ಮನೆಭತ್ಯ ಕಾರು ಎಲ್ಲಾ ಕೊಟ್ಟಿದ್ದೀರಿ. ಮಿನಿಸ್ಟರಿಗೆ ಕೊಟ್ಟಹಾಗೆ ಎಲ್ಲಾ ಕೊಟ್ಟಿದ್ದೀರಿ. ನೀವಾದರೂ ಕಾರು ಬಿಟ್ಟುಬಿಟ್ಟಿದ್ದೀರಾ, ಬಂಗಲೆ ಬಿಟ್ಟುಬಿಟ್ಟಿದ್ದೀರಾ ನೀವು ಎಷ್ಟು ಮಾಡಿದರೂ ಕೂಡ ಅವುಗಳನ್ನು ಬಿಡತಕ್ಕಂಥ ಜನರಲ್ಲ. ೨೦ + ೨೦ = ೪೦ ಜನ ಇಲ್ಲಿ ಅಲ್ಲಿ ಒಂದು ೩೫ ಜನ ಸ್ವಾಮಿ, ಇವೆಲ್ಲಾ ಒಟ್ಟು ಸಾರಿ ೭೫ ಜನ. ಇದನ್ನು ಒಂದು ಏರ್‌ಬಸ್ ಮಂತ್ರಿಮಂಡಲವೆಂದು ಕೆಲವರು ಹೇಳುತ್ತಾರೆ ಗಜಗಾತ್ರದ ಮಂತ್ರಿಮಂಡಲವೆಂದು ಕೆಲವರು ಹೇಳುತ್ತಾರೆ. ನಾನು ಹೇಳಬೇಕಾದರೆ ಯಾವ ಗಾತ್ರದ ಮಂತ್ರಿಮಂಡಲವೆಂದು ಹೇಳಬೇಕೋ ನನಗಂತೂ ಗೊತ್ತಿಲ್ಲ ಸುಮಾರ. ಎಂಥ ಗಾತ್ರದ ಮಂತ್ರಿಮಂಡಲವೆಂದು ಇನ್ನೂ ಪತ್ತೆ ಹಚ್ಚುತ್ತಿದ್ದೇನೆ. ಯಾವ ಹೆಸರನ್ನು ಇಡಬೇಕೆಂದು ಯೋಚಿಸುತ್ತಿದ್ದೇನೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಗಾತ್ರವೆಂದು ಹೇಳಿದಿರಿ. ನಾವು ನೀವು ಮಂತ್ರಿಗಳಾಗಿದ್ದಾಗ, ಮಾನ್ಯ ದೇವರಾಜ ಅರಸ್‌ರವರ ಕಾಲದಲ್ಲಿ ೨೨೬ ಜನ ಸದಸ್ಯರಿಗೆ ಆಗಲೂ ೩೦ ಜನರು ಇದ್ದರು ನಾವು ನೀವು ಮತ್ತು ಮಾನ್ಯ ಖರ್ಗೆಯವರೂ ಮಂತ್ರಿಗಳಾಗಿದ್ದರು.

ಶ್ರೀ ಎಸ್. ಬಂಗಾರಪ್ಪ.—ನಾವು ೩೫ ಜನ ಮಂತ್ರಿಗಳು ಇದ್ದೇವಾ?

ಅಧ್ಯಕ್ಷರು.—ಅಲ್ಲ ಗಾತ್ರವೆಂದು ಹೇಳಿದರಲ್ಲ ಅದಕ್ಕೆ ಹೇಳಿದೆ, ನಾವು ನೀವು ಕೂಡ ಆವತ್ತಿಗೆ ೩೫ ಜನರು ಇದ್ದೆವು. ಅದಕ್ಕೆ ಗಾತ್ರ ಬಿಟ್ಟುಬಿಡಿ ಹೋಗಲಿ

ಶ್ರೀ ಎ. ಲಕ್ಷ್ಮೀಸಾಗರ್.—೨೨೬ ಜನ ಸದಸ್ಯರು ಇದ್ದಾಗ ೩೫ ಜನರ ಮಂತ್ರಿ ಮಂಡಲದ ಗಾತ್ರ ಅದು ಏನು ಅಲ್ಲವೆಂದು ಅವರು ಹೇಳುವುದು.

ಅಧ್ಯಕ್ಷರು.—ನಾನು ಮಾನ್ಯ ಬಂಗಾರಪ್ಪನವರೇ ಏತಕ್ಕೆ ಹೇಳುತ್ತಿದ್ದೇನೆಂದರೆ ೨೨೬ ಜನರು ಇದ್ದಾಗ ನಾವು ನೀವು ಮಾನ ಖರ್ಗೆಯವರು, ಮಾನ್ಯ ಕೆ. ಎಚ್. ಪಾಟೀಲ್‌ರವರು, ಮಾನ್ಯ ಬಸವಲಿಂಗಪ್ಪನವರು ಮತ್ತು ಮಾನ್ಯ ಧರ್ಮಸಿಂಗ್‌ರವರು ಎಲ್ಲರೂ ಸೇರಿಕೊಂಡು ೩೫ ಜನರಿದ್ದೆವು ಅದಕ್ಕೆ ಗಾತ್ರವನ್ನು ಹೇಳುವುದು ಬೇಡ ಬಿಡಿ

ಶ್ರೀ ಎಸ್. ಬಂಗಾರಪ್ಪ.—ಸುಮಾರು ನನಗೆ ಗೊತ್ತಿರುವಂತೆ......

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಈವತ್ತು ಬಹಳ ಚೆನ್ನಾಗಿ ವಿಷಯ ಮಾತನಾಡಿದಿರಿ. ನಿಮಗೆ ನಾನು ಬಹಳವಾಗಿ ವಂದಿಸುತ್ತೇನೆ. ಈಗ ವಿಷಯಕ್ಕೆ ಬನ್ನಿರಿ.

ಶ್ರೀ ಎಸ್. ಬಂಗಾರಪ್ಪ.—ಇರಲಿ ಸುಮಾರು ನನಗೆ ಗೊತ್ತಿರುವಹಾಗೆ ಮಾನ್ಯ ದೇವರಾಜ ಅರಸ್‌ರವರ ಕಾಲದಲ್ಲಿ ೩೫ ಜನರನ್ನು ದೇವರಾಜಅರಸ್‌ರವರು ತಮ್ಮ ಮಂತ್ರಿಮಂಡಲದಲ್ಲಿ ಮಾಡಿದ್ದು ಯಾವಾಗ ಅಂದರೆ ಸರ್ಕಾರ ಉರುಳಿಬೀಳುತ್ತಿತ್ತು ಎನ್ನತಕ್ಕಂಥ ಸಂದರ್ಭ ಬಂದಾಗ

ಅಧ್ಯಕ್ಷರು.—ಆವಾಗ ತಾವು ಇದ್ದಿರಲ್ಲ.

ಶ್ರೀ ಎಸ್. ಬಂಗಾರಪ್ಪ.—ಆವಾಗ ನಾನು ಇರಲಿಲ್ಲ ಸ್ವಲ್ಪ ತಾಳಿ, ನಾನು ಕಾಂಗ್ರೆಸ್ ಅಧ್ಯಕ್ಷನಾಗಿದ್ದುದು......

ಅಧ್ಯಕ್ಷರು.—ಇಲ್ಲಿ ಕೇಳಿ ೧೯೭೭ರಲ್ಲಿ Right side also I know the fact

ಶ್ರೀ ಎಸ್. ಬಂಗಾರಪ್ಪ.—ದಯವಿಟ್ಟು ಆವಾಗ ಸುಮಾರು ಯಾರು ಯಾರು ಇದ್ದರೆನ್ನುವುದನ್ನು ಹೇಳಿದರೆ ಒಳ್ಳೆಯದೆಂದು ನನ್ನ ಭಾವನೆ ಒಂದು ವೇಳೆ ಜಾಸ್ತಿ ಇದ್ದರೂ ಕೂಡ ೩೫ ಜನರು ಇದ್ದರು, ಈಗ ೭೫ ಜನ ಇದ್ದಾರಲ್ಲ ಇದಕ್ಕೆ ಏನು ಹೇಳುತ್ತೀರಿ ? ಇವರಿಗೆ ಎಷ್ಟು ಹಣ ಖರ್ಚಾಗುತ್ತದೆಂಬುದನ್ನು ಲೆಕ್ಕ ಹಾಕಿದ್ದೀರಾ ? ಜನರ ಪರಿಸ್ಥಿತಿ ಸುಧಾರಣೆ ಆಗಬೇಕು, ಅವರ ಅಭಿವೃದ್ಧಿ ಆಗಬೇಕು, ಅವರಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ಕೊಡಬೇಕೆಂಬ ಆಸೆ ಇದ್ದರೆ ಖರ್ಚನ್ನು ಕಡಿಮೆ ಮಾಡಬೇಕಿತ್ತಲ್ಲವೆ ? ಸರ್ಕಾರೀ ನೌಕರರು ತಮ್ಮ ಸಂಬಳದಲ್ಲಿ ಶೇಕಡ ೧೦ ರಷ್ಟು ಹಣವನ್ನು ಉಳಿಸಬೇಕೆಂದು ಹೇಳಿದಿರಿ. ಅದನ್ನು ಅವರು ವಿರೋಧಿಸಿದಾಗ ವಿನಂತಿಸುತ್ತೇವೆಂದು ಹೇಳಿ ಈಗ ಅದು

ಹಾಗೇ ನಿಂತಿತು, ೩೫ ಮಂದಿ ಸಚಿವರ ಒಂದು ತಿಂಗಳ ಖರ್ಚು ೨೬ ಲಕ್ಷ ರೂಪಾಯಿ ಆಗುತ್ತದೆ. ಅದರ ಬಗ್ಗೆ ಎಷ್ಟೋ ಸಾರಿ ಈ ಮನೆಯಲ್ಲಿ ಮಾತನಾಡಿದ್ದೇವೆ. ಜಿಲ್ಲಾ ಪರಿಷತ್ತಿನ ೨೦+೨೦ ಜನ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಸರಾಸರಿ ಖರ್ಚು ೨೦ ಲಕ್ಷ ರೂಪಾಯಿ ಆಗುತ್ತದೆ. ಈಗಾಗಲೇ ೮೦ ಬೋರ್ಡುಗಳನ್ನು ಮಾಡಿದ್ದೀರಿ. ಈ ಸಾರಿ ಇನ್ನೊಂದು ಎಗ್ ಬೋರ್ಡ್ ಮಾಡುತ್ತೇವೆಂದು ಹೇಳಿದ್ದೀರಿ. ಎಗ್ ಅಂದರೆ ತತ್ತಿ, ಮೊಟ್ಟೆ ಎಂದು ನೀವು ತತ್ತಿ ಬೋರ್ಡ್ ಮಾಡಿದ ಮೇಲೆ ಇನ್ನೂ ಬೇರೆ ಬೇರೆ ಬೋರ್ಡುಗಳನ್ನು ಮಾಡದೆ ಬಿಡುವುದಿಲ್ಲ ಫಿಷ್‌ಗೆ ಒಂದು ಬೋರ್ಡ್, ಚಟ್ನಿಗೆ ಒಂದು ಬೋರ್ಡ್, ಪಲ್ಯಕ್ಕೆ ಒಂದು ಬೋರ್ಡ್ ಮಾಡುತ್ತೀರಿ ನಿಜವಾಗಿ ಹೇಳಬೇಕೆಂದರೆ ಈ ವಿಚಾರಕ್ಕೆ ತಲೆ ತಗ್ಗಿಸಬೇಕಾಗುತ್ತದೆ. ಹೀಗೆ ಬದನೇಕಾಯಿಗೆ ಒಂದು ಬೋರ್ಡ್ ಮಾಡಿ ಅದಕ್ಕೆ ಒಬ್ಬರನ್ನು ತೆಗೆದುಕೊಂಡು ಹೋಗಿ ಕೂರಿಸುವುದು. ಅವರಿಗೆ ಅಧಿಕಾರ, ಕುರ್ಚಿ ಕೊಟ್ಟ ಮೇಲೆ ಅವರು ಸಂಪೂರ್ಣ ಟರ್ಮ್ ಮುಗಿಯುವವರೆಗೆ ಇರಬೇಕು. ಈ ರೀತಿ ಬೋರ್ಡುಗಳನ್ನು ಮಾಡಿದರೆ ಹಣ ಖರ್ಚಾಗುವುದಿಲ್ಲವೆ ? ಕುರ್ಚಿಗೆ ಒಬ್ಬ ಛೇರ್ಮನ್ ಅನ್ನು ಮಾಡಬೇಕಲ್ಲವೆ ? ಅವರೇನು ಪುಕಸಟ್ಟೆ ಕೂರುತ್ತಾರೆಯೇ? ಅವರಿಗೆ ಒಂದು ಮನೆ, ಕಾರು, ಸಿಬ್ಬಂದಿ ಇತ್ಯಾದಿಯಾಗಿ ಎಲ್ಲವೂ ಬೇಕು. ಇವತ್ತಿನ ದಿವಸ ೮೦ ಬೋರ್ಡುಗಳು, ನಿಗಮಗಳು. ಅಕಾಡೆಮಿಗಳು, ಸಮಿತಿಗಳು ಇವುಗಳ ಛೇರ್ಮನ್ನರಿಗೆ ೪೦ ಲಕ್ಷ ರೂಪಾಯಿ ಖರ್ಚಾಗುತ್ತದೆ. ಒಟ್ಟು ಈ ಬಾಬಿಗೆ ಒಂದು ತಿಂಗಳಿಗೆ ೮೬ ಲಕ್ಷ ರೂಪಾಯಿ ಹಣ ಖರ್ಚಾಗುತ್ತದೆ. ಇದನ್ನು ೧೨ ರಿಂದ ಗುಣಿಸಿದರೆ ೧೦ ಕೋಟಿ ೩೨ ಲಕ್ಷ ರೂಪಾಯಿ ಆಗುತ್ತದೆ ಹೀಗೆ ವರ್ಷಕ್ಕೆ ೧೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಮಂತ್ರಿಮಂಡಲ ಇರಬೇಕು, ಅದಕ್ಕೆ ಎಷ್ಟು ಜನರ ಅವಶ್ಯಕತೆ ಇದೆಯೋ ಅಷ್ಟು ಜನರನ್ನು ಇಟ್ಟುಕೊಳ್ಳಿ. ಜಿಲ್ಲಾ ಪರಿಷತ್ತು ಬಂದಮೇಲೆ ಮುಕ್ಕಾಲು ಭಾಗ ಮಂತ್ರಿಮಂಡಲವನ್ನು ತೆಗೆಯಬೇಕಾಗಿತ್ತು. ಅದನ್ನು ಮಾಡಿಲ್ಲ ಅದನ್ನು ಕತ್ತರಿಸಬೇಕೆಂದರೆ ಭಾರೀ ಕಷ್ಟ. ಯಾವ ಕಡೆಯಿಂದ ಕತ್ತರಿಸಬೇಕೆಂಬುದು ಸಮಸ್ಯೆ. ಮುಖ್ಯ ಮಂತ್ರಿಗಳನ್ನು ಕತ್ತರಿ ಪ್ರಯೋಗ ಮಾಡುವುದಕ್ಕೆ ಒಪ್ಪಿಸುವ ಜವಾಬ್ದಾರಿ ನಿಮ್ಮದು. ನಾವು ಬೇಕಾದರೆ ಕತ್ತರಿ ಕೊಡುತ್ತೇವೆ, ಪ್ರಯೋಗಿಸುವ ಜವಾಬ್ದಾರಿ ನಿಮ್ಮದು. ಇಲ್ಲಿ ನಿಮ್ಮ ಸಾಧನೆಯನ್ನು ಭಿತ್ತರಿಸುವುದಕ್ಕೆ ಹತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಪ್ರಗತಿಪರ ಕಾರ್ಯಕ್ರಮಗಳ ಬಗ್ಗೆ ಮಾತನಾಡುವವರು ಜನತೆಗೆ ಕೊಟ್ಟ ವಚನ ಏನಾಯಿತು ? ನಿಮ್ಮ ನಡವಳಿಕೆ ಏನು ಎಂದು ಕೇಳುತ್ತೇನೆ ೧೧ ಕೋಟಿ ರೂಪಾಯಿಗಳನ್ನು ವರ್ಷಕ್ಕೆ ಈ ರೀತಿ ನೀವು ಖರ್ಚು ಮಾಡಿದರೆ ಯಾವ ಕಾರ್ಯಸಾಧನೆಯನ್ನೂ ಮಾಡುವುದಕ್ಕಾಗುವುದಿಲ್ಲ. ಜಿಲ್ಲಾ ಪರಿಷತ್ತುಗಳನ್ನು ತೋರಿಸುವುದಕ್ಕೋಸ್ಕರ ನಿಮ್ಮ ಇಡೀ ಮಂತ್ರಿಮಂಡಲ ಕೈಮುರಿದ ಹಾಗೆ ಇದೆ. ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳನ್ನು ನೋಡಿ ಎಂದು ತೋರಿಸುವುದಕ್ಕೆ ಕೈಮುರಿದ ಹಾಗೆ ಇದ್ದರೆ ನಿಮ್ಮ ಮಂತ್ರಿಮಂಡಲ ಏತಕ್ಕೆ ಇರಬೇಕೆಂದು ಕರ್ನಾಟಕ ರಾಜ್ಯದ ಜನತೆಯ ಪರವಾಗಿ ಕೇಳಬಯಸುತ್ತೇನೆ,

ಏತಕ್ಕಾಗಿ ಈ ಕೆಲಸ ಮಾಡಬೇಕು? ಇಡೀ ಬಜೆಟ್ ಭಾಷಣದಲ್ಲಿ ಮನೆಗಳ ವಿಚಾರದಲ್ಲಿ ಯಾವ ಮಾತು ಆಡಿದ್ದಾರೆ? ಹಿಂದಿನ ಸರ್ಕಾರಗಳಲ್ಲಿ ನಾವು ಕಂಡಿದ್ದೇವೆ. ವರ್ಷಕ್ಕೆ ಇಷ್ಟು ಸೈಟುಗಳನ್ನು ಕೊಡುತ್ತೇವೆ ಅಥವಾ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಈಗ ನೀವು ಎಷ್ಟು ಕೊಟ್ಟಿದ್ದೀರಿ? ಬಡವರು ಬೇಕಾದಷ್ಟು ಜನ ಇದ್ದಾರೆ. ಕಡುಬಡವರು, ಸೈಟು ಇಲ್ಲದೇ ಇರುವವರು ಇದ್ದಾರೆ. ಅವರನ್ನು ಐಡೆಂಟಿಫೈ ಮಾಡುವುದಕ್ಕೆ ನಿಮ್ಮ ಕೈಯಲ್ಲಾಗಲಿಲ್ಲ ಅದ್ಯಾವುದಕ್ಕೂ ಗಮನ ಕೊಟ್ಟಿಲ್ಲ. ಹಳೇ ಅಂಕಿಅಂಶಗಳನ್ನು ಇಟ್ಟುಕೊಂಡು ಇಷ್ಟು ಜನರಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಹಿಂದೆಯೆಲ್ಲಾ ಸೈಟುಗಳಿಗೆ ಇಷ್ಟು ಹಣ ಎಂದು ಇಡುತ್ತಿದ್ದರು. ಈಗ ಸೈಟಿಗೋಸ್ಕರ ಐದು ಪೈಸೆ ಆದರೂ ಇಟ್ಟಿದ್ದೀರಾ? ಎಲ್ಲಿದೆ ನಿಮ್ಮ ಕಾರ್ಯಕ್ರಮ ? ಎಲ್ಲಾ ಸಮಾಧಿ ಆಗಿಹೋಯಿತು ಈ ಕಾರ್ಯಕ್ರಮ. ಎರಡು ಸಾವಿರ ರೂಪಾಯಿಗಳಲ್ಲಿ ಲೋ ಕಾಸ್ಟ್ ಹೌಸಿಂಗ್ ಸ್ಕೀಂ ಪ್ರಕಾರ ಕಟ್ಟತಕ್ಕದ್ದರಲ್ಲಿ ಒಂದೊಂದು ಮಂಡಲಕ್ಕೆ ನಾಲ್ಕು ಮನೆ, ಆರು ಮನೆ ಕೊಟ್ಟಿದ್ದೀರಿ. ಮಂಡಲ ಪ್ರಧಾನರನ್ನು ಬೇಕಾದರೆ ಕೇಳಿ. ಮಲೆನಾಡು ಪ್ರದೇಶದಲ್ಲಿ ೩೦-೩೫ ಹಳ್ಳಿಗಳು ಒಂದೊಂದು ಮಂಡಲಗಳ ವ್ಯಾಪ್ತಿಯಲ್ಲಿವೆ. ತಮ್ಮ ಕಡೆ ೮—೧೦ ಹಳ್ಳಿಗಳು ಬರುತ್ತವೆ. ಒಂದೊಂದು ಹಳ್ಳಿಯಲ್ಲಿ ಸೈಟು ಇಲ್ಲದವರು ನೂರಾರು ಜನ ಸಿಗುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಒಂದೊಂದು ಮಂಡಲಕ್ಕೆ ೪ ಮನೆ, ೬ ಮನೆ ಲೋ ಕಾಸ್ಟ್ ಹೌಸಿಂಗ್ ಸ್ಕೀಂ ಪ್ರಕಾರ ಕೊಟ್ಟರೆ ಮನೆಗಳನ್ನು ಹೇಗೆ ಹಂಚುವುದು? ನನ್ನ ಪ್ರಕಾರ ಹಂಚಬಹುದು. ೩೨ ಹಳ್ಳಿಗೆ ನಾಲ್ಕು ಮನೆ ಹಂಚಬೇಕು ಎಂಬುದು

ಯಕ್ಷಪ್ರಶ್ನೆಯಾಗಿ ಕಾಣಬಹುದು. ಇದನ್ನು ಈ ರೀತಿ ಹಂಚಬಹುದು. ಒಂದು ಮನೆಯ ಮುಂಬಾಗಿಲನ್ನು ಒಂದು ಇಡೀ ಗ್ರಾಮಕ್ಕೆ ಕೊಡಬೇಕು, ಹಿಂಬಾಗಿಲನ್ನು ಒಂದು ಗ್ರಾಮಕ್ಕೆ ಕೊಡಬೇಕು, ಎಡಗಡೆ ಕಿಟಕಿಯನ್ನು ಒಂದು ಗ್ರಾಮಕ್ಕೆ, ಬಲಗಡೆ ಕಿಟಕಿಯನ್ನು ಒಂದು ಗ್ರಾಮಕ್ಕೆ, ತಲೆ ಮೇಲಿರುವ ಹೆಂಚುಗಳನ್ನು ಒಂದು ಗ್ರಾಮಕ್ಕೆ ಕೊಡಬೇಕು. ಇದು ಹಂಚುವ ವಿಧಾನ. ಮಂಡಲ ಪಂಚಾಯಿತಿಗಳಲ್ಲಿ ಜಗಳವೋ ಜಗಳ. ಜನತಾ ಮತ್ತು ಕಾಂಗ್ರೆಸ್ ಪ್ರಧಾನರ ಪರಿಸ್ಥಿತಿ ಯಾವರೀತಿಯಾಗಿದೆ ಅಂದರೆ ಜನರ ಮುಂದೆ ಅವರು ಅಪರಾಧಿಗಳಾಗುವಂತೆ ಮಾಡಿದ್ದೀರಿ. ಏಕೆಂದರೆ ಮನೆಗಳನ್ನು ಅವರು ಕೊಡುವುದಕ್ಕಾಗುವುದಿಲ್ಲ. ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ ಹೆಲಿಕ್ಯಾಪ್ಟರ್ ಸರ್ಕಾರ ನೋಡಿ ಎಂದು ಹೇಳುತ್ತಿದ್ದರು. ಇವರು ಕಾಲ್ನಡಿಗೆಯಲ್ಲಿ ಹೋಗುತ್ತೇವೆ ಎಂದು ಹೇಳಿದರು. ಬರಗಾಲದಲ್ಲಿ ಮುಖ್ಯಮಂತ್ರಿಗಳು ಮತ್ತು ಕಂದಾಯ ಮಂತ್ರಿಗಳು ಎಷ್ಟು ಜನ ಪ್ರವಾಸ ಮಾಡಿದ್ದೀರಿ? ಬರಗಾಲದ ಹಣ ಯಾವರೀತಿ ದುರ್ವ್ಯವಹಾರ ಆಗಿದೆ ಕೆಲವು ಅಧಿಕಾರಿಗಳು ಮತ್ತು ನಿಮ್ಮ ಪಕ್ಷದ ಭೂಮಾಲೀಕರು ಯಾರು ಎಂಬುದನ್ನು ಹೆಸರು ಕೊಟ್ಟೆವು. ವಿಚಾರಣೆ ಎಲ್ಲಿ ನಡೆಯಿತು? ಜನಸಾಮಾನ್ಯರಿಗೆ ಮಂಕುಬೂದಿ ಎರೆಚುವ ರೀತಿಯಲ್ಲಿ ಉತ್ತರ ಕೊಟ್ಟಿದ್ದೀರಿ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಹೆಲಿಕ್ಯಾಪ್ಟರ್ ಬಿಟ್ಟು ಓಡಾಡುತ್ತಿಲ್ಲ. ಯಾವ ಮಾನ್ಯ ಮುಖ್ಯಮಂತ್ರಿಗಳು ಜನತೆ ಎದುರುಗಡೆ ಹೆಲಿಕ್ಯಾಪ್ಟರ್‌ನಲ್ಲಿ ಓಡಾಡುತ್ತಾರೆ ಕಾಂಗ್ರೆಸ್ ಸರ್ಕಾರದವರು ಎಂದು ಹೇಳಿದರೋ ಆ ಹೆಲಿಕ್ಯಾಪ್ಟರನ್ನು ಜನತಾ ಸರ್ಕಾರದ ಮುಖ್ಯಮಂತ್ರಿಗಳು ಬಿಟ್ಟಿಲ್ಲ. ಮುಖ್ಯಮಂತ್ರಿಗಳಷ್ಟೇ ಅಲ್ಲ ......

ಅಧ್ಯಕ್ಷರು.—ಡಯಾಗನೈಸ್ ಆಯಿತು. ಪ್ರಿಸ್ಕ್ರಿಪ್‌ಷನ್ ಹೇಳಿ ನಿಮ್ಮ ಸಲಹೆ ಹೇಳಿ.

ಒಬ್ಬ ಮಾನ್ಯ ಸದಸ್ಯರು.—ಹುಳಿಯಾರಿಗೂ ಒಂದು ಸಾರಿ ಹೆಲಿಕ್ಯಾಪ್ಟರ್ ಬಂದಿತ್ತು.

ಶ್ರೀ ಎಸ್. ಬಂಗಾರಪ್ಪ.—ತೆರಿಗೆ ವಿಚಾರದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಇತರ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಬಜೆಟ್ ಪ್ರೆಸೆಂಟ್ ಮಾಡಿದ್ದಾರೆ ಇದರ ಒಳಗುಟ್ಟು ಏನು ಎಂದು ಪತ್ರಿಕೆಯಲ್ಲಿ ಬಂದಿದೆ. ''ಕಾದಿದೆ ಇನ್ನಷ್ಟು ತೆರಿಗೆ'' ಎಂದು ಪತ್ರಿಕೆಯವರು ಹೇಳಿದ್ದಾರೆ. ಒಂದು ಕಡೆ ಹಣಕಾಸಿನ ಸಚಿವರು ೨೨ ಕೋಟಿ ಚಿಲ್ಲರೆ ತೆರಿಗೆ ಇರತಕ್ಕ ಆಯವ್ಯಯ ಪತ್ರವನ್ನು ಇಲ್ಲಿ ಮಂಡನೆ ಮಾಡಿದರೆ ಅದೇ ಇಲಾಖೆಯ ಕಾರ್ಯದರ್ಶಿಯವರು, ಅವರ ಹೆಸರು ಬೇಕಾಗಿಲ್ಲ. ಅವರು ಹೇಳಿಕೆ ಕೊಡುತ್ತಾರೆ, ಮುಂದೆ ತೆರಿಗೆಗಳನ್ನು ಹಾಕದೇ ಇದ್ದರೆ ಸಂಪನ್ಮೂಲಗಳನ್ನು ರೂಢಿಸತಕ್ಕದ್ದು ಬಹಳ ಕಷ್ಟ ಎಂದು ಇದರ ಅರ್ಥ ತೆರಿಗೆ ಹಾಕುತ್ತಾರೆ ಎಂಬುದು. ಏತಕ್ಕೆ ಜನರನ್ನು ನಂಬಿಸಿ ವಂಚನೆ ಮಾಡುತ್ತೀರಿ? ನಿಮಗೆ ಧೈರ್ಯ ಇದ್ದರೆ ಜನರ ಹಿತದೃಷ್ಟಿಯಿಂದ ಇಷ್ಟು ಕೋಟಿ ರೂಪಾಯಿ ತೆರಿಗೆ ಹಾಕುತ್ತೇವೆ, ಇಂಥ ಬಾಬಿನಲ್ಲಿ ಹಾಕುತ್ತೇವೆ, ಶ್ರೀಮಂತ ವರ್ಗದವರಿಗೆ, ಲಗ್ಜುರಿ ಗೂಡ್ಸ್ ಮೇಲೆ ಹಾಕುತ್ತೇವೆ ಎಂದು ಹೇಳಿ ಆ ರೀತಿ ಹೇಳತಕ್ಕ ಎದೆಗಾರಿಕೆ ಬೇಕು ಕೇಂದ್ರದವರು ಅವರ ಬಡ್ಜೆಟ್‌ನಲ್ಲಿ ಏನು ಅನೇಕ ಸೌಕರ್ಯಗಳನ್ನು, ಸೌಲಭ್ಯಗಳನ್ನು ಈ ದೇಶದ ರೈತರಿಗೆ ಅಂದರೆ ಸುಮಾರು ೯ ಸಾವಿರ ಕೋಟಿ ರೂಪಾಯಿಗಳ ಸಹಾಯವನ್ನು ಕೊಟ್ಟಿದ್ದಾರೋ, ಅದೇ ರೀತಿಯಲ್ಲಿ ಮಾಡುತ್ತೇವೆ ಎಂದು ಬರೀ ೨೮ ಕೋಟಿ ರೂಪಾಯಿ ಮಾತ್ರ ಕರ ಹಾಕಿದ್ದೀರಿ. ಕರಭಾರ ರಹಿತವಾಗಿರತಕ್ಕ ಆಯವ್ಯಯ ಪತ್ರವನ್ನು ಮಂಡನೆ ಮಾಡಿದ್ದೇವೆಂದು ಹೇಳಿ ತೆರಿಗೆ ಹಾಕತಕ್ಕ ವಿಚಾರದಲ್ಲಿ ಇವತ್ತು ಯಾವ ಮುಚ್ಚುಮರೆ ಇಲ್ಲದೆ ಈ ರೀತಿ ಹಾಕಿದ್ದೀರಿ. ರೈತರ ಬಗ್ಗೆ ಹೇಳುವ ನೀವು ಈ ಆಯವ್ಯಯದಲ್ಲಿ ರೈತರ ಬಗ್ಗೆ ಯಾವುದೇ ಒಂದು ಮಾತನ್ನೂ ಕೂಡಾ ಆಡಿಲ್ಲ. ಇಡೀ ರೈತ ಸಮುದಾಯದ ಬಗ್ಗೆ ಒಂದು ಮಾತು ಇಲ್ಲದ್ದರ ಬಗ್ಗೆ ನಾನು ಸರ್ಕಾರವನ್ನು ಖಂಡಿಸಬೇಕಾಗುತ್ತದೆ. ಇವರ ಬಗ್ಗೆ ನೀರಾವರಿ ಯೋಜನೆಗಳು ಇಲ್ಲ, ಸಣ್ಣ, ಮಧ್ಯಮ ನೀರಾವರಿ ಯೋಜನೆಗಳು ಇಲ್ಲ. ಗೊಬ್ಬರ, ಬೀಜಗಳ ಬಗ್ಗೆ ಮಾತು ಇಲ್ಲ ಅದೂ ಅಲ್ಲದೆ ಬೆಟರ್‌ಮೆಂಟ್ ಲೆವಿ, ನೀರಿನ ತೆರಿಗೆ ಬಗ್ಗೆ ಈಗಾಗಲೇ ನೋಟೀಸ್‌ಗಳು ಹೋಗಿವೆ. ಇವತ್ತು ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲಿ ನೋಟೀಸ್ ಕೊಟ್ಟಿದ್ದಾರೆ. ಕೆಲವು ಕಡೆ ೩ ಸಾವಿರ ೨ ಸಾವಿರ ರೂಪಾಯಿ ಕೊಡಬೇಕೆಂದು ನೋಟೀಸ್ ಕೊಟ್ಟಿದ್ದಾರೆ. ನಾವು ಇಲ್ಲಿ ಏನು ಹೇಳಿದರೂ ಮಾನ್ಯ ದೇವೇಗೌಡರು, ಎಲ್ಲೆಲ್ಲಿ ಅನ್ಯಾಯವಾಗಿದೆ ಎಂದು ತಿಳಿಸಿದರೆ ನಾನು ಅದರ ಬಗ್ಗೆ ವಿಚಾರಣೆ ಮಾಡುತ್ತೇನೆಂದು ಹೇಳಿದರು. ಈ ಉತ್ತರ ನಮಗೇನೂ ಹೊಸದಲ್ಲ. ಇವತ್ತಿನ ದಿವಸ ಯಾವುದೇ ಮಂತ್ರಿಗಳ ಹತ್ತಿರ ಒಂದು ಅರ್ಜಿಯನ್ನು ಕೊಟ್ಟರೆ ಅದು ಅಪೀಲ್ ಆಗುವುದಿಲ್ಲ. ಕಾನೂನು ಪ್ರಕಾರ ಒಬ್ಬ ತಹಶೀಲ್ದಾರ್‌ಗೋ,

ಒಬ್ಬ ಅಸಿಸ್ಟೆಂಟ್ ಕಮಿಷನರ್‌ಗೂ, ತೀರ್ಮಾನ ಮಾಡುವುದಕ್ಕೆ ಒಂದು ಅಧಿಕಾರವನ್ನು ಕೊಟ್ಟರೆ ಆ ಮೂಲಕ ಅವರಿಗೆ ಒಂದು ನ್ಯಾಯ ಸಿಗಬಹುದು. ನೀವು ನೀರಿನ ಕರಭಾರವನ್ನು ಹಾಕಿದ್ದೀರಿ. You have charged indiscriminately to the tune of crores of rupees. ಇವತ್ತು ಇದೇ ಬಜೆಟ್ ವಿಚಾರದಲ್ಲಿ ಹೇಳುವುದಾದರೆ, ರೈತರ ಬಗ್ಗೆ ನೀವು ಏನು ಹೇಳಿದ್ದೀರಿ? ರೈತ ಸಮುದಾಯಕ್ಕೆ ನೀವು ಹೇಗೆ ವಂಚನೆ ಮಾಡಿದ್ದೀರಿ? ೧೯೭೪ ನೇ ಸಾಲಿನಲ್ಲಿ ಭೂಸುಧಾರಣೆ ಕಾನೂನು ಪ್ರಕಾರ ಜಮೀನುದಾರರು ಯಾರು ಯಾರು ಜಮೀನು ಕಳೆದುಕೊಂಡಿದ್ದಾರೋ ಅವರಿಗೆ ಎಲ್. ಎಫ್. ಎ ಕೆಳಗೆ ಪರಿಹಾರದ ಹಣವನ್ನು ಕೊಡುತ್ತೇವೆಂದು ಹೇಳಿದಿರಿ. ಯಾರು ಯಾರು ಇದ್ದಾರೆ ಅವರಿಗೆ ೨ ಕಂತಿನಲ್ಲಿ ಕೊಡುವುದು, ಮತ್ತು ದೊಡ್ಡ ಕುಳಗಳು ಯಾರು ಇದ್ದಾರೆ ಅವರಿಗೆ ಸರ್ಟಿಫಿಕೇಟ್ ಕೊಡುವುದಾಗಿ ಹೇಳಿದ್ದೀರಿ. ಅದೇ ಸಂದರ್ಭದಲ್ಲಿ ನಾನೇ ಹೇಳಿದ್ದೆ. ಗೇಣಿದಾರರು ಯಾರಿದ್ದಾರೆ ಅವರ ಬಗ್ಗೆ ತಾವು ಹೇಳಿದ್ದು ರೇಡಿಯೋಗಳಲ್ಲಿ ಬಂತು, ಪತ್ರಿಕೆಗಳಲ್ಲಿ ಬಂತು. ನಮ್ಮ ಪ್ರಶ್ನೆಗೆ ತಾವು ಉತ್ತರವನ್ನು ಕೊಟ್ಟಿರಿ. ಬಡ ಗೇಣಿದಾರರು ದೊಡ್ಡ ಸಾಹುಕಾರರು ಇರಬಹುದು ಅಥವಾ ಬಡವರು ಇರಬಹುದು. ದೊಡ್ಡವರನ್ನು ಬಿಡಬೇಕೆಂದು ನಾನು ಹೇಳುವುದಿಲ್ಲ. ಸುಮಾರು ೮ ಲಕ್ಷ ಚಿಲ್ಲರೆಯಲ್ಲಿ ೫ ಲಕ್ಷ ಗೇಣಿದಾರರು ಖಾತೇದಾರರಾಗಿದ್ದಾರೆ. ಇವರಲ್ಲಿ ಪರಿಷ್ಕರಣಗೊಂಡು ಉಳಿದಿರುವ ನಾಲ್ಕೂವರೆ ಲಕ್ಷ ಅಥವಾ ನಾಲ್ಕೂಮುಕ್ಕಾಲು ಲಕ್ಷ ಯಾರಿದ್ದಾರೆ ಅವರಿಗೆ ಸಹಾಯ ಮಾಡದೇ ಇದ್ದರೆ ಯಾರೂ ಮೇಲಕ್ಕೆ ಬರುವುದಕ್ಕೆ ಸಾಧ್ಯವಿಲ್ಲ. ಈ ದೇಶದಲ್ಲಿ ಈ ಬಡವರು ಯಾರಿದ್ದಾರೆ ಅವರಿಂದ ಕಂತು ಬಂದಿಲ್ಲ, ನಮ್ಮಲ್ಲಿ ಬರಗಾಲ ಎದುರಿಸಬೇಕಾಗಿರುವುದರಿಂದ ಹಣ ಕೊಡಿ ಎಂದು ಕೇಂದ್ರದಿಂದ ಹಣವನ್ನು ಪಡೆದುಕೊಂಡಿದ್ದೀರಿ. ಅಧ್ಯಕ್ಷರೇ, ಇವತ್ತು ಬೆಳೆ ಬಂದಿದೆ ಎಂದು ತಿಳಿದ ಮೇಲೆ ಕಂತು ಹಣವನ್ನು ಕಟ್ಟಬೇಕೆಂದು ಹೇಳುತ್ತಿದ್ದಾರೆ. ಹಿಂದೆ ಪಿ. ಎಲ್. ಡಿ. ಬ್ಯಾಂಕಿಗೆ ಕಟ್ಟಬೇಕೆಂದು ಇತ್ತು.

೬-೦೦ ಪಿ.ಎಂ.

ಕೆಲವು ಕೇಸ್‌ಗಳಲ್ಲಿ ಡಿಕ್ರಿಯಾಗಿದ್ದು, ನೇರವಾಗಿ ಇಲಾಖೆಯವರೇ ನೋಟೀಸ್ ಕೊಟ್ಟಿದ್ದಾರೆ. ಇಂತಹ ಸುಮಾರು ನೋಟೀಸ್‌ಗಳು ನನ್ನ ಹತ್ತಿರ ಇವೆ. ಇದರ ಬಗ್ಗೆ ಹಿಂದೆ ನಾವು ಪ್ರಶ್ನೆ ಕೇಳಿದಾಗ ಏನು ಉತ್ತರಕೊಟ್ಟಿದ್ದೀರೆಂದರೆ ೫ ಎಕರೆ ಮಳೆ ತರಿ ಜಮೀನು ಹಾಗೂ ೧೦ ಎಕರೆ ಖುಷ್ಕಿ ಯಾರಿಗೆ ಭೂ ನ್ಯಾಯ ಮಂಡಲಿಯಿಂದ ಮಂಜೂರಾಗಿದೆಯೋ ಅಂತಹ ಗೇಣೀದಾರರಿಂದ ಅವನು ಕಟ್ಟಬೇಕಾಗಿರುವಂತಹ ಕಂತನ್ನು ವಸೂಲು ಮಾಡುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಅದರ ಬಗ್ಗೆ ನನ್ನ ಹತ್ತಿರ ದಾಖಲೆಗಳು ಇವೆ. ಆದರೆ ಏನು ಮಾಡಿದ್ದೀರಿ ಸ್ವಾಮಿ ? ನೀವು ಏನು ಉತ್ತರವನ್ನು ಇಲ್ಲಿ ಕೊಟ್ಟಿದ್ದೀರೋ ಅದಕ್ಕೆ ತದ್ವಿರುದ್ಧವಾಗಿ ಕರ್ನಾಟಕ ರಾಜ್ಯದಲ್ಲಿ ಸುಮಾರು ನಾಲ್ಕು ಮುಕ್ಕಾಲು ಲಕ್ಷ ಜನ ಈ ರೀತಿಯಲ್ಲಿ ಭೂಮಿಯನ್ನು ಪಡೆದಿದ್ದಾರೆ. ಅಂತಹವರಿಗೆ ಈ ರೀತಿಯ ನೋಟೀಸ್‌ನ್ನು ಕೊಟ್ಟಿದ್ದಾರೆ. ನಿಮ್ಮನ್ನು ನಂಬಿಕೊಂಡು ಅತ ಕೂತ. ಇವತ್ತು ೩೦ನೇ ಮಾರ್ಚಿ ೧೯೮೫ರ ಒಳಗಾಗಿ ಹಣವನ್ನು ಕಟ್ಟದಿದ್ದರೆ, ನಿಮ್ಮ ಜಮೀನು ಹರಾಜಿಗೆ ಬರುತ್ತದೆ ಚರಾಸ್ತಿ, ಎತ್ತು, ಎಮ್ಮೆ ಕೆಂಪಿಣ, ಗಾಡಿ, ಮನೆ ಮಠ ಜಮೀನು ಇವೆಲ್ಲ ಹರಾಜಿಗೆ ಹಾಕುವುದಕ್ಕೆ ತಯಾರಿ ನಡೆಯುತ್ತಿದೆ. ಸರ್ಕಾರದ ಉದ್ದೇಶ ಹೇಗಿರಬೇಕೆಂದರೆ ಅನ್ನ ಕೊಡುವ ರೈತನ ಮನೆಯಲ್ಲಿರತಕ್ಕ ಈ ರೀತಿಯ ವಸ್ತುಗಳನ್ನು ಎಂದೂ ಹರಾಜು ಹಾಕಬಾರದು. ನಿಮ್ಮ ಅಧಿಕಾರಿಗಳು ರೈತರು ಬೆಳೆದಂತಹ ಬೆಳೆಯನ್ನು ಮುಟ್ಟುಗೋಲು ಹಾಕಿದ್ದಾರೆ. ಅವರು ಸೀಜ್ ಮಾಡಿದ್ದೇವೆ, ಕಂತು ಕಟ್ಟಿಲ್ಲ ಅಂತ ಹೇಳಿದ್ದಾರೆ. ಹಣ ಬಾಕಿ ಇದ್ದರೂ ಕೂಡ ಜೀವನಕ್ಕೆ ಆವಶ್ಯಕವಾಗಿ ಇರಬೇಕಾದ ರಾಗಿ ಜೋಳ, ಭತ್ತ ಇವುಗಳನ್ನು ಯಾವುದೇ ಸಂದರ್ಭದಲ್ಲಿ ಜಪ್ತಿ ಮಾಡುವುದಿಲ್ಲ ಎತ್ನುತಕ್ಕ ಮಾತನ್ನು ಹೇಳಿದ್ದೀರಿ, ಆದರೆ ಇಂದು ಇದನ್ನೂ ಕೂಡ ಸೇರಿಸಿ ತಹಸೀಲ್ದಾರ್‌ರವರು ಗರಿ ಕಟ್ಟಿಕೊಂಡು ರೆಡಿಯಾಗಿದ್ದಾರೆ.

ಅಧ್ಯಕ್ಷರು.—ಏನು ಮಾಡಬೇಕೆಂಬುದನ್ನು ಸಲಹೆ ಕೊಡಿ.

ಶ್ರೀ ಎಸ್ ಬಂಗಾರಪ್ಪ.—ಮಾಡಿ ಅಂತ ಸಲಹೆ ಕೊಡುವುದಲ್ಲ. ಉತ್ತರ ಬೇಕು ನನಗೆ, ರದ್ದು ಮಾಡುತ್ತೇವೆಂದು ಹೇಳಿದ್ದೀರಿ. ಅದಕ್ಕೆ ತದ್ವಿರುದ್ಧವಾಗಿ ಇವತ್ತು ಇಂತಹ ಲಕ್ಷಾಂತರ ಜನರಿಗೆ ನೋಟೀಸ್ ಕೊಟ್ಟಿದ್ದೀರಿ, ವಸೂಲು ಮಾಡುವುದಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳೇ ಹೇಳಿದ್ದಾರೆ, ಬೇರೆ ಯಾರೂ ಹೇಳಿದ್ದಲ್ಲ, ಆ ಬಗ್ಗೆ ಕೂಡಲೇ ಸರ್ಕಾರಿ ಆಜ್ಞೆಯನ್ನು ಹೊರಡಿಸಿಲ್ಲದ ಕಾರಣ ಇವತ್ತು

ಜಪ್ತಿ ಮಾಡುವುದಕ್ಕೆ ಹೊರಟ್ಟಿದ್ದಾರೆ. ಇದರಿಂದಾಗಿ ಎಲ್ಲ ಕಡೆ ಗಲಾಟೆಗಳು ಆಗುತ್ತಿವೆ. ಉಳುವವನೇ ಭೂಮಿಯ ಒಡೆಯನನ್ನಾಗಿ ಮಾಡಬೇಕೆಂದು ಕಾಂಗ್ರೆಸ್ ಅಧಿವೇಶನದಲ್ಲಿ ತೀರ್ಮಾನ ಮಾಡಲಾಯಿತು. ಅಂದು ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದರು. ಇಲ್ಲಿ ಶ್ರೀಮಾನ್ ದಿವಂಗತ ದೇವರಾಜ್ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದರು. ೧ನೇ ಮಾರ್ಚಿ ೭೪ರಲ್ಲಿ ತಂದಂತಹ ಕಾನೂನಿನ ಪ್ರಕಾರ ಅವರಿಗೆ ಸಂಪೂರ್ಣವಾದ ಒಡೆತನವನ್ನು ಕೊಡಲಾಯಿತು, ಇದರಿಂದ ಅವರು ಸಂತೋಷ ಪಟ್ಟು ಕೊಂಡು ಹೇಗೋ ಜೀವನ ಮಾಡುತ್ತಿದ್ದರು. ಇವತ್ತು ಅಂತಹ ಜನರಿಗೆ ಕೊಡಲಿ ಏಟನ್ನು ಹಾಕಿದ್ದೀರಿ.

ಅಧ್ಯಕ್ಷರು.—ನಿಮಗೆ ೮೫ ನಿಮಿಷಗಳ ಅವಕಾಶವನ್ನು ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಬಹಳ ವಿಚಾರಗಳು ಇವೆ.

ಶ್ರೀ ಸಿ, ಎಂ. ಉದಾಸಿ.—ನಾನು ಏನು ಹೇಳುತ್ತಿದ್ದೇನೆಂದರೆ, ಭೂಸುಧಾರಣೆಯ ಕಾಯಿದೆ ಗನುಗುಣವಾಗಿ ಏನು ರೈತರಿಗೆ ೫ ಎಕರೆ ಮಳೆ ತರಿ ಹಾಗೂ ೧೦ ಎಕರೆ ಖುಷ್ಕಿ ಯಾರಿಗೆ ಕೊಡಲಾಗಿದೆ ಅವರಿಗೆ ಪರಿಹಾರವನ್ನು ಕೊಡಬೇಕೆಂಬುದಾಗಿ ತೀರ್ಮಾನವಾಗಿದೆ. ಇದರಲ್ಲಿ ಏನಾಗಿದೆ ಎಂದರೆ ಇದರ ವಿಚಾರವಾಗಿ ನಮ್ಮ ಪಕ್ಷದ ಸಭೆಯಲ್ಲೂ ಚರ್ಚೆಗೆ ಬಂತು, ೧೯೭೪ಕ್ಕೂ ಮೊದಲು ಯಾರ್ಯಾರು ಕಂತನ್ನು ಕಟ್ಟಬೇಕಾಗಿತ್ತು, ಅವರಿಂದ ಮಾತ್ರ ವಸೂಲು ಮಾಡಬೇಕೆಂದು ಆಗಿದೆ. ಆದರೆ ೧೯೭೪ರ ನಂತರ ಯಾರ್ಯಾರು ಕಂತನ್ನು ಕಟ್ಟಿಲ್ಲವೇ ಅಂತಹವರಿಗೆ ಈ ವಿನಾಯಿತಿಯನ್ನು ಕೊಡಬೇಕೆಂದು ಆಜ್ಞೆ ಯಾಯಿತು. ಆದರೆ ಹಿಂದಿನ ಕಂತು ಯಾರೂ ಕಟ್ಟಿಲ್ಲ ಅಂತಹವರಿಂದ ಮಾತ್ರ ವಸೂಲು ಮಾಡುತ್ತಿದ್ದಾರೆ, ೧೯೭೪ರ ನಂತರ ಕಂತನ್ನು ಯಾವ ರೈತರಿಂದಲೂ ವಸೂಲು ಮಾಡುತ್ತಿಲ್ಲ. ಇದರ ಬಗ್ಗೆ ವಿವರಣೆಯನ್ನು ಕೊಡುವ ಸಲುವಾಗಿ ಇವತ್ತಿನ ನಮ್ಮ ಪಾರ್ಟಿ ಸಭೆಯಲ್ಲೂ ಕೂಡ ಚರ್ಚೆಯಾಯಿತು. ಇದಕ್ಕೆ ತಮ್ಮ ಮೂಲಕ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ನಾನು ಮಾನ್ಯ ಉದಾಸಿಯವರು ಹೇಳಿರುವುದಕ್ಕೆ ಸಂತೋಷ ಪಡುತ್ತೇನೆ ಒಂದು ವಿಚಾರಕ್ಕೆ. ತಮಗೆ ಗೊತ್ತಿರುವಹಾಗೆ ೧೯೭೪ರ ನಂತರ ಟ್ರಿಬ್ಯೂನಲ್‌ನಲ್ಲಿ ಯಾವ್ಯಾವು ಆರ್ಡರ್ ಆಗಿವೆ ಅವುಗಳಿಗೆ ಮಾತ್ರ ವಿನಾಯಿತಿ.

ಶ್ರೀ ಸಿ. ಎಂ. ಉದಾಸಿ.—೧೯೭೪ರವರೆಗೆ ಬರುವಂತಹ ಕಂತುಗಳನ್ನು ಮಾತ್ರ ರೈತರು ತುಂಬಬೇಕಾಗುತ್ತದೆ. ನಂತರದ ಕಂತುಗಳಿಗೆ ವಿನಾಯಿತಿ ಕೊಟ್ಟು ವಸೂಲಿ ಮಾಡಲಾಗುತ್ತಿದೆ. ರೈತರಿಗೆ ಸ್ವಲ್ಪ ಗೊಂದಲಮಯವಾಗಿದೆ ಅದರ ಬಗ್ಗೆ ನಮ್ಮ ಪಾರ್ಟಿ ಮೀಟಿಂಗ್‌ನಲ್ಲಿ ಚರ್ಚೆಯಾಗಿದೆ ಅದನ್ನು ತಮ್ಮ ಗಮನಕ್ಕೂ ತರುತ್ತಿದ್ದೇನೆ. ಪೂರ್ತಿ ಹಣವನ್ನು ವಸೂಲಿ ಮಾಡಲಿಕ್ಕೆ ಯಾರ ಮೇಲೂ ಕ್ರಮವನ್ನು ಜರುಗಿಸಿಲ್ಲ. ೧೯೭೪ರ ಮೊದಲು ಯಾರಿಗೆ ಹಕ್ಕುಪತ್ರ ಕೊಟ್ಟಿದ್ದಾರೆ ಅವರ ಕಡೆಯಿಂದ ಮುರ್ನಾಲ್ಕು ಕಂತುಗಳು ಬರಬಹುದು. ಆಮೇಲೆ ಬರತಕ್ಕ ೧೬-೧೭ ಕಂತುಗಳಿಗೆ ವಿನಾಯಿತಿ ಸಿಕ್ಕಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ

ಶ್ರೀ ಎಸ್. ಬಂಗಾರಪ್ಪ.—ಈ ಸಂದರ್ಭದಲ್ಲಿ ಮಾನ್ಯ ಉದಾಸಿಯವರ ಪ್ರಶ್ನೆಗೆ ಉತ್ತರ ಕೊಟ್ಟರೆ ಬಹಳ ಒಳ್ಳೆಯದು ಉದಾಹರಣೆಗೆ ನನ್ನ ಹತ್ತಿರ ಒಂದು ನೋಟೀಸ್ ಇದೆ. ಅದು ೧೯೮೨-೮೩ ಕೇಸಿನ ನಂಬರು. ಇದರ ಅರ್ಥ ಅಂದರೆ ೧೯೭೪ರ ನಂತರ ಇದರ ಅರ್ಥ ಅಂದರೆ ಹಿಡುವಳಿ ಹಕ್ಕುಪತ್ರವನ್ನು ಒಬ್ಬ ರೈತನಿಗೆ ಯಾವಾಗ ಕೊಡುತ್ತಾರೆ ? ಟ್ರಿಬ್ಯೂನಲ್ ನಲ್ಲಿ ಏನು ಜಡ್ಜ್‌ಮೆಂಟ್ ಆಗುತ್ತದೆ ಅದರ ನಂತರ ಕೊಡುತ್ತಾರೆ. ೧೯೭೪ನೇ ಸಾಲಿನಲ್ಲಿ ಜಡ್ಜ್‌ಮೆಂಟ್ ಆದ ಕೇಸುಗಳಿಗೆ ಏನು ಹಕ್ಕುಪತ್ರ ಕೊಟ್ಟಿದ್ದಾರೆ, ಅವರಿಂದ ವಸೂಲಿ ಮಾಡತಕ್ಕ ಅವಶ್ಯಕತೆಯಿಲ್ಲ. ೧೯೭೪ಕ್ಕಿಂತ ಮುಂಚೆ ಆದ ಕೇಸುಗಳಲ್ಲಿ ಮಾತ್ರ ವಸೂಲಿಯಾಗಬೇಕೆಂದು ಇವರ ಅಭಿಪ್ರಾಯ.

ಶ್ರೀ ಸಿ. ಎಂ ಉದಾಸಿ.—ಅದನ್ನೇ. ನಾನು ಹೇಳುತ್ತಿದ್ದೇನೆ, ೧೯೭೪ರಲ್ಲಿ ಬರುವಂತಹ ಎರಡು ಮೂರು ಕಂತುಗಳನ್ನು ಕೊಟ್ಟು ನಂತರ ಬರುವ ಕಂತುಗಳಿಗೆ ವಿನಾಯಿತಿ ಸಿಕ್ಕಿದೆ. ಈ ರೀತಿ ನೋಟೀಸ್ ಕೊಟ್ಟಾಗ ಜನರಿಗೆ ಸಮಸ್ಯೆ ಅರ್ಥವಾಗಲಿಲ್ಲವೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ,—ನಿಮ್ಮ ಹಾನಗಲ್ ತಾಲ್ಲೂಕಿನಲ್ಲಿಯೇ ಏನಾಗಿದೆಯೆಂಬುದು ನಿಮಗೆ ಗೊತ್ತಿಲ್ಲ. ನಿಮಗೂ ತೊಂದರೆ ಕೊಡುತ್ತಿದ್ದಾರೆ. ಇದರ ಹಿಕ್ಮತ್ ನಿಮಗೆ ಗೊತ್ತಿಲ್ಲ. ಮಾನ್ಯ ಉದಾಸಿಯವರು ಸ್ವಲ್ಪ ಗಮನಿಸಬೇಕು, ಏಕ ಗಂಟು ಕಂತುಗಳೆಂದು ಏನು ಹೇಳುತ್ತಿದ್ದಾರೆ

ಅಂದರೆ ೨೦ ವರ್ಷಗಳ ಕಂತುಗಳೂ ಇವೆ, ಅದು ಆಕ್ಟ್‌ನಲ್ಲಿದೆ. It is not an executive order but there is a provision embodied in the Act itself ೧೯೮೪ರವರೆಗಿನ ಕಂತಿನ ಹಣವನ್ನು ಇಲಾಖೆಯವರು ವಸೂಲಿ ಮಾಡುತ್ತಿದ್ದಾರೆ. ೧೯೮೪ರ ನಂತರ ವಸೂಲಿ ಮಾಡಬಾರದು. ೧೯೮೪ಕ್ಕಿಂತ ಹಿಂದೆ ೮ಲಕ್ಷ ಕೇಸುಗಳು ತೀರ್ಮಾನವಾಗಿವೆ. ನಾನು ಕಂದಾಯ ಮಂತ್ರಿಯಾಗಿದ್ದೆ, ಮಾನ್ಯ ಖರ್ಗೆಯವರು ಕೂಡ ರೆವಿನ್ಯೂ ಮಂತ್ರಿಗಳಾಗಿದ್ದರು. It is a very important point ಅಂಕಿಸಂಖ್ಯೆಗಳಲ್ಲಿ ಒಂದೆರಡು ಸಾವಿರ ಸ್ವಲ್ಪ ವ್ಯತ್ಯಾಸ ಇರಬಹುದು. ಇತ್ತೀಚಿನ ಅಂಕಿಅಂಶಗಳನ್ನು ಕೊಡುವುದಕ್ಕೆ ಆಗುವುದಿಲ್ಲ. ಆ ಸಂದರ್ಭದಲ್ಲಿ ಕೇಸುಗಳು ಸುಮಾರು ೯೦-೯೫ ಪರ್ಸೆಂಟ್ ವಿಲೇವಾರಿಯಾಗಿದ್ದವು. ಇದು ಇವತ್ತು ತಮ್ಮ ಪಕ್ಷದ ಸಭೆಯಲ್ಲಿ ಬಂದಿದೆ. ೧೯೮೪ರ ವರೆಗೆ ವಸೂಲಿ ಮಾಡಬೇಕೆಂದರೆ ರೈತರು ಹೋದರು. ರೈತರು ಮಣ್ಣು ತಿಂದು ಹೋದರು. ೧೯೮೪ರ ನಂತರ ಇತ್ಯರ್ಥವಾಗಿರತಕ್ಕ ಕೇಸುಗಳು ಬಹಳ ಕಡಿಮೆ. ವಸೂಲಿ ಮಾಡುವುದಕ್ಕೆ ಸಂಪೂರ್ಣ ಹಕ್ಕು ಸಿಕ್ಕಿತು. I do not know the latest thinking in your party. ತಮ್ಮ ಚರ್ಚೆಯ ಪ್ರಕಾರ ತೀರ್ಮಾನ ಮಾಡಿಬಿಟ್ಟರೆ ಅದು ಬೇರೆ. ಮಾನ್ಯ ಮುಖ್ಯ ಮಂತ್ರಿಗಳು ಇದ್ದಿದ್ದರೆ ಒಳಿತು ಆಗುತ್ತಿತ್ತು. ಅವರು ಉತ್ತರ ಕೊಡಬೇಕಾದರೆ ನಾನು ಬಹಳ ಕಾತುರನಾಗಿದ್ದೇನೆ. ಇದು ಸಣ್ಣ ವಿಚಾರವಲ್ಲ, ಇದು ಲಕ್ಷಾಂತರ ಗೇಣಿದಾರರ ಬಗ್ಗೆ ಪ್ರಶ್ನೆ ಇರುವುದರಿಂದ ದಯಮಾಡಿ ಉತ್ತರ ಕೊಡಬೇಕು. ನೀವೇ ಈ ಸದನಕ್ಕೆ ಹೇಳಿದ ಪ್ರಕಾರ ನಾಲ್ಕೈದು ಎಕರೆ ತರಿ ಭೂಮಿ, ಮತ್ತು ಖುಷ್ಕಿ ಭೂಮಿಯನ್ನು ಹೊಂದಿರತಕ್ಕ ಗೇಣಿದಾರರಿಂದ ಹಣವನ್ನು ವಸೂಲಿ ಮಾಡಲು ಹೇಳಿರತಕ್ಕದ್ದು ಇದೆ. ಇತ್ತೀಚೆಗೆ ೨೦-೩೦ ಸಾವಿರ ಕೇಸುಗಳು ತೀರ್ಮಾನವಾಗಿವೆ. ಅವು ಕೂಡ ಹೈಕೋರ್ಟ್‌ನಿಂದ ಟ್ರಾನ್ಸ್‌ಫರ್ ಆದಂತಹ ಕೇಸುಗಳು. ಅವು ಮೊದಲು ತೀರ್ಮಾನವಾಗಿವೆ, ಮತ್ತೆ ಬಂದು ಅಲ್ಲಿಗೆ ಹೋಗಿವೆ. ಕರ್ನಾಟಕ ರಾಜ್ಯದ ಜನತೆ. ಗೇಣಿದಾರರು ಸುಮ್ಮನೆ ಕುಳಿತುಕೊಳ್ಳುವುದಿಲ್ಲ ಇದನ್ನೆ ಸೂಚ್ಯ ಮತ್ತು ಎಚ್ಚರಿಕೆಯ ರೂಪದಲ್ಲಿ ಈ ಸಂದರ್ಭಗಳಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಸಂದರ್ಭದಲ್ಲಿ ನಾನು ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರಬೇಕಾಗಿದೆ.

ಅಧ್ಯಕ್ಷರು — ಡಿಮ್ಯಾಂಡ್ ಮೇಲೆ ಮಾತನಾಡುವಾಗ ತಮಗೆ ಸಾಕಷ್ಟು ಅವಕಾಶ ಕೊಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ರೂರಲ್ ಕಮ್ಯೂನಿಕೇಶನ್ ಬಗ್ಗೆ ನಾನು ಹೆಚ್ಚು ವಿವರಕ್ಕೆ ಹೋಗುವುದಿಲ್ಲ. ಸುಮಾರಾಗಿ ಕಾಂಗ್ರೆಸ್ ಸರ್ಕಾರ ಇದ್ದಾಗ ಇದ್ದ ಎಲ್ಲಾ ರೋಡ್‌ಗಳು ಇವತ್ತು ಗುಂಡಿಗಳಾಗಿವೆ. ಯಾವ ರಸ್ತೆಯನ್ನು ಬೇಕಾದರೂ ಹೋಗಿ ನೋಡಿ. ನಿಮ್ಮ ಹತ್ತಿರ ಟಾರು ಡ್ರಮ್ಮಿಗೆ ಗತಿ ಇಲ್ಲ, ಜಲ್ಲಿ ಗುಡ್ಡೆ ಸಿಗುವ ಹಾಗಿಲ್ಲ ನಿಮ್ಮ ಹತ್ತಿರ. ಎಲ್ಲಾ ಹೊರಟು ಹೋದವು. ಇದು ಕರ್ನಾಟಕ ರಾಜ್ಯದ ಪರಿಸ್ಥಿತಿ. ಎಲ್ಲಾ ಕಡೆಯಲ್ಲೂ ಹೀಗೆಯೇ ಇದೆ, ನಾನು ಅನೇಕ ಜಿಲ್ಲೆಗಳಿಗೆ ಹೋಗುತ್ತಿರುತ್ತೇನೆ. ನೀವು ಕೂಡ ಹೋಗುತ್ತಿರುತ್ತೀರಿ. ತುಮ್ಮಿನಕಟ್ಟೆ ಹತ್ತಿರ ಒಂದು ಬ್ರಿಡ್ಜ್ ಇದೆ ಅಲ್ಲಿಯ ಜನರು ಇವತ್ತು ಬಂದಿದ್ದಾರೆ. ನಂದಿಗುಡಿ ಬ್ರಿಡ್ಜ್ ಅದು ಇದ್ದು, ಸುಮಾರು ಒಂದು ಕೋಟಿ ಹತ್ತು ಲಕ್ಷ ಬಡ್ಜೆಟ್ಟಿನಲ್ಲಿ ಇಟ್ಟಿದ್ದರು, ಬರೇ ಪ್ರಿಂಟ್ ಹಾಕಿದ್ದು ಅಷ್ಟೆ ಬಡ್ಜೆಟ್ಟಿನಲ್ಲಿ ಹಾಕಿದ್ದು ಏನಾಯಿತು?

ಅಧ್ಯಕ್ಷರು.—ಇದನ್ನು ಸೆಂಟ್ರಲ್ ಗವರ್ನ್‌ಮೆಂಟಿಗೆ ಕಳಿಸಿದ್ದಾರೆ, ಅವರು ಮಾಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ — ಆಮೇಲೆ ತುಂಗಭದ್ರಾ ನದಿಯಿಂದ, ಹರಿಹರದ ಹತ್ತಿರ ಇದೆ. ಇವತ್ತು ನೀವು ೧ ಕೋಟಿ ೧೦ ಲಕ್ಷ ರೂಪಾಯಿಗಳನ್ನು ಒಂದೇ ಸಲಕ್ಕೆ ಕೊಡುವುದು ಬೇಡ. ಬಜೆಟ್ ಇನ್ನೂ ಪಾಸ್ ಆಗಿಲ್ಲ, ಈಗಲಾದರೂ ಪ್ರಕಟಣೆ ಮಾಡಿ. ಮಾನ್ಯ ಶ್ರೀ ದೇವೇಗೌಡರು ಇದ್ದಿದ್ದರೆ ಚೆನ್ನಾಗಿ ಇತ್ತು. ಈ ಸಲ ೪೦-೫೦ ಲಕ್ಷವಾದರೂ ಇಟ್ಟು ಈ ಕೆಲಸವನ್ನು ಪ್ರಾರಂಭಮಾಡಿ ಅದೇ ರೀತಿ ನೀರಾವರಿ ವಿಚಾರದಲ್ಲಿ ಅನೇಕರು ಕೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ತಮ್ಮ ಕ್ಷೇತ್ರದ್ದು ಮದನಮಾಸುರ ಕೆರೆ. ಸಾವಿರಾರು ಎಕರೆಗೆ ನೀರು ಒದಗಿಸತಕ್ಕಂಥ ಕೆರೆ. ಹಿರೇಕೆರೂರು, ರಾಣೆಬೆನ್ನೂರು ತಾಲ್ಲೂಕಿಗೆ ಬಹಳ ಉಪಯುಕ್ತವಾದದ್ದು. ಇದನ್ನು ತಾವು ತೆಗೆದುಕೊಳ್ಳುವ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ನಂತರ ಗ್ರೈನೇಟ್ ವಿಚಾರದಲ್ಲಿ ಸ್ವಲ್ಪ ಹೇಳಬೇಕು.

ಅಧ್ಯಕ್ಷರು.—ತಮ್ಮದು ರೆಕಾರ್ಡ್ ಬ್ರೇಕ್ ಆಗಿದೆ. ವಿರೋಧ ಪಕ್ಷದ ಉಪನಾಯಕರು ಮಾತನಾಡಿದ್ದು ೯೧ ನಿಮಿಷ ಆದರೆ ತಮ್ಮದು ೯೫ ನಿಮಿಷ ಆಗಿದೆ. ಮುಂದು ಬೇಡಿಕೆಗಳ ಮೇಲೆ ಚರ್ಚೆ ನಡೆಯುವಾಗ ಸಾಕಷ್ಟು ಅವಕಾಶ ಇರುತ್ತದೆ. ಈಗ ಬೇಗ ಮುಗಿಸಿರಿ.

ಶ್ರೀ ಎಸ್. ಬಂಗಾರಪ್ಪ.—ತಾವು ಮುಗಿಸಬೇಕು ಎಂದರೆ ಮುಗಿಸುತ್ತೇನೆ. ಎಷ್ಟು ಸಮಯದಲ್ಲಿ, ಮುಗಿಸಬೇಕು? ಇನ್ನು ಅರ್ಧ ಗಂಟೆಯಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು.—ಆರೂವರೆ ಗಂಟೆಗೆ ಮುಗಿಸುತ್ತೀರಾ ? ಸ್ಪೆಶಲ್ ಕೇಸ್ ಅಂತ ನಿಮಗೆ ಹೆಚ್ಚು ಕಾಲಾವಕಾಶವನ್ನು ಕೊಟ್ಟಿದ್ದೇನೆ,

ಶ್ರೀ ಎಸ್. ಬಂಗಾರಪ್ಪ.— ತಾವು ಹೇಳಿದ ಹಾಗೆ ಆರೂವರೆ ಗಂಟೆಗೆ ಎರಡು ನಿಮಿಷ ಇರುವಾಗಲೆ ಮುಗಿಸಿಬಿಡುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಈ ಗ್ರೈನೇಟ್ ವಿಚಾರದಲ್ಲಿ ಹೇಳುವುದಾದರೆ ಇದು ಸರ್ಕಾರದ ಸ್ವತ್ತು ಇರುತ್ತದೆ. ಇಲ್ಲಿ ಲೂಟಿಯಾಗಿದೆ. ಉದಾಹರಣೆಗೆ ಕನಕಪುರ ತಾಲ್ಲೂಕು ಚಾಮರಾಜನಗರ ತಾಲ್ಲೂಕು ತೆಗೆದುಕೊಳ್ಳಿ. ಮೈಸೂರು ಜಿಲ್ಲೆ, ಹಾಸನ ಜಿಲ್ಲೆ, ಬಳ್ಳಾರಿ ಜಿಲ್ಲೆ, ಬಿಜಾಪುರ, ಗುಲ್ಬರ್ಗ ಜಿಲ್ಲೆಗಳನ್ನೇ ತೆಗೆದುಕೊಳ್ಳಿ. ಸುಮಾರು ಕೇಸುಗಳಲ್ಲಿ ಕೋರ್ಟಿಗೆ ಹೋಗಿದ್ದಾರೆ. ಇಲ್ಲಿ ಕೆಲವು ಕಂಪನಿಗಳು ತಯಾರಾಗಿ ಬಿಟ್ಟಿವೆ. ಮುದ್ದೇಶ್ವರ ಮೈನಿಂಗ್ ಇಂಡಸ್ಟ್ರೀಸ್ ಕಂಪನಿಗಳು, ಚಂದ್ರ ಗ್ರೈನೇಟ್ಸ್, ಪ್ರಸಾದ್ ಗ್ರೈನೇಟ್ಸ್, ಸೂಪರ್, ಓರಿಯಂಟಲ್ ಗ್ರೈನೇಟ್ಸ್ ಇತ್ಯಾದಿ. ನನ್ನ ಹತ್ತಿರ ದಾಖಲೆಗಳ ಪ್ರತಿಗಳು ಇವೆ. ಇದೊಂದಕ್ಕೇ ನನಗೆ ಅರ್ಧ–ಮುಕ್ಕಾಲು ಗಂಟೆ ಬೇಕು. ಅಷ್ಟು ವಿಷಯ ಇದೆ. ಸರ್ಕಾರಿ ದಾಖಲೆಗಳ ಫೋಟೋಸ್ಟೇಟ್ ಪ್ರತಿಗಳನ್ನು ಇಟ್ಟುಕೊಂಡಿದ್ದೇನೆ. ಸರ್ಕಾರಿ ಭೂಮಿಯಲ್ಲಿ Royalty or Tax ಲೂಟಿಯಾಗಿರುವ ಪ್ರಕರಣಗಳಲ್ಲಿ ಕೋರ್ಟಿಗೆ ಕೇಸುಗಳು ಹೋಗಿರತಕ್ಕದ್ದು ಇವೆ. ಲೋಕಾಯುಕ್ತಕ್ಕೆ ಹಾಕುತ್ತೇವೆ ಎಂದು ಒಂದು ಸಾರಿ ಹೇಳಿಕೆ ಕೂಡ ಬಂದಿತ್ತು. ಸರ್ಕಾರದ ಗಮನಕ್ಕೆ, ಇಲಾಖೆಯ ಗಮನಕ್ಕೆ ಹತ್ತೆಂಟು ಸಾರಿ ತಂದರೂ ಏನೂ ಆಗಲಿಲ್ಲ. ಈಗಲೂ ಲೂಟಿ ನಡೆಯುತ್ತಿದೆ. ಸುಮಾರು ಒಂದು ವರ್ಷಕ್ಕೆ ಹತ್ತಿರ ಹತ್ತಿರ ೨೫–೩೦ ಕೋಟಿ ವರಮಾನ ರಾಜ್ಯ ಸರ್ಕಾರಕ್ಕೆ ಬರತಕ್ಕದ್ದು ನಷ್ಟವಾಗಿದೆ. ಇದು ನಮ್ಮ ಸರ್ಕಾರಕ್ಕೆ ಬರಬೇಕಾಗಿತ್ತು. ಇಷ್ಟು ತೆರಿಗೆಯನ್ನು ಮೋಸ ಮಾಡತಕ್ಕಂಥ, ಲೂಟಿ ಮಾಡತಕ್ಕಂಥ ಕೆಲಸ ನಡೆದಿದೆ. ಮೈಸೂರು ಜಿಲ್ಲೆಯಲ್ಲಿ, ಮತ್ತೊಂದು ಕಡೆ ಅನೇಕ ಜನ ಚಳುವಳಿ ಮಾಡಿದರು. ಈ ಕಪ್ಪು ಕಲ್ಲು ಜಪಾನ್ ದೇಶಕ್ಕೆ ಹೋಗುತ್ತದೆ, ಮತ್ತಿತರ ಅನೇಕ ರಾಷ್ಟ್ರಗಳಿಗೆ ಹೋಗುತ್ತದೆ. ನಮ್ಮ ರಾಷ್ಟ್ರದಲ್ಲಿ. ಮೈಸೂರು ಜಿಲ್ಲೆಯಲ್ಲಿ ಇದರ ಉತ್ಪತ್ತಿ ಬಹಳ ಇದೆ, ಈ ವಿಚಾರದಲ್ಲಿ ಏನೇನು ನಡೆದಿದೆ ಎಂಬ ಸಂಪೂರ್ಣವಾದ ವಿವರಗಳು ಬೇಕಾಗಿದೆ. ಮೈಸೂರು ಮಿನರಲ್ಸ್ ಲಿಮಿಟೆಡ್‌ನಲ್ಲಿ ಯಾವರೀತಿಯ ಕೆಲಸ ನಡೆಯಬೇಕೋ ಆ ರೀತಿಯ ಕೆಲಸ ಏಕೆ ನಡೆಯಲಿಲ್ಲ. ಆದ್ದರಿಂದ ನಿಮ್ಮ ಕೃಪಾಪೋಷಿತ ನಾಟಕ ಮಂಡಲಿಯಲ್ಲಿ ಏನೇನು ನಡೆಯುತ್ತಿದೆ ಎಂಬ ಬಗ್ಗೆ ವಿಚಾರಣೆ ಆಗಬೇಕು, ನ್ಯಾಯಾಂಗ ತನಿಖೆ ಆಗಬೇಕು. ಮಾನ್ಯ ಸಭಾಧ್ಯಕ್ಷರೇ ತಾವು ಕ್ಷಮಿಸಬೇಕು, ಕಾಲಾವಕಾಶ ಇಲ್ಲದೇ ಇರುವುದರಿಂದ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಸರ್ಕಾರಿ ಜಮೀನಿನಲ್ಲಿ ಸಿಗತಕ್ಕಂಥದ್ದನ್ನು ಒಂದು ಕಡೆಯಿಂದ ಲೂಟಿ ಹೊಡೆಯುತ್ತಿದ್ದಾರೆ. ಸರ್ಕಾರಿ ಭೂಮಿಗೆ ಕಾನೂನು ಪ್ರಕಾರ, ಯಾವರೀತಿ ಹಣವನ್ನು ಕಟ್ಟಿ, ಉತ್ಪತ್ತಿ ಮಾಡಬೇಕೆಂಬುದು ತಮಗೂ ಗೊತ್ತಿದೆ. ಈ ವಿಚಾರದಲ್ಲಿ ಸಂಪೂರ್ಣವಾಗಿ ಕಾನೂನನ್ನು ಮೂಲೆಗುಂಪು ಮಾಡಿ, ವರ್ಷಕ್ಕೆ ಬರತಕ್ಕಂಥ ೩೦ ಕೋಟಿ ರೂಪಾಯಿಗಳ ಆದಾಯವನ್ನು ನೀರಿಗೆ ಬಿಡತಕ್ಕ ಕೆಲಸ ಆಗಿದ್ದರೂ ನೀವು ಏಕೆ ಸುಮ್ಮನಿದ್ದೀರಿ. ಮಾನ್ಯ ಜಿಗಜಿನಗಿಯವರು ಮಂತ್ರಿಗಳಾಗಿದ್ದಾರೆ, ಇದಕ್ಕೆ ಕಾಯಕಲ್ಪ ಮಾಡಬೇಕು. ನಿಮ್ಮ ಮಂತ್ರಿಮಂಡಲವನ್ನು ಸರಿಮಾಡಿದರೆ, ಇದೂ ಕೂಡ ಕಾಯಕಲ್ಪ ಆಗುತ್ತದೆ. ನಾನು ಪದೇ ಪದೇ ಈ ವಿಚಾರವನ್ನು ಹೇಳುತ್ತಿದ್ದೇನೆ, ಸರ್ಕಾರದವರು ಇಂತಹ ವಿಚಾರಗಳಿಗೆ ಗಮನಕೊಡದೇ ಹೋದರೆ ಏನು ಪ್ರಯೋಜನ.

ಇದೇ ಸಂದರ್ಭದಲ್ಲಿ ಮನೆಗಳ ವಿಚಾರದಲ್ಲಿ ಹೇಳಬೇಕಾದುದನ್ನು ಮರೆತೆ, ತಾವು ಈ ಬಜೆಟ್‌ನಲ್ಲಿ ಎಷ್ಟು ಸಾವಿರ ಮನೆಗಳನ್ನು ಶ್ರೀಸಾಮಾನ್ಯನಿಗೆ ಕೊಡುತ್ತೇವೆಂಬ ಮಾತನ್ನು ಹೇಳಿಲ್ಲ. ಆದರೂ ಕಟ್ಟಿರುವ ಮನೆಗಳನ್ನು ಮಾತ್ರ ಒಡೆಯುತ್ತಿದ್ದೀರಿ. ನೀವು ಬಂದ ಮೇಲೆಯೇ ಈ ಮನೆಗಳನ್ನು ಒಡೆಯುವುದಕ್ಕೆ ಬುಲ್ಡೋಜರ್ ಉಪಯೋಗ ಮಾಡಿರುವುದು. ಮನೆಗಳನ್ನು ಕಟ್ಟಿಕೊಡಲು ಆಗದೇ ಹೋದರೆ, ಮನೆಗಳನ್ನು ಒಡೆಯುವ ಹಕ್ಕು ನಿಮಗೆ ಎಲ್ಲಿ ಬರುತ್ತದೆ? ಬೆಂಗಳೂರಿನ, ನಂದಿನಿ ಲೇಔಟ್‌ನಲ್ಲಿ ನಡೆದಿರತಕ್ಕ ವಿಚಾರವನ್ನು ನಾವು ಕಣ್ಣಿಂದ ನೋಡಬಾರದು, ಮಾನ್ಯಸಭಾಧ್ಯಕ್ಷರೇ,

ಈ ಬಡಾವಣೆಯಲ್ಲಿ ಮನೆಗಳನ್ನು ಕಟ್ಟಿರತಕ್ಕ ಎಷ್ಟೋ ಜನರು, ಸೊಸೈಟಿಗಳಲ್ಲಿ, ಬ್ಯಾಂಕುಗಳಲ್ಲಿ, ಮತ್ತೆ ಕೆಲವೊಂದು ಪ್ರೈವೇಟ್ ಏಜೆನ್ಸಿಗಳಿಂದ ಸಾಲವಾಗಿ ಹಣ ತಂದು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಈ ಏರಿಯಾದಲ್ಲಿ ಎಲ್ಲಾ ಇಲಾಖೆಯ ಜನರೂ ಇದ್ದಾರೆ, ಸುಮಾರು. ಅಂದಾಜು ೨-೩ ಸಾವಿರ ಮನೆಗಳು ಇರಬಹುದು. ನಾನೂ ಕೂಡ ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ನಾನು ಹೋಗುವುದರೊಳಗೆ, ಅನೇಕ ಜನ ಮುಖಂಡರೂ ಕೂಡ ಹೋಗಿ ಬಂದಿದ್ದಾರೆ. ಇವರು ಎರಡು ಮೂರು ಬುಲ್ಡೋಜರ್ ತಂದಿದ್ದಾರೆ. ಈ ಬುಲ್ಡೋಜರ್‌ಗಳು ಈ ಮನೆಗಳಿಗೆ ಮುತ್ತು ಕೊಡುತ್ತೇವೆ. ಇವುಗಳನ್ನು ತೆಗೆದುಕೊಂಡು ಹೋಗಿ ತಾರಸಿ ಮನೆಗಳಿಗೆ ತಾಕಿಸಿದರೆ ಸಾಕು, ಆ ಮನೆಗಳು ಹಾಗೆಯೇ ಬಿದ್ದು ಹೋಗುತ್ತವೆ. ಈ ಮನೆಗಳಲ್ಲಿ ಮುದುಕರು ಹೆಣ್ಣುಮಕ್ಕಳು ಮತ್ತು ಹೆರಿಗೆಯಾಗಿರತಕ್ಕಂಥವರು ವಾಸವಾಗಿದ್ದಾರೆ. ಇವರುಗಳಿಗೆ ಪೂರ್ವಸೂಚನೆ ಇಲ್ಲ, ಏನೇನೂ ಇಲ್ಲ. ಹೈಕೋರ್ಟ್‌ನಿಂದ ಸ್ಟೇ ತಂದಮೇಲೆ ಒಡೆಯುವುದನ್ನು ನಿಲ್ಲಿಸಿದರು. ನಾವು ಅಲ್ಲಿಗೆ ಹೋದಾಗ, ಈ ವಿಚಾರದಲ್ಲಿ ಮೇಲ್ಪಟ್ಟ ಅಧಿಕಾರಿಗಳೊಂದಿಗೆ ಮಾತನಾಡುತ್ತೇವೆಂದು ಹೇಳಿ ಬಂದೆವು. ಅಲ್ಲಿ ಬಿ.ಡಿ.ಎ. ಅಧಿಕಾರಿಗಳು ಮತ್ತು ಸಾವಿರಾರು ಜನ ಪೋಲೀಸಿನವರು ಇದ್ದರು ಮಾನ್ಯ ಚಂದ್ರಶೇಖರ್ ಅವರು ಮೊದಲು ಒಂದುಸಾರಿ ನಗರಾಭಿವೃದ್ಧಿ ಸಚಿವರು ಆಗಿದ್ದರು. ಈಗಲೂ ಕೂಡ, ಮತ್ತೆ ಅದೇ ಖಾತೆಯನ್ನು ವಹಿಸಿಕೊಂಡಿದ್ದಾರೆ

ಮಾನ್ಯ ಚಂದ್ರಶೇಖರ್‌ರವರು ಮತ್ತೊಂದು ಸಲ ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್‌ರವರಾಗಿದ್ದಾರೆ. ಅವರನ್ನು ಹತ್ತು ಸಲ ಮಾಡಿ, ನಮ್ಮ ಅಭ್ಯಂತರ ಇಲ್ಲ. ಅವರು ಸಚಿವರಾಗಿದ್ದಾಗ ಇದೇ ರೀತಿ ವಿಚಾರ ಬಂದಿತ್ತು. ಕಂಟೋನ್ಮೆಂಟ್ ಏರಿಯಾದ ಕಡೆಗೆ ನಾವು ಹೋಗಿಬಂದಿದ್ದೆವು. ಆಗ ಏನು ವಿಚಾರ ಬಂದಿತ್ತು ಎಂದರೆ, ಮನೆಗಳನ್ನು ನಾವು ಒಡೆಯುವುದಿಲ್ಲ ಎಂದು ಹೇಳಿದ್ದರು. ಮೈಸೂರು ನಗರದಲ್ಲೂ ಕೂಡಾ ಇದೇ ರೀತಿ ಆಗಿದೆ. ಬೇಗಂ ಅವರು ಅಲ್ಲಿಯ, ಶಾಸಕರು, ಅವರು ಈಗ ಇಲ್ಲ. ಅವರು ಮನೆ ಒಡೆಯುತಕ್ಕಂಥ ಸರಕಾರದ ನೀತಿಯ ವಿರುದ್ಧ ಪ್ರತಿಭಟಿಸಿದ್ದರು. ಬಸವೇಶ್ವರ ನಗರದಲ್ಲಿ ಈ ರೀತಿ ಆಗಿದೆ. ಜನತಾ ನಗರ ಎಂದು ನಿಮ್ಮ ಪಕ್ಷದ ಹೆಸರಿಟ್ಟು ಮನೆಗಳನ್ನು ಕಟ್ಟಿದಿರಿ. ನಲ್ಲಿ ಪೈಪ್‌ಗಳನ್ನು ಹಾಕಿ ನೀರು ಕೊಟ್ರಿ, ವಿದ್ಯುಚ್ಛಕ್ತಿ ಕಂಬಗಳನ್ನು ನೆಟ್ಟು ಲೈನ್ ಎಳೆದು ದೀಪ ಕೊಟ್ರಿ, ಎಲೆಕ್ಷನ್ ಆಗಿ ಹೋಯಿತು, ಎಲೆಕ್ಷನ್ ಆದ ತಕ್ಷಣ ನಲ್ಲಿ ನೀರು ಕಟ್ ಆಯಿತು ದೀಪದ ಬಲ್ಬ್‌ಗಳು ಅಲ್ಲಲ್ಲೇ ಆರಿ ಹೋಯಿತು, ಬುಲ್ಡೋಜರ್‌ನ್ನು ಅದರ ಮೇಲೆ ಬಂತು ಮನೆಗಳನ್ನು ಒಡೆದು ಹಾಕಿದಿರಿ. ನೂರು ಚಿಲ್ಲರೆ ಮನೆಗಳನ್ನು ಅಲ್ಲಿ ಒಡೆದು ಹಾಕಿದಿರಿ. ಮೈಸೂರಿನಲ್ಲಿ ಗೌಸಿಯಾ ನಗರದಲ್ಲಿ ಜನರೆಲ್ಲರೂ ಒಗ್ಗಟ್ಟಾಗಿ ವಿರೋಧ ಮಾಡಿದರು, ಆಗ ವಿರೋಧ ಪಕ್ಷದ ನಾಯಕನಾಗಿ ನಾನು ಅಲ್ಲಿಗೆ ಹೋಗಿದ್ದೆ, ಬೇಗಂ ಅವರೂ ಕೂಡಾ ಆ ಸಂದರ್ಭದಲ್ಲಿ ಅಲ್ಲಿ ಬಂದಿದ್ದರು. ಕೊನೆಗೆ ಜನರೇ ಅದನ್ನು ನಿಲ್ಲಿಸಬೇಕಾಯಿತು, ಎಂ. ಎಸ್. ರಾಮಯ್ಯ ಮೆಡಿಕಲ್ ಕಾಲೇಜ್ ಹತ್ತಿರ ಚಿಕ್ಕಮಾರನಹಳ್ಳಿಯಲ್ಲೂ ಕೂಡಾ ಬುಲ್ಡೋಜರ್ ಹೋಗಿ ಮನೆಗಳನ್ನು ಒಡೆಯಿತು ಹುಬ್ಬಳ್ಳಿಯಲ್ಲೂ ಕೂಡಾ ಮನೆಗಳನ್ನು ಒಡೆದು ಹಾಕಿದಿರಿ ಮನೆಗಳನ್ನು ಕಟ್ಟಿಸುವುದಕ್ಕೆ ಶಕ್ತಿಯನ್ನು ಕಳೆದುಕೊಂಡಿರತಕ್ಕಂಥ ಶಕ್ತಿ ಹೀನ ಸರಕಾರವಾದ ನಿಮಗೆ, ಮನೆಗಳನ್ನು ಒಡೆಯುತಕ್ಕಂಥ ಶಕ್ತಿ ಎಲ್ಲಿಂದ ಬರುತ್ತದೆ ಎಂಬ ಪ್ರಶ್ನೆಯನ್ನು ಜನಸಾಮಾನ್ಯರ ಪರವಾಗಿ ಕೇಳುತ್ತೇನೆ. ನಂದಿನಿ ಬಡಾವಣೆಯಲ್ಲಿ ಪೋಲೀಸ್ ಇಲಾಖೆಯ ನೆರವನ್ನು ತೆಗೆದುಕೊಂಡು ಮನೆ ಒಡೆಯುವಾಗ ಪೋಲೀಸ್ ಇಲಾಖೆಯವರೂ ಹೇಳುತ್ತಿದ್ದರು, ಮನೆ ಒಡೆಯುವುದಕ್ಕೆ ನಮಗೂ ಮನಸ್ಸಿಲ್ಲ ಎಂದು ಹೇಳುತ್ತಿದ್ದರು, ಅವರ ಕಣ್ಣಿನಲ್ಲೂ ಸಹ ನೀರು ಬಂತು, ಅವರೂ ಕೂಡಾ ಹ್ಯೂಮನ್ ಬೀಇಂಗ್ಸ್ ಎಂಜಿನಿಯರ್‌ಗಳೂ ಕೂಡಾ ಮನೆ ಒಡೆಯುವುದಕ್ಕೆ ನಮ್ಮಿಂದ ಆಗುವುದಿಲ್ಲ ಎಂದರು. ಆ ಮಟ್ಟಕ್ಕೆ ಬಂದರು, ಸಧ್ಯಕ್ಕೆ ಮನೆ ಒಡೆಯುವುದನ್ನು ನಿಲ್ಲಿಸಿ, ನಾವು ಚಂದ್ರಶೇಖರ್ ಅವರ ಹತ್ತಿರ ಮಾತನಾಡುತ್ತೇವೆ ಎಂದು ಹೇಳಿದೆವು, ಅವತ್ತು ಮಂತ್ರಿಮಂಡಲದ ಸಭೆ ಇತ್ತು, ಅವರು ಸಿಗಲಿಲ್ಲ ಸರಕಾರಕ್ಕೆ ಬೇರೆ ರೀತಿಯಲ್ಲಿ ನಾವು ತಿಳಿಸಿದೆವು ಮಧ್ಯಾಹ್ನ ಬಂದು ಹೇಳಿಕೆ ಕೊಟ್ಟು, ಪುನಃ ಮನೆ ಒಡೆಯುವುದಕ್ಕೆ ಪ್ರಾರಂಭ ಮಾಡಿದರು. ಆಮೇಲೆ ಹೈಕೋರ್ಟಿಗೆ ಕಳುಹಿಸಿ ಸ್ಟೇ ಮಾಡಿಸಬೇಕಾಯಿತು, ಈ ವಿಚಾರವನ್ನು ತಮ್ಮ ಗಮನಕ್ಕೆ ಏತಕ್ಕೆ ತರುತ್ತೇನೆ ಎಂದರೆ, ಸರಕಾರದವರು ಮನೆಗಳನ್ನು ಕಟ್ಟಿಸತಕ್ಕ ವಿಚಾರದಲ್ಲಿ ಯಾವ ಶಕ್ತಿಯನ್ನು ಹಣಕಾಸಿನ ದೃಷ್ಟಿಯಿಂದ ಕಳೆದುಕೊಂಡರೋ, ಅವರಿಗೆ ಮನೆಗಳನ್ನು ಒಡೆಯುವುದಕ್ಕೆ ಶಕ್ತಿಬರುವುದಕ್ಕೆ ಸಾಧ್ಯವಿಲ್ಲ. ಈ ಕಾರ್ಯಕ್ರಮವನ್ನು ತಕ್ಷಣ ನಿಲ್ಲಿಸಬೇಕು. ಮನೆಗಳನ್ನು ಕಾನೂನಿಗೆ

ವಿರುದ್ಧವಾಗಿ ಕಟ್ಟಿದ್ದರೆ ಏನು ಮಾಡಬೇಕು ಎಂದರೆ. ರಸ್ತೆಯಲ್ಲಿ ಅಡ್ಡ ಬಂದಿದ್ದರೆ ಆ ಮನೆಗಳನ್ನು ತೆಗೆದು ಅವರಿಗೆ ಸೈಟ್ ಕೊಡಬೇಕು, ಉಳಿದ ಕಡೆ ಏತಕ್ಕೆ ಮನೆಗಳನ್ನು ನೀವು ಒಡೆಯುತ್ತೀರಿ ?

ಮಾನ್ಯ ಸಭಾಧ್ಯಕ್ಷರೇ, ಸರಕಾರದವರು ಅರ್ಬನ್ ಲ್ಯಾಂಡ್ ಟ್ಯಾಕ್ಸ್ ಹಾಕಿದ್ದಾರೆ. ಇವತ್ತು ಮುನಿಸಿಪಲ್ ಏರಿಯಾದಲ್ಲಿ ಹಾಕಿರತಕ್ಕದ್ದು ಬಹಳ ಅನ್ಯಾಯ. ಜನಸಾಮಾನ್ಯರು ಬಡವರು ಮನೆ ಕಟ್ಟಿಕೊಳ್ಳಬೇಕೆಂಬ ದೃಷ್ಟಿಯಿಂದ ಸೈಟ್‌ಗಳನ್ನು ಇಟ್ಟುಕೊಂಡಿರುತ್ತಾರೆ. ಈ ಸೈಟ್‌ಗಳನ್ನು ಸ್ವಂತಕ್ಕೆ ಇಟ್ಟುಕೊಂಡಿರುತ್ತಾರೋ ಅಥವಾ ಮಾರಾಟ ಮಾಡಲಿಕ್ಕೆ ಇಟ್ಟುಕೊಂಡಿರುತ್ತಾರೋ ಎಂಬ ವಿಚಾರ ಮಾಡಿದೆ, ಸಡನ್ ಆಗಿ ತೆರಿಗೆ ಹಾಕಿದ್ದೀರಿ.

ಶ್ರೀ ಹೆಚ್. ಡಿ. ದೇವೇಗೌಡ.—ಯಾರಾದರೂ ಬೋಗಸ್ ನೇಮ್ಸ್‌ನಲ್ಲಿ ಸೈಟ್ ತೆಗೆದು ಕೊಂಡಿದ್ದರೆ, ಅದನ್ನು ಡಿಸ್ಕರೇಜ್ ಮಾಡುವುದಕ್ಕೆ ಈ ರೀತಿ ತೆರಿಗೆ ಹಾಕಿರುವುದು.

ಶ್ರೀ ಎಸ್. ಬಂಗಾರಪ್ಪ.—ನೀವು ಆ ವಿಚಾರವನ್ನು ಇಲ್ಲಿ ಬರೆದಿಲ್ಲವಲ್ಲ. ಅದಕ್ಕೆ ನಾನು ಹೇಳಿದ್ದು, ಯಾರಾದರೂ ಬೇನಾಮಿ ಟ್ರಾನ್ಸ್‌ಸ್ಯಾಕ್ಷನ್ ಮಾಡಿದರೆ, ಬೇರೆಯವರ ಹೆಸರಿನಲ್ಲಿ ತೆಗೆದು ಕೊಂಡರೆ ಅದನ್ನು ಡಿಸ್ಕರೇಜ್ ಮಾಡುವುದಕ್ಕೆ ತೆರಿಗೆ ಹಾಕಿದ್ದೇವೆ ಎಂದರೆ ಅದನ್ನು ನಾನು ಒಪ್ಪುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮುಂದೆ ಬೆಲೆ ಬಾಳುತ್ತದೆ ಎಂದು ಕೆಲವರು ಬೋಗ್ಸ ನೇಮ್ಸ್‌ನಲ್ಲಿ ಸೈಟ್ ತೆಗೆದುಕೊಂಡು ಇಟ್ಟುಕೊಳ್ಳುತ್ತಾರೆ, ಅದನ್ನು ತಡೆಗಟ್ಟುವುದಕ್ಕೆ ಮಾಡಿರುವುದು.

ಶ್ರೀ ಎಸ್. ಬಂಗಾರಪ್ಪ.—ಅದನ್ನು ಎಲ್ಲಿ ಬರೆದಿದ್ದೀರಿ. ದೇವೇಗೌಡರ ಮನಸ್ಸಿನಲ್ಲಿ ಏನೋ ಒಂದು ಇದೆ, ತಮ್ಮ ಮನಸ್ಸಿನಲ್ಲಿ ಇದ್ದಹಾಗೆ ಅವರು ಹೇಳಿದ್ದಾರೆ. ಹೊಳೆನರಸೀಪುರ ಮುನಿಸಿಪಾಲಿಟಿ ಒಳಗಿರತಕ್ಕಂಥ ಜಾಗಗಳಿಗೂ ಟ್ಯಾಕ್ಸ್ ಬೀಳುತ್ತದೆ. ಬೋಗಸ್ ನೇಮ್ಸ್‌ನಲ್ಲಿ ಇರುವುದಕ್ಕೆ ಮಾತ್ರ ಟ್ಯಾಕ್ಸ್, ಬೇರೆಯವರಿಗೆ ಇಲ್ಲ ಎಂದು ಹೇಳಿದರೆ ನೀವು ಸಿಕ್ಕಿಹಾಕಿ ಕೊಳ್ಳುತ್ತೀರಿ.

ಶ್ರೀ ಹೆಚ್. ಡಿ. ದೇವೇಗೌಡ.—ಇದರಲ್ಲಿ ಹಾಗೆ ಬರೆಯುವುದಕ್ಕೆ ಆಗುವುದಿಲ್ಲ. ಹಾಗೆ ಬರೆದರೆ, ಅದನ್ನು ಕೋರ್ಟ್‌ನಲ್ಲಿ ಕೊಶ್ಚನ್ ಮಾಡಿದರೆ, ಅದು ಬಿದ್ದುಹೋಗುತ್ತದೆ. ಅದು ಇಂಪ್ಲೈಡ್.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಇಂಪ್ಲೈಡ್ ಬರುವುದಿಲ್ಲ. ಕಾನೂನು ಮಾಡುವವರು ತಾವು, ಟ್ಯಾಕ್ಸ್ ಹಾಕುವವರು ತಾವು, ಹಣ ವಸೂಲು ಮಾಡುವವರು ನೀವು. ಎಲ್ಲೆಲ್ಲಿ ಸಣ್ಣ ಪುಟ್ಟ ಮುನಿಸಿ ಪಾಲಿಟಿಗಳು ಇವೆ, ಅಲ್ಲಿ ಈ ಖಾಲಿ ಜಾಗಗಳು ಇದ್ದರೆ, ತಕ್ಷಣ ಅದರ ಮೇಲೆ ಹಾಕಿರುವ ತೆರಿಗೆಯನ್ನು ಕೈಬಿಟ್ಟಿದ್ದೇವೆ, ರಿಲೀಫ್ ಕೊಟ್ಟಿದ್ದೇವೆ ಎಂದು ನೀವು ಉತ್ತರ ಕೊಡಬೇಕು. ಈ ರೀತಿ ಹೇಳದಿದ್ದರೆ ಬಹಳ ಕಷ್ಟವಾಗುತ್ತದೆ. ಯಾರಾದರೂ ಜಾಗ ತೆಗೆದುಕೊಂಡು, ಹಣ ಮಾಡುವ ದೃಷ್ಟಿಯಿಂದ ಹಾಗೆ ಬಿಟ್ಟುಕೊಂಡಿದ್ದರೆ ಅವರ ಮೇಲೆ ಟ್ಯಾಕ್ಸ್ ಹಾಕಿ ಬೇಡ ಎಂದು ಹೇಳುವುದಿಲ್ಲ. ಈಗ ನಮ್ಮ ಸೊರಬ ಮುನಿಸಿಪಾಲಿಟಿ ಇದೆ, ಇದು ಈಗ ಮಂಡಲ್ ಪಂಚಾಯತ್ ಆಗಿದೆ, ಅದೇ ರೀತಿ ಹಿರೇಕೆರೂರು ಮುನಿಸಿಪಾಲಿಟಿ ಇದೆ,

ಅಧ್ಯಕ್ಷರು.—ಅದೂ ಈಗ ಮಂಡಲ್ ಆಗಿದೆ.

ಶ್ರೀ ಎಸ್. ಬಂಗಾರಪ್ಪ.—ಸಣ್ಣ ಪುಟ್ಟ ಮುನಿಸಿಪಾಲಿಟೀಸ್, ಮುನಿಸಿಪಲ್ ಏರಿಯಾಸ್ ಏನಿದೆ ಅಲ್ಲಿ ಯಾವ ಅನುಕೂಲತೆಗಳೂ ಇಲ್ಲ, ಅಂತಹ ಕಡೆ ತೆಗೆದುಕೊಂಡು ಹೋಗಿ, ನೀವು ಖಾಲಿ ಜಾಗದ ಮೇಲೆ ತೆರಿಗೆ ಹಾಕಿದರೆ ಅದು ಅನ್ಯಾಯ,

ಆಮೇಲೆ ೨೫ ಪರ್ಸೆಂಟ್ ಎಯಿಡ್ ಏನು ತಾವು ಕಟ್ ಮಾಡುತ್ತೀರಿ ಇದರಿಂದ ಗ್ರ್ಯಾಂಟೆನ್ನೈಡ್ ಇನ್‌ಸ್ಟಿಟ್ಯೂಟ್ಸ್‌ಗೆ, ಅನೇಕ ಗ್ರ್ಯಾಂಟೆನ್ನೈಡ್ ಸಂಘ ಸಂಸ್ಥೆಗಳಿಗೆ, ಗ್ರ್ಯಾಂಟೆನ್ನೈಡ್‌ನ್ನು ನಂಬಿಕೊಂಡ ನಡೆಸುತ್ತಿದ್ದಂತಹ ಸಂಸ್ಥೆಗಳಿಗೆ. ತೊಂದರೆಯಾಗಿದೆ, ಅವರು ಹರಿಜನ ಮತ್ತು ಗಿರಿಜನರಿರಬಹುದು, ಹಿಂದುಳಿದವರ್ಗದವರು ಇರಬಹುದು, ಇವರು ನಡೆಸುತ್ತಿರುವಂತಹ ಸಂಸ್ಥೆಗಳಿಗೆ ೨೫ ಪರ್ಸೆಂಟ್ ಗ್ರ್ಯಾಂಟೆನ್ನೈಡ್ ಕಟ್ಟು ಮಾಡತಕ್ಕಂಥ ವಿಚಾರದಿಂದ ದೊಡ್ಡ ಪೆಟ್ಟು ಅದರಲ್ಲೂ ಶಿಕ್ಷಣ ಸಂಸ್ಥೆಗಳ ಮೇಲೆ ಬೀಳುತ್ತದೆ. ಆಮೇಲೆ ತಾಳಿ ಭಾಗ್ಯ ಯೋಜನೆಯನ್ನು ತಾವು ಕೈ ಬಿಟ್ಟಿದ್ದೀರಿ. ತಾಳಿ ಬಿಡಿಸಿ ಅವರಿಗೆ ಹೊಸ ಯೋಜನೆಯನ್ನು ಮಾಡುತ್ತೇವೆಂದು ಹೇಳಿದ್ದೀರಿ. ನಾನು ಹಿಂದೆ ತಡೆಯಲಾರದೆ ಒಂದು ಮಾತು ಹೇಳಿದ್ದೆ, ಅದೇನೆಂದರೆ ತಾಳಿ ಕೊಟ್ಟು ಮಕ್ಕಳು ಮಾಡಿಸಿ ಅವರು ಎಲ್ಲಾ ಕಡೆ ಸುತ್ತಾಡಿ

ಕೊಂಡಿರಲಿ ಎಂದು, ನಿಮ್ಮ ಕೈಯಲ್ಲಿ ಈ ಯೋಜನೆ ನಡೆಸುವುದಕ್ಕೆ ಆಗುವುದಿಲ್ಲ. ನಾನು ನಮ್ಮ ಕ್ಷೇತ್ರದಲ್ಲಿ ಸುಮಾರು ೯ ವರ್ಷಗಳಿಂದ ಮದುವೆ ಮಾಡಿಸುತ್ತಿದ್ದೇನೆ. ನಾನು ಶ್ರೀಮಂತ ಆದ್ದರಿಂದ ಮಾಡಿಸುತ್ತಿದ್ದೇನೆಂದು ಅಲ್ಲ. ಇದೊಂದು ಬಡವರ ಯೋಜನೆ, ಆದರೆ ಅದು ಯಾರಿಗೆ ಸಿಗಬೇಕು ಅವರಿಗೆ ಮಾತ್ರ ಸಿಗಬೇಕು. ತಾಳಿಭಾಗ್ಯ ಯೋಜನೆಯಿಂದ ಸಾವಿರಾರು ಬಡಜನರಿಗೆ ಉಪಯೋಗವಾಗುತ್ತದೆ ನಿಜ. ಆದರೆ ಇವತ್ತು ಆ ಯೋಜನೆ ತಾಳಿ ಒಂದು ಕಡೆ ದಾರ ಒಂದು ಕಡೆ ಹೋಗಿದೆ.

ಶ್ರೀ ಹೆಚ್, ಡಿ ದೇವೇಗೌಡ.—ಈ ಸ್ಕೀಮ್‌ನ್ನು ಮಾಡಬೇಕೆಂದು ಹೇಳಿದವನು ನಾನೇ, ನಾನು ಜನತಾ ಪಕ್ಷದ ಅಧ್ಯಕ್ಷನಾಗಿದ್ದಾಗ ತಾಳಿ ಭಾಗ್ಯ ಯೋಜನೆ, ಗಂಗಾ ಕಲ್ಯಾಣ, ಸೇತು ಬಂಧನ ಇತ್ಯಾದಿ ಯೋಜನೆಗಳನ್ನು ಮಾಡಿಸಿದವನು ನಾನು. It is my own scheme when I was the Party President. ನಮ್ಮ ದೇಶದಲ್ಲಿ ಇವತ್ತು ಜೀತಪದ್ಧತಿಯನ್ನು ನಿರ್ಮೂಲನ ಮಾಡತಕ್ಕಂಥ ಪರಿಸ್ಥಿತಿಯಲ್ಲಿ ಇದ್ದೇವೆ. Of course that was a scheme that was announced during the emergency ಇದರ ಬಗ್ಗೆ ಯಾರಿಗೂ ತಾತ್ವಿಕವಾಗಿ ಭಿನ್ನಾಭಿಪ್ರಾಯವಿಲ್ಲ. ಮದುವೆಗೆ ಬಂದಿರತಕ್ಕಂಥ ಮಗ ಅಥವಾ ಮಗಳು ಇದ್ದರೆ ಮದುವೆ ಹಣಕ್ಕಾಗಿ ಬೇರೆಯವರ ಮನೆಯಲ್ಲಿ ಜೀತಕ್ಕೆ ಇರಬೇಕಾಗುತ್ತದೆ. ನಾವೆಲ್ಲ ಹಳ್ಳಿಯ ಬ್ಯಾಕ್‌ಗ್ರೌಂಡ್ ನಿಂದ ಬಂದವರಾದ್ದರಿಂದ ನಮಗೆ ಆ ಬಗ್ಗೆ ಚೆನ್ನಾಗಿ ಗೊತ್ತು. ಅದ್ದರಿಂದಲೇ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ ಮಾಡಿಸಿದಂತಹ ಯೋಜನೆಗಳು ಇವು. ಹಳ್ಳಿಯಲ್ಲಿ ತನ್ನ ಮಗಳ ಮದುವೆಗೆ ಬೇಕೆಂದು ೫೦೦–೬೦೦ ರೂಪಾಯಿಗಳಿಗೆ ನಮ್ಮನಿಮ್ಮಂತಹವರಮನೆಯಲ್ಲಿ ಜೀತಕ್ಕೆ ಆ ಹೆಣ್ಣು ಮಗಳ ತಂದೆ ಇರಬೇಕಾಗುತ್ತದೆ. ಜೀತಪದ್ಧತಿ ನಿರ್ಮೂಲನ ಬರೀ ಕಾಗದದ ಮೇಲೆ ಮಾತ್ರ ಇದೆ ಇನ್ ಪ್ರಾಕ್ಟೀಸ್ ಅದು ಬಂದಿಲ್ಲ. ಎಲ್ಲಾ ಬಡವರ ಮನೆಗಳಲ್ಲಿ ಈ ಪರಿಸ್ಥಿತಿ ಇದೆ. ಆದ್ದರಿಂದ ತಾಳಿ ಭಾಗ್ಯಯೋಜನೆ ಅವಶ್ಯಕವಾಗಿ ಬೇಕಾಗಿತ್ತು. ಈಗ ಧರ್ಮ ಧರ್ಮಸ್ಥಳದಲ್ಲಿ ಶ್ರೀ ವಿರೇಂದ್ರ ಹೆಗಡೆಯವರು ವರ್ಷಕ್ಕೆ ಸಾವಿರಾರು ಮದುವೆಗಳನ್ನು ಮಾಡುತ್ತಾರೆ, ಅದೇ ರೀತಿ ಅನೇಕ ಮಠಾದಿಪತಿಗಳು ಮದುವೆಗಳನ್ನು ಮಾಡಿಸುತ್ತಾರೆ, ಅದೇ ರೀತಿ ಮಾನ್ಯ ಬಂಗಾರಪ್ಪನವರು ಮಾಡುತ್ತಿರಬಹುದು, It is a thing for which anybody can compliment. I sincerely thought over that. ಈ ದೃಷ್ಟಿಯಿಂದಲೇ ನಾವು ತಾಳಿ ಭಾಗ್ಯ ಯೋಜನೆಯನ್ನು ಜಾರಿಗೆ ತಂದೆವು. ಈ ಯೋಜನೆಗೆ ವರ್ಷಕ್ಕೆ ಸುಮಾರು ೩೦–೪೦ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿಸುತ್ತಿರಬಹುದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಅದಿರಲಿ, ಇನ್ನು ಭಾಗ್ಯ ಜ್ಯೋತಿ ಯೋಜನೆ ಜಾರಿಗೆ ತಂದಿದ್ದು ನಮ್ಮ ಕಾಂಗ್ರೆಸ್ ಸರ್ಕಾರ.

ಶ್ರೀ ಕೆ. ಹೆಚ್. ಪಾಟೀಲ್.—ನೀವು ತಾಳಿ ಭಾಗ್ಯ ಯೋಜನೆ ಬಿಡುತ್ತೇವೆಂದು ಹೇಳಿದ್ದರೆ ಇನ್ನು ಅನೇಕ ಯೋಜನೆಗಳನ್ನು ಬಿಡಿ ಎಂದು ನಾವು ಹೇಳುತ್ತಿದ್ದೆವು. ಬಿಡುವ ಬಗ್ಗೆ ನಮಗೆ ಒಂದು ಮಾತೂ ತಾವು ಹೇಳಲಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ವಿರೋಧಪಕ್ಷದ ನಾಯಕರವರು ಒಂದು ಬ್ಯಾಕ್‌ಗ್ರೌಂಡ್ ಇಟ್ಟು ಹೇಳಿದರು ಅದಕ್ಕೆ ಕೈಬಿಟ್ಟಿರಬಹುದು.

ಶ್ರೀ ಎಸ್. ಬಂಗಾರಪ್ಪ.—ಭಾಗ್ಯ ಜ್ಯೋತಿಯೋಜನೆಯನ್ನು ನಮ್ಮ ಸರ್ಕಾರ ಜಾರಿಗೆ ತಂದಿತು. ಸಮಾಜದಲ್ಲಿರತಕ್ಕಂಥ ದುರ್ಬಲವರ್ಗದವರಿಗೆ ಮನೆಗೊಂದು ದೀಪ ಕೊಟ್ಟು ಕರೆಂಟ್ ಕೊಟ್ಟೆವು ಆದರೆ ನೀವು ಬಂದ ಮೇಲೆ ಏನು ಮಾಡಿದಿರಿ ಎಂದರೆ ಆ ಜನರಿಗೆ ಎಲ್ಲಾ ಕರೆಂಟ್ ಬಿಲ್ ಕೊಟ್ಟು ಹಣ ಕಟ್ಟಿ ಎಂದು ಹೇಳಿದಿರಿ, ಇಲ್ಲದಿದ್ದರೆ ದೀಪ ತೆಗೆದು ಕರೆಂಟ್ ನಿಲ್ಲಿಸುತ್ತೇವೆಂದು ಹೇಳಿದ್ದೀರಿ, ನಮ್ಮ ಸರ್ಕಾರ ಕರೆಂಟ್ ಕೊಟ್ಟಿತು ನಿಮ್ಮ ಸರ್ಕಾರ ಅದನ್ನು ಕಿತ್ತುಹಾಕುತ್ತಾ ಬಂದಿದೆ.

೬–೩೦ ಪಿ.ಎಂ.

ಇಂದು ಸಂಪೂರ್ಣವಾಗಿ ಭಾಗ್ಯಜ್ಯೋತಿ ಕಾರ್ಯಕ್ರಮ ಹೊರಟುಹೋಗಿದೆ. ಸ್ವಾಮಿ ಈ ನಿಮ್ಮ ಬಜೆಟ್ ನಿಜವಾದ ಬಜೆಟ್ ಅಲ್ಲ. ಯುವಕರ ಗತಿ ಇವತ್ತು ಏನಾಗಿದೆ ? ಅವರುಗಳಿಗಾಗಿ ಯಾವ

ಅನುಕೂಲತೆಗಳನ್ನು ಈ ಬಜೆಟ್‌ನಲ್ಲಿ ಇಟ್ಟಿದ್ದೀರಿ ? ಮಹಿಳೆಯರ ಬಗ್ಗೆ ಈ ಬಜೆಟ್‌ನಲ್ಲಿ ಏನು ಇಟ್ಟಿದ್ದೀರಿ ? ಸ್ಟೈಫೆಂಡರಿಯಲ್ಲಿ ಕೆಲಸ ಮಾಡುತ್ತಿರುವ ಯುವಕರಿಗೆ ೫೦ ರೂಪಾಯಿಗಳನ್ನು ಜಾಸ್ತಿ ಮಾಡಿರುವುದನ್ನು ಬಿಟ್ಟರೆ ಬೇರೆ ಏನೂ ಯುವಕರಿಗಾಗಿ ನೀವು ಮಾಡಿಲ್ಲ. ಇನ್ನು ಕೊನೆಯದಾಗಿ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಶೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಶೆಡ್ಯೂಲ್ ಟ್ರೈಬ್ ಕಾರ್ಪೊರೇಷನ್, ಹಾಗೂ ಮೈನಾರಿಟೀಸ್ ಕಾರ್ಪೊರೇಷನ್‌ಗಳ ಗತಿ ಇವತ್ತು ಏನಾಗಿದೆ. ಈ ಕಾರ್ಪೊರೇಷನ್‌ಗಳ ಬಗ್ಗೆ ಒಂದು ಮಾತು ಆಡಿದ್ದೀರಾ ? ಶೆಡ್ಯೂಲ್ ಕ್ಯಾಸ್ಟ್ ಮತ್ತು ಟ್ರೈಬ್ಸ್ ಜನಾಂಗದವರಿಗೆ ಈ ಬಜೆಟ್‌ನಲ್ಲಿ ಏನಾದರೂ ಅನುಕೂಲಗಳನ್ನು ಕಲ್ಪಿಸಿಕೊಟ್ಟಿದ್ದೀರಾ ? ಸಮಾಜದಲ್ಲಿರುವ ಇತರ ದುರ್ಬಲ ವರ್ಗದ ಜನರಿಗಾಗಿ ಹಣ ಇಟ್ಟಿದ್ದೀರಾ ? ಸಂಪೂರ್ಣವಾಗಿ ದಿವಾಳಿ ಎದ್ದೋಗಿರುವ ನಿಮ್ಮ ಸರ್ಕಾರ ದುರ್ಬಲವರ್ಗದವರಿಗೆ ಹಣ ಇಡುವುದಕ್ಕೆ ಆಗುತ್ತದೆಯೇ ? ಅಲ್ಪ ಸಂಖ್ಯಾತರುಗಳ ಬಗ್ಗೆ ಹಿಂದುಳಿದ ವರ್ಗಗಳವರ ಬಗ್ಗೆ ಯಾವ ಮಾತನ್ನೂ ಈ ಬಜೆಟ್‌ನಲ್ಲಿ ಹೇಳಿಲ್ಲ. ಕರ್ನಾಟಕ ರಾಜ್ಯದಲ್ಲಿ ನಿಮ್ಮ ಆಡಳಿತದಿಂದ ಸಂಪೂರ್ಣವಾಗಿ ಆರ್ಥಿಕ ವಿಫಲತೆ ಉಂಟಾಗಿದೆ. ಕರ್ನಾಟಕ ಸರ್ಕಾರವನ್ನು ಸಂಪೂರ್ಣವಾಗಿ ದಿವಾಳಿ ಮಾಡಿದ್ದೀರಿ. ನಮ್ಮ ರಾಜ್ಯದ ಟ್ರಜರಿಯು ರಾಜ್ಯದ ೨೦ ಜಿಲ್ಲೆಗೂ ಹಣವನ್ನು ಸಪ್ಲೈ ಮಾಡಬೇಕಾಗಿದೆ. ನಾವು ಆಡಳಿತಕ್ಕೆ ಬಂದರೆ ಎಲ್ಲವನ್ನೂ ಚೊಕ್ಕ ಮಾಡುತ್ತೇವೆಂದು ಹೇಳಿ ಆಡಳಿತಕ್ಕೆ ನೀವು ಬಂದಿರಿ. ನಿಜವಾಗಿ ನೀವು ಚೊಕ್ಕ ಮಾಡಿದ್ದೀರಿ. ಖಜಾನೆಯಲ್ಲಿರುವ ಪೂರ್ತಿ ಹಣವನ್ನೆಲ್ಲಾ ಕಸ ಗುಡಿಸಿ ತೆಗೆದು ಚೆನ್ನಾಗಿ ಚೊಕ್ಕ ಮಾಡಿದ್ದೀರಿ. ಈಗ ಆರ್ಥಿಕವಾಗಿ ಕಷ್ಟದಲ್ಲಿದ್ದೇವೆ ಎನ್ನುತ್ತ ಮಾತನ್ನು ಆಡಿ ರಾಮಕೃಷ್ಣ ಹೆಗಡೆಯವರು ಎರಡೂ ಕೈಗಳನ್ನು ಮೇಲಕ್ಕೆ ಎತ್ತಿ ಆಕಾಶಕ್ಕೆ ಮುಖ ಮಾಡಿ ನಿಂತಿರತಕ್ಕ ನಿಮ್ಮ ಪರಿಸ್ಥಿತಿಯನ್ನು ನೋಡಿದರೆ ನಿಜವಾಗಿ ನಮಗೆ ದುಃಖವಾಗವುದಿಲ್ಲ. ಏಕೆಂದರೆ ಜನತೆಯು ನಿಮಗೆ ಓಟು ಕೊಟ್ಟು ಮೋಸ ಹೋಗಿದ್ದಾರೆ ಅದಕ್ಕೆ ನೀವು ಸರಿಯಾಗಿ ಶಿಕ್ಷೆಯನ್ನು ಅನುಭವಿಸುತ್ತಿದ್ದೀರಿ. ಮಾನ್ಯ ದೇವೇಗೌಡರೇ ನೀವು ಅಕ್ಷಮ್ಯ ಅಪರಾಧವನ್ನು ಜನತೆಗೆ ಮಾಡಿದ್ದೀರಿ. ಅದಕ್ಕೆ ಜನತೆಯು ನಿಮ್ಮ ಬಳಿ ತಪ್ಪು ದಂಡ ವಸೂಲಿ ಮಾಡದೇ ಬಿಡುವುದಿಲ್ಲವೆಂಬ ಎಚ್ಚರಿಕೆಯನ್ನು ರೂಪದಲ್ಲಿ ಈ ಮಾತನ್ನು ಹೇಳಿ, ಇನ್ನು ಮುಂದಾದರೂ ನಿಮಗೆ ಜ್ಞಾನೋದಯವಾಗಿ ರಾಜ್ಯಕ್ಕೆ ಹಿತವಾಗಲೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಒಂದು ಪ್ರಕಟಣೆ ಇದೆ.

ANNOUNCEMENT

MR. CHAIRMAN.—I would like to make the following announcement.

1. Hon. members are hereby informed that the following persons who threw leaflets and sheuted slogans in the gallery today are guilty of having committed the contempt of the House.

Sriyuths.—

(1) K. S. Basavaraju

(2) Panchakshari

(3) G. Shivakumar

(4) N. S, Sidaramaiah

(5) S. Nagakumar

The passes were issued to them on the recommendotion of the office of Deputy Chairman, Legislative Council.